
ಏಪ್ರಿಲ್ 16, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಪೆಕ್ಸ್‌ರಂಗ

"ಇತಿಹಾಸದ ಸವಾಲು ಎದುರಿಸಿದವರು ಗೆಲ್ಲುತ್ತಾರೆ"

- ವಿ.ಪಿ.ಸಿಂಗ್




ಕಾಂಗ್ರೆಸ್ ಪಕ್ಷದ ಗೊಂದಲಗಳು



ಜನತಾವಾಣಿಯಾಗಿ ರಾಷ್ಟ್ರಪತಿಗಳು

ಬೀದಿ ಬದಿಯ ಜನಕೆ ಬದುಕು ಕೊಡಿ



ಬೆಂಗಳೂರನ್ನು
ಸಿಂಗಾಪೂರ ಮಾಡುವ
ಕನಸು ಆಮೇಲಿರಲಿ

ಹಗಲುವೇಷ

ಚಿತ್ರವಿಮರ್ಶೆ

ಕಾಂಗ್ರೆ ಪಕ್ಷದ ಗೊಂದಲಗಳು

ಈ ವಾರದ ಪತ್ರಿಕೆಗಳಲ್ಲಿ ಕಂಡುಬಂದ ಕೆಲವು ತಲೆಬರಹಗಳು ಹೀಗಿವೆ: "ಬೆಲೆ ಏರಿಕೆ ವಿರುದ್ಧ ಏ. 13 ರಂದು ಕಾಂಗ್ರೆಸ್ ರ್‍ಯಾಲಿ", "ಮೇ 1 ರಿಂದ ವಿದ್ಯುತ್ ದರ ಶೇ 13 ರಷ್ಟು ಏರಿಕೆ; ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಕಡ್ಡಾಯ" "ಕೃಷಿ ಅಭಿವೃದ್ಧಿಯನ್ನು ನಿರ್ಲಕ್ಷಿಸಿಲ್ಲ" ಕೇಂದ್ರ ಸರ್ಕಾರದ ಬೆಲೆ ಏರಿಕೆಯ ವಿರುದ್ಧ ಪ್ರತಿಭಟಿಸುವ ಕಾಂಗ್ರೆಸ್‌ನ ರಾಜ್ಯ ಸರ್ಕಾರ ಸ್ವತಃ ತಾನೇ ಬೆಲೆ ಏರಿಸುತ್ತದೆ. ರೈತರು ಬಳಸುವ ವಿದ್ಯುತ್ ಬೆಲೆಯನ್ನು ವಿಪರೀತವಾಗಿ ಏರಿಸುವುದಲ್ಲದೆ ಮುಂದೆ ಮತ್ತಷ್ಟು ಏರಿಸಲು ಅವಕಾಶವಾಗುವಂತೆ ಮೀಟರ್ ಅಳವಡಿಕೆ ಮಾಡಬೇಕೆನ್ನುತ್ತಾರೆ. ಕೃಷಿ ಅಭಿವೃದ್ಧಿಗೆ ಇಂತಹ ಪೆಟ್ಟುಕೊಟ್ಟು ಮತ್ತೆ ಹೇಳುತ್ತಾರೆ ನಾವು ಮಾಹಿತಿ ತಂತ್ರಜ್ಞಾನಕ್ಕೆ ಮಾತ್ರ ಒತ್ತು ಕೊಟ್ಟು ಕೃಷಿ ಅಭಿವೃದ್ಧಿ ನಿರ್ಲಕ್ಷಿಸಿದ್ದೇವೆ ಎಂಬುದು ಸುಳ್ಳು" ಎಂದು.

ರಾಜ್ಯದಲ್ಲಿ ತಮಗೆ ಮತ ನೀಡಿದ ಬಡ ಜನವಿಭಾಗಗಳ ಬೆಂಬಲವನ್ನು ಉಳಿಸಿಕೊಳ್ಳಲು, ಏರಿರುವ ಪಡಿತರ ವಸ್ತುಗಳ ಬೆಲೆಯಿಂದ ಸಿಟ್ಟಿಗೇಳುವ ಬಡವರಿಗೆ ನಮ್ಮದೇನೂ ತಪ್ಪಿಲ್ಲ ಅದು ಕೇಂದ್ರದ್ದು - ಬಿಜೆಪಿಯ ಕೂಟದ ಸರ್ಕಾರದ್ದು ಎಂದು ತೋರಿಸಲು ಕಾಂಗ್ರೆ ಇಂದು ಪ್ರತಿಭಟನೆ ಮಾಡಬೇಕಾಗಿ ಬಂದಿದೆ. ಆ ಮೂಲಕ ಎಲ್ಲಾ ಸಹಾಯಧನ ರದ್ದು ಮಾಡಬೇಕೆನ್ನುವ, ಆಹಾರ, ರಸಗೊಬ್ಬರ ಸಹಾಯಧನವನ್ನು ಹಿಂತೆಗೆದುಕೊಂಡು ಅವು ಮಾರುಕಟ್ಟೆ ಬೆಲೆಯಲ್ಲಿ ಮಾರಾಟವಾಗಬೇಕೆನ್ನುವ ಐ.ಎಂ.ಎಫ್.-ವಿಶ್ವಬ್ಯಾಂಕ್ ಗಳ ಆಣತಿಯನ್ನು ಅಪ್ರತ್ಯಕ್ಷವಾಗಿ ವಿರೋಧಿಸುತ್ತಿದೆ. ಒಳ್ಳೆಯದು. ಆದರೆ ಅದೇ ಸಮಯದಲ್ಲಿ ಈಗಾಗಲೇ 'ಐಕ್ಯರಂಗ'ದಲ್ಲಿ ವಿವರಿಸಿದಂತೆ ಕೃಷ್ಣ ಮಂಡಿಸಿದ ಇತ್ತೀಚಿನ ಬಜೆಟ್‌ನಲ್ಲಿ ವಿಶ್ವಬ್ಯಾಂಕ್ ರಾಜ್ಯ ಸರ್ಕಾರಕ್ಕೆ ನೇರವಾಗಿ ನೀಡಿದ ಎಲ್ಲಾ ಆಜ್ಞೆಗಳನ್ನು ಶಿರಸಾವಹಿಸಿ ಪರಿಪಾಲಿಸುವ ಆಶ್ವಾಸನೆಯನ್ನು ನೀಡಿದ್ದಾರೆ - ವಿದ್ಯುತ್, ನೀರು, ಶಿಕ್ಷಣ ಶುಲ್ಕಗಳನ್ನು ಏರಿಸುವ ಸೂಚನೆಯ ಮೂಲಕ.

ವಿದ್ಯುತ್ ಬೆಲೆ ಏರಿಕೆ

ವಿದ್ಯುತ್ ದರಗಳನ್ನು ಶೇ 13 ರಷ್ಟು ಏರಿಸಬೇಕೆಂಬುದು ಅವರ ನಿರ್ಧಾರವಂತೆ. ನೀರಾವರಿ ಪಂಪ್‌ಸೆಟ್‌ಗಳಿಗೆ - ಐದು ಹೆಚ್.ಪಿ. ಮತ್ತು ಅದಕ್ಕಿಂತ ಕಡಿಮೆ ಇರುವುದಕ್ಕೆ ವರ್ಷಕ್ಕೆ ಒಂದು ಹೆಚ್.ಪಿ.ಗೆ 300 ರೂ. 5 ರಿಂದ ಹತ್ತು ಹೆಚ್.ಪಿ. ನಡುವಣ ಪಂಪ್‌ಸೆಟ್‌ಗಳಿಗೆ ಒಂದು ಹೆಚ್.ಪಿ.ಗೆ 500 ರೂ. ಏರಿಕೆಯಂತೆ. ಪ್ರತಿವರ್ಷ ಶೇ 13 ರಷ್ಟು ವಿದ್ಯುತ್ ದರ ಏರಿಕೆ ಮಾಡಬೇಕೆಂದು ಕೇಂದ್ರ ಸರ್ಕಾರದ, ಯೋಜನಾ ಆಯೋಗದ ನಿರ್ದೇಶನವಂತೆ. ಪಡಿತರ ವಸ್ತುಗಳ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡುವವರು ಕೇಂದ್ರ ಸರ್ಕಾರದ ಈ ನಿರ್ದೇಶನದ ವಿರುದ್ಧ ಏಕೆ ಪ್ರತಿಭಟಿಸುತ್ತಿಲ್ಲ? ಪ್ರತಿಭಟಿಸುವುದಿರಲಿ, ವಿದ್ಯುತ್ ದರ ಏರಿಕೆಯೂ ಸೇರಿದಂತೆ ಹಲವು ಜನವಿರೋಧಿ

ಸಂಪಾದಕೀಯ

ಅಂಶಗಳನ್ನೊಳಗೊಂಡ ಒಪ್ಪಂದವನ್ನು ಕೇಂದ್ರ ಸರ್ಕಾರದೊಡನೆ ಏಕೆ ಮಾಡಿಕೊಂಡಿದ್ದಾರೆ? ಕೇಂದ್ರ ಸರ್ಕಾರದೊಡನೆ ಇಂತಹ ಒಪ್ಪಂದವನ್ನು ಮಾಡಿಕೊಳ್ಳುವುದರಲ್ಲಿ ಕರ್ನಾಟಕ ಸರ್ಕಾರವೇ ಮೊದಲನೆಯದು. ಇಂತಹ ಆತುರ ಏಕೆ ತೋರಿಸಿದರು? ಸಾಲಕ್ಕಾಗಿ ವಿಶ್ವಬ್ಯಾಂಕ್‌ನಿಂದ, ಕೇಂದ್ರ ಸರ್ಕಾರದಿಂದ ಸಿಗುವ ಸಾಲಕ್ಕಾಗಿ.

ಹೀಗೆ ಕಾಂಗ್ರೆಸ್ ಪಕ್ಷ ಜನಬೆಂಬಲವನ್ನು ಉಳಿಸಿಕೊಳ್ಳಬೇಕಾದರೆ ಬೆಲೆ ಏರಿಕೆಯನ್ನು ವಿರೋಧಿಸಬೇಕು, ವಿಶ್ವಬ್ಯಾಂಕ್ ಸಾಲ, ಕೇಂದ್ರ ಸರ್ಕಾರದ ಸಾಲ ಬೇಕಾದರೆ ಜನ ಬೆಂಬಲ ಕಳೆದುಕೊಳ್ಳಲು ಕಾರಣವಾಗುವ ಬೆಲೆ ಏರಿಕೆ ಮಾಡಬೇಕು. ಹೀಗೆ ರಾಜ್ಯ ಕಾಂಗ್ರೆ ಗೊಂದಲಕ್ಕೆ ಬಿದ್ದಿದೆ. ಅದರಿಂದಾಗಿ ಒಂದು ವಿಷಯದಲ್ಲಿ ಒಂದು ರೀತಿ ಹೇಳಿಕೆ ಮತ್ತೊಂದು ವಿಷಯದಲ್ಲಿ ಅದಕ್ಕೆ ವಿರುದ್ಧ ವರ್ತನೆ.

ಅಖಿಲ ಭಾರತ ಮಟ್ಟದಲ್ಲಿಯೂ ಕಾಂಗ್ರೆಸ್ ಇಂತಹುದೇ ಗೊಂದಲವನ್ನು ಎದುರಿಸುತ್ತಿದೆ - ಆರ್ಥಿಕ ನೀತಿಗಳ ವಿಷಯದಲ್ಲಿಯೂ ಹಾಗೂ ಕೋಮುವಾದದ ವಿಷಯದಲ್ಲಿಯೂ. ಆರ್ಥಿಕ ನೀತಿಗಳನ್ನು ಜಾರಿಗೆ ತಂದುದಕ್ಕಾಗಿಯೇ ಅಧಿಕಾರವನ್ನು ಕಳೆದುಕೊಂಡಿತು. ಆತ್ಮವಿಶ್ವಾಸವನ್ನೇ ಕಳೆದುಕೊಂಡ ಅನೇಕ ಕಾಂಗ್ರೆಸ್ಸಿಗರು ಎತ್ತೆಂದರತ್ತ ಹಾರಿದ್ದಾರೆ. ಸೋನಿಯಾಗಾಂಧಿ ಪ್ರವೇಶದಿಂದ ಈ ಹಾರಾಟದ ಪ್ರಮಾಣ ತಗ್ಗಿತು. ಆದರೆ ತಮ್ಮ ಇಂದಿನ ಶಕ್ತಿ ಬಗ್ಗೆ ವಿವೇಚನೆ ಇಲ್ಲದೆ ಬಿಜೆಪಿಗೆ ನಾವಲ್ಲದೆ ಇನ್ನಾರು ಪ್ರತಿಸ್ಪರ್ಧಿಗಳು ಎಂದು ಆಕಾಶದಲ್ಲಿ ವಿಹರಿಸಿದರು. ಅದರ ಫಲವಾಗಿ ಇಂದು ಕೇವಲ 118 ಸ್ಥಾನಗಳ ಪಕ್ಷವಾಗಿ ಕುಗ್ಗಿಹೋಗಿದೆ. ಆದರೂ ಬುದ್ಧಿ ಕಲಿಯಲಿಲ್ಲ. ಹೊಸ ಆರ್ಥಿಕ ನೀತಿಯ ಜಾಡು ಬಿಡಲಿಲ್ಲ. ಬದಲಾಗಿ ಬಿಜೆಪಿ ಜೊತೆ ಸೇರಿ ವಿಮಾ ಖಾಸಗೀಕರಣ ಮಸೂದೆಯನ್ನು ಕಾನೂನಾಗಿಸಲು ಕೈಜೋಡಿಸಿದವು. ಎಡ ಪಕ್ಷಗಳ ವಿರೋಧದ ನಡುವೆ ಅದನ್ನು ಅಂಗೀಕರಿಸಿದ ವಿಕೃತ ಸಂತೋಷ ಅನುಭವಿಸಿತು. ಆದರೆ ನಂತರ ವಿಧಾನಸಭಾ ಚುನಾವಣೆಗಳಲ್ಲಿ ಅದರ ಪಾಡು ನೋಡಿದ ಮೇಲೆ ಕಾಂಗ್ರೆಸ್ಸಿಗರಲ್ಲಿ ಗೊಂದಲ ಮೂಡಿದೆ.

ಐ.ಎಂ.ಎಫ್. ನ ಈ ಆಜ್ಞಾಧಾರಕ ಪಿ.ವಿ.ನರಸಿಂಹರಾವ್ ನಾವು ಹೊಸ ಆರ್ಥಿಕ ನೀತಿ ಇಷ್ಟು ದೂರ ಕೊಂಡೊಯ್ಯಲು ಉದ್ದೇಶಿಸಿರಲಿಲ್ಲ. ಬಿಜೆಪಿ ಈಗ ಸಾರ್ವಜನಿಕ ವಲಯವನ್ನು ನಾಶ ಮಾಡಲು ಹೊರಟಿದೆ ಇತ್ಯಾದಿಯಾಗಿ ಲೇಖನ ಬರೆದಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆ ಅನುಭವಿಸಿದ ಸೋಲಿಗೆ ಕಾರಣ ಹುಡುಕಲು ನೇಮಿಸಿದ ಅಂಟೋನಿ ಸಮಿತಿ ಕಾಂಗ್ರೆ ನೀತಿಗಳು ಎಡಗಡೆಗೆ ಒಲೆಯಬೇಕು ಎಂದು ಶಿಫಾರಸು ಮಾಡಿದೆ(ಬಲ ಮತ್ತು ಎಡ ನಡುವಣ ಮಧ್ಯಮಾರ್ಗಿಯ ನೀತಿಯನ್ನು ಅನುಸರಿಸುತ್ತಾ ಬಂದಿದ್ದ ಕಾಂಗ್ರೆಸ್ ಹೊಸ ಆರ್ಥಿಕ ನೀತಿಯ ಸಂದರ್ಭದಲ್ಲಿ ಅದನ್ನು ಬಿಟ್ಟು ಬಲ ಮಾರ್ಗೀಯ ಆರ್ಥಿಕ ಪಥವನ್ನು ಅನುಸರಿಸತೊಡಗಿತ್ತು. ತಪ್ಪುದಾರಿಯನ್ನು ಕೈಬಿಟ್ಟು ಮಧ್ಯಮಾರ್ಗಕ್ಕೆ—ಮಧ್ಯಮಾರ್ಗ[illegible]ತ್ತ ಪಕ್ಕಕ್ಕೆ ಹಿಂತಿರುಗಬೇಕೆಂಬುದು ಅವರ ಆಶಯ - ಎಡಪಕ್ಷಗಳ ನೀತಿ ಅನುಸರಿಸಬೇಕೆಂದು ಅಭಿಪ್ರಾಯ ಪಡುತ್ತಿದ್ದಾರೆಂದು ತಪ್ಪು ತಿಳಿಯಬಾರದು). ಆದರೆ ಇವೆಲ್ಲಾ ಕೇವಲ ಸೂಚನೆ, ಅಭಿಪ್ರಾಯ ಶಿಫಾರಸು ಮಟ್ಟದಲ್ಲಿಯೇ ಇವೆ.

ಇಂತಹ ಮಾರ್ಗಕ್ಕೆ ಹಿಂದಿರುಗಲು ಹೈಟೆಕ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಬಯಸುತ್ತಾರೆಯೇ, ಮನಮೋಹನ ಸಿಂಗ್ ಏನನ್ನುತ್ತಾರೆ? ಸ್ವತಃ ಸೋನಿಯಾರವರ ಅಭಿಪ್ರಾಯವೇನು? ಇವೆಲ್ಲಾ ಮುಂದಿನ ದಿನಗಳಲ್ಲಿ ಇತ್ಯರ್ಥವಾಗಬೇಕಾದ ವಿಷಯಗಳು. ಹಾಗೆಯೇ ರಾಜ್ಯದಲ್ಲಿಯೂ ಕಾಂಗ್ರೆಸ್ ಮಂತ್ರಿಮಂಡಲ ಹಾಗೂ ಪಕ್ಷದಲ್ಲಿ ಈ ಹೈಟೆಕ್ ನೀತಿ ನಮ್ಮನ್ನು ಎಲ್ಲಿಗೆ ಕೊಂಡೊಯ್ಯಬಹುದು? ಅದರಲ್ಲಿ ಯಾರಿಗೆ ಎಷ್ಟು ಲಾಭ? ಯಾರಿಗೆ (ಯಾವ ಮಂತ್ರಿಗೆ) ಲಾಭ ದಕ್ಕುವುದಿಲ್ಲ ಎಂಬುದರ ಮೇಲೆ ಈ ಪ್ರಶ್ನೆ ಅವಲಂಬಿಸಿದೆ. ಒಟ್ಟಿನಲ್ಲಿ ಕಾಂಗ್ರೆಸ್ ಗೊಂದಲಕ್ಕೆ ಬಿದ್ದಿದೆ.

ದೇಶದಲ್ಲೆಲ್ಲಾ ನಾನು ಬಿಜೆಪಿಯ ಪ್ರಬಲ ಪ್ರತಿಸ್ಪರ್ಧಿ ಎಂದು ಬೊಬ್ಬೆ ಹೊಡೆದು ಅಲ್ಪಸಂಖ್ಯಾತರ, ಹಿಂದುಳಿದವರ ಬೆಂಬಲ ಗಳಿಸಿಕೊಂಡ ಕಾಂಗ್ರೆ ಈಗ ಪ.ಬಂಗಾಲದಲ್ಲಿ ಎಡರಂಗವನ್ನೆದುರಿಸಲು ತಮ್ಮ ಪಕ್ಷದ ರಾಜ್ಯ ಘಟಕದ ಒತ್ತಡಕ್ಕೊಳಗಾಗಿ ಬಿಜೆಪಿಯ ಜೊತೆ ಒಂದೇ ರಂಗ ಮಹಾಮೈತ್ರಿ ರಚಿಸಲು ಹೊರಟಿದೆ. ಇಡೀ ದೇಶದಲ್ಲಿ ಇದರ ಪರಿಣಾಮ ಏನಾಗಬಹುದು ಎಂಬ ಚಿಂತನೆ ಅವರನ್ನು ಮತ್ತಷ್ಟು ಗೊಂದಲಕ್ಕೆ ಕೆಡವಲಿದೆ.

ಕಾಂಗ್ರೆ ಪಕ್ಷ ಮತ್ತು ಅದರ ರಾಜ್ಯ ನಾಯಕರು ಇಂದು ಯಾರು ಹಿತವರು ತಮಗೆ ಎಂದು ನಿರ್ಧರಿಸಬೇಕಾಗಿದೆ. ತಮಗೆ ಮತ ನೀಡಿದ ಜನತೆಯ ಬೆಂಬಲವನ್ನು ಉಳಿಸಿಕೊಳ್ಳುವುದು ಮುಖ್ಯವೋ ಅಥವಾ ವಿಶ್ವಬ್ಯಾಂಕ್ ಬಹುರಾಷ್ಟ್ರೀಯ ಕಂಪನಿಗಳ ಆದೇಶ ಪಾಲಿಸುವುದು ಮುಖ್ಯವೋ ಎಂದು ತೀರ್ಮಾನಿಸಬೇಕಾಗಿದೆ. ಎಸ್.ಎಂ. ಕೃಷ್ಣರವರನ್ನು ಅವರು ಹಿಡಿದದ್ದೇ ದಾರಿ ಎಂದು ಕಣ್ಣು ಮುಚ್ಚಿ ಹಿಂಬಾಲಿಸಬೇಕೋ ಅಥವಾ ತಮ್ಮ ತಿಳುವಳಿಕೆ, ಅನುಭವ ಹಾಗೂ ಜನರ ಬೆಂಬಲದ ಪ್ರಶ್ನೆಯನ್ನು ಗಮನದಲ್ಲಿಟ್ಟು ಸಾಮೂಹಿಕ ನಿರ್ಧಾರ ತೆಗೆದುಕೊಳ್ಳುವಂತೆ ಮಾಡಬೇಕೋ ಎಂಬ ಗೊಂದಲವೂ ಇದರ ಭಾಗವಾಗಿ ಕಾಂಗ್ರೆ ನಾಯಕರನ್ನೂ ಕಾಡಲಿದೆ.

ಈ ಗೊಂದಲಗಳು ಜನಪರವಾಗಿ ವಾಲುವಂತೆ ಇತ್ಯರ್ಥವಾಗಬೇಕಾದರೆ ಜನತೆ ಹೊಸ ಆರ್ಥಿಕ ನೀತಿಗಳ ಬಗ್ಗೆ ಅದರ ಭಾಗವಾಗಿ ಕೈಗೊಳ್ಳುತ್ತಿರುವ ವಿದ್ಯುತ್ ದರ ಏರಿಕೆ, ನೀರು ದರ ಏರಿಕೆ ಮುಂತಾದ ಕ್ರಮಗಳ ವಿರುದ್ಧ ತನ್ನ ಅತೃಪ್ತಿಯನ್ನು ಬಹಿರಂಗವಾಗಿ ಚಳುವಳಿಗಳ ಮೂಲಕ ಸಾರಬೇಕು. ಆಗ ಏನನ್ನೂ ಎಣಿಸುತ್ತಿರುವ ಕಾಂಗ್ರೆಸೊಳಗಿನ ವ್ಯಕ್ತಿಗಳು, ಗುಂಪುಗಳು ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕಾದ ಒತ್ತಡಕ್ಕೆ ಒಳಗಾಗುತ್ತಾರೆ.

ಇತಿಹಾಸದ ಪುಟಗಳಿಂದ

ಮಹಿಳೆಯರ, ದಲಿತರ ಶಿಕ್ಷಣದ ಸ್ಥಿತಿ

20ನೆಯ ಶತಮಾನದ ಆರಂಭ ಕಾಲದಲ್ಲಿ ಶಾಲೆಗಳಲ್ಲಿದ್ದ ಜಾತೀಯತೆಯ ಬಗ್ಗೆ ರಾಷ್ಟ್ರಕವಿ ಕುವೆಂಪು ಹಾಗೂ ಸಿಪಿಐ(ಎಂ) ನೇತಾರ ಇ.ಎಂ.ಎಸ್.ನಂಬೂದರಿಪಾದ್‌ರವರ ಬಾಲ್ಯದ ನೆನಪುಗಳನ್ನು ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಈ ಸಂಚಿಕೆಯಲ್ಲಿ ಕರ್ನಾಟಕ ಭೂಗರ್ಭಶಾಸ್ತ್ರ ಮತ್ತು ಗಣಿ ಇಲಾಖೆಯ ನಿರ್ದೇಶಕರಾಗಿ ಅವರ ಅಧ್ಯಯನಗಳಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾನ್ಯತೆ ಗಳಿಸಿದ ಬಿ.ಪಿ.ರಾಧಾಕೃಷ್ಣರವರು ಈ ಶತಮಾನದ ಆರಂಭದ ಕಾಲದಲ್ಲಿ ಈ ಭಾಗದಲ್ಲಿ ಪ್ರಧಾನ ಜಾತಿಯಾದ ಒಕ್ಕಲಿಗರಲ್ಲಿ ಕೂಡ ಶಿಕ್ಷಣ ಬಯಸುತ್ತಿದ್ದ ಮಹಿಳೆಯರು ಎದುರಿಸಬೇಕಾದ ಒಂದು ತೊಡಕನ್ನು ವಿವರಿಸಿದ್ದಾರೆ. ತಮ್ಮ ತಂದೆ ಪುಟ್ಟಯ್ಯನವರ ಬಗ್ಗೆ ಬರೆದ ಜೀವನ ಚರಿತ್ರೆಯಲ್ಲಿ.

ಈ ಶತಮಾನದ 60-70 ರ ದಶಕಗಳಲ್ಲಿ ಕೂಡ ಶಿಕ್ಷಣ ಬಯಸಿದ ದಲಿತರು ಎದುರಿಸಬೇಕಾದ ಸ್ಥಿತಿಯನ್ನು ವಿವರಿಸಿದ್ದಾರೆ ದಲಿತ ಸಾಹಿತಿ ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಚರಿತ್ರೆಯಲ್ಲಿ.

ಶಾಲೆಯಲ್ಲಿ ಹರಿಜನರು.......

ಇವೆಲ್ಲ ಶಿಕ್ಷೆಗಳು ಯಾವ ಕಾರಣಕ್ಕಾಗಿ ಗೊತ್ತೇ? ನಾವು ಮನೆಯಲ್ಲಿ, ಹೇಳಿದ ಪಾಠ ಓದಿಕೊಂಡು ಬರಲಿಲ್ಲ ಎಂದಲ್ಲ. ನಮ್ಮ ಕೊಳಕುತನಕ್ಕಾಗಿಯಲ್ಲ. ಶಾಲೆಯಲ್ಲಿ ಪ್ರಾರ್ಥನೆಯಾಗುವುದಕ್ಕಿಂತ ಮುಂಚಿಯೇ, ನಾವು ಬಂದು ತರಗತಿಯ ಕಸ ಗುಡಿಸಬೇಕು. ಬೇಗನೆ ಬಂದು ಕಸ ಗುಡಿಸದಿದ್ದರೆ ಈ ಪರಿಯ ಶಿಕ್ಷೆ.

ನಮ್ಮ ಕೇರಿಯವರು ಒಟ್ಟು ತರಗತಿಯಲ್ಲಿ ನಾಲ್ಕು ಜನ. ದೇವಪ್ಪ, ಮಲ್ಲಪ್ಪ ಬಸವಂತಪ್ಪ ಮತ್ತು ನಾನು. ನಾಳೆ ಕಸದ ಪಾಳಿ ಯಾರದಿದೆ ಎನ್ನುವುದನ್ನು ಕರಿಹಲಗೆಯ ಮೇಲೆ ಬರೆಯಲಾಗುತ್ತಿತ್ತು. ನಮ್ಮ ಹೆಸರುಗಳನ್ನು ಕರಿಹಲಗೆಯ ಮೇಲೆ ಯಥಾಸ್ಥಿತಿಯಲ್ಲಿ ಬರೆಯಲು ಅವರು ಹೇಸುತ್ತಿದ್ದರೆಂದು ತೋರುತ್ತದೆ. ಹೀಗಾಗಿ ದೇವ್ಯಾ, ಮಲ್ಯಾ,ಬಸ್ಯಾ ಎಂದು ಹೆಸರನ್ನು ಮುಗುಚಿ ಬರೆಯುತ್ತಿದ್ದರು. ಹೆಸರು ಬರೆಯುವ ಕೆಲಸ ಮೊದಲು ಗುರೋತ್ತಮರೇ ಮಾಡುತ್ತಿದ್ದರು. ಅನಂತರ ಆ ಕೆಲಸ ತರಗತಿಯ ಮಂತ್ರಿವರ್ಯರಿಗೆ ವರ್ಗಾವಣೆ ಮಾಡಲಾಯಿತು. ಕಸಗುಡಿಸುವ ಕೆಲಸ ದಲಿತರಾದ ನಮ್ಮ ನಾಲ್ಕು ಜನಗಳಿಗೆ ಮಾತ್ರ ಸೀಮಿತವಾಗಿತ್ತು.

ನಾಲ್ಕು ಐದು ಜನ ಒಟ್ಟಿಗೆ ಕುಳಿತುಕೊಳ್ಳಬಹುದಾದ ಉದ್ದನೆಯ ಕಟ್ಟಿಗೆಯ ಹಾಸುಮಣೆಗಳಿದ್ದವು. ಇವುಗಳನ್ನು ಎತ್ತಿ ಕಸಗುಡಿಸುವುದೆಂದರೆ ತೊಂದರೆಯಾಗುತ್ತಿತ್ತು. ಜೊತೆಗೆ ಸಿಟ್ಟೂ ಬರುತ್ತಿತ್ತು. ಯಾಕೆಂದರೆ ಈ ಮಣೆಗಳು ಕುಳಿತುಕೊಳ್ಳಲು ನಮಗಿರಲಿಲ್ಲ. ನಾವು ನಾಲ್ಕು ಜನ ಕೊನೆಯಲ್ಲಿ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದವು. ಹೀಗಾಗಿ ಕುಳಿತುಕೊಳ್ಳಲು ನಮಗಿಲ್ಲದ ಆ ಮಣೆಗಳನ್ನು ಕಸಗುಡಿಸುವಾಗ ಎತ್ತಿ ನೆಲಕ್ಕೆ ಕುಕ್ಕುತ್ತಿದ್ದವು. ಯಾರಾದರೂ ನೋಡಿದರೆ, ಕೈ ಜಾರಿದವರಂತೆ ನಟಿಸುತ್ತಿದ್ದವು.

ಒಂದು ಬಾರಿ ನಾನು ಶಾಲೆಗೆ ಹೋಗಲಾರೆ ಎಂದು ಹಟ ಮಾಡಿದೆ. ಯಾಕೆ? ಎಂದು ಅಜ್ಜಿ ಪ್ರಶ್ನಿಸಿದಾಗ, ನಾ ಕೊಟ್ಟ ಕಾರಣ.

ಅವ್ರೆಲ್ಲ ಮಣೆಮ್ಯಾಗ ಕುಂದ್ರತಾರ
ನಮಗ ನೆಲದ ಮ್ಯಾಲಿ ಕುಂದ್ರಸ್ತಾರ
ನಾವಲ್ಲ್ಯಾ ಹೋಗುದಿಲ್ಲ.. ಎಂದಿದ್ದೆ.
ಅದಕ್ಕೆ ನನ್ನ ಅಜ್ಜಿ

ಕಟಗಿ ಮಣಿ ಏನ ಮಾಡುದು? ಕುಂತ್ರ ಆದು ನಡತೈತಿ, ನಿನಗೆ ಸಣ್ಣ ಕೌದಿ ಹೊಲ್ದ ಕೊಡ್ತಿನಿ, ಎಂದಳು ಅದು ನನಗೆ ಕೀಳಾಗಿ ಕಂಡದ್ದರಿಂದ ನಿರಾಕರಿಸಿದೆ.

ಹೊಸ ತಟ್ಟ ಕೊಡ್ತಿನಿ ತಗೊಂಡ ಹೋಗು, ಎಂದಳು (ತಟ್ಟು-ಕತ್ತರಿಸಿದ ಸಣಬಿನ ಚೀಲ)

ಒಪ್ಪಿಕೊಂಡು, ಮರುದಿನ ತಟ್ಟು ತೆಗೆದುಕೊಂಡು ಠೀವಿಯಿಂದ ಹೋಗಿ ಹಾಸಿಕೊಂಡು ಗೆಲುವಿನ ಮುಖದಲ್ಲಿ ಕುಳಿತಿದ್ದೆ. ಹಾಸು ಮಣೆಯ ಮೇಲೆ ಕುಳಿತುಕೊಳ್ಳುವ ಜನ ಇದನ್ನು ನೋಡಿ ಅವಕ್ಕಾಗುತ್ತಾರೆಂದು ಭಾವಿಸಿದ್ದೆ. ಆದರೆ ಅದದ್ದು ತದ್ವಿರುದ್ಧ. ಅವರೆಲ್ಲ ನನ್ನನ್ನು ನೋಡಿ ಅಪಹಾಸ್ಯ ಮಾಡಿ ಚಪ್ಪಾಳೆ ತಟ್ಟಿ ನಗತೊಡಗಿದರು.

ಅನ್ನ ಚೊಣ್ಣ ಹೊಲ್ಸ ಆಗತದಂತಲೇ, ಭಾರಿ ಚೊಣ್ಣ!

ಎಂದು ಹೇಳುತ್ತಿದ್ದರು ಆಗ ನನ್ನ "ದೊಗಲಂ ಬೊಗಲಂ ಕೊಳಕು ಚೊಣ್ಣ" ತಟ್ಟು ಎಲ್ಲದರ ಮೇಲೂ ಸಿಟ್ಟು ಬಂತು ಏನೂ ಮಾಡಲಾಗದೆ ಕಣ್ಣಲ್ಲಿ ನೀರು ತರಿಸಿತಷ್ಟೆ.

ಕರಿಹಲಗೆಯ ಮೇಲೆ ನನ್ನ ಹೆಸರನ್ನು ಮುಗುಚಿ ಬರೆಯುತ್ತಿರಲಿಲ್ಲ: ಹೆಸರು ಅರವಿಂದ ಎಂದಿರುವುದರಿಂದ ಅದು ಹೇಗೆ ಮುಗುಚಿ ಹೇಳಿದರೂ ಅವರಿಗೆ ತೃಪ್ತಿಯಾಗಿ ಕಂಡಿರಲಿಕ್ಕಿಲ್ಲ. ಅದಕ್ಕಾಗಿ ಅವರು ನನ್ನ ಅಡ್ಡ ಹೆಸರನ್ನು ಬಳಸುಕೊಳ್ಳುತ್ತಿದ್ದರು.

"ನಾಳಿನ ಕಸದ ಪಾಳಿ- ಮಾಲಕತ್ತಿ"

ಎಂದು ಬರೆಯುತ್ತಿದ್ದರು. ಕೆಲವೊಮ್ಮೆ "ಕತ್ತಿ" ಎಂದಷ್ಟೇ ಬರೆಯುವ ಮನಸ್ಸು ಮಾಡುತ್ತಿದ್ದರು.

ಹಾಗೆ ಬರೆದ ಹೆಸರನ್ನು ಒಮ್ಮೆ ತಿದ್ದುವ ಸಾಹಸವೂ ಮಾಡಿದ್ದೆ. ಆದರೆ ಅಂದಿನ ಅವತಾರವೇ ಬೇರೆಯಾಗಿತ್ತು. ನಮ್ಮೂರ ಪಕ್ಕದಲ್ಲಿಯೇ ಬಸರಕೊಡ ಜಾತ್ರೆ ಹೆಸರುವಾಸಿ. ನಮ್ಮ ಮನೆಯವರು ಅಲ್ಲಿಗೆ ಹೋಗುತ್ತಿದ್ದರು. ಅಂದು ನಾನು ಹೋಗಬೇಕಾಗಿತ್ತು. ಅದಕ್ಕಾಗಿ ಮಂತ್ರಿವರ್ಯರಿಗೆ ಹೇಳಿದ್ದೆ-" ನಾಳೆ ನಾನು ಜಾತ್ರೆಗಿ ಹೋಗ್ತೇನಿ ಅದ್ಕ ಇವತ್ತೊಂದ ದಿನ ಸಾಲಿ ಬಿಡಣ ಕಸಾ ಹೊಡಿತೀನಿ" ಎಂದೆ.

ಮುಂಚಿತವಾಗಿ ಕಸಗುಡಿಸುವ ವ್ಯವಸ್ಥೆ ಇಲ್ಲದೆ ಹೋದರೂ ಅಂದು ಗುರುಗಳ ಅನುಮತಿ ಪಡೆದು ಮಂತ್ರಿವರ್ಯ ಅವಕಾಶ ಕೊಟ್ಟಿದ್ದ. ಶಾಲೆ ಬಿಟ್ಟಿದ್ದರಿಂದ ತರಗತಿಯಲ್ಲಿ ಯಾರೂ ಇರಲಿಲ್ಲ. ನಾನೊಬ್ಬನೆ ಇದ್ದ. ಆಗ ಕರಿಹಲಗೆಯ ಮೇಲೆ ಹೆಸರು ಕಂಡದ್ದು. ಎದೆ ಹೊಡೆದುಕೊಳ್ಳುತ್ತಿದ್ದರೂ, ಗುರುಗಳ ಕುರ್ಚಿಯನ್ನು ಸರಿಸಿ, ಅದರ ಮೇಲೆ ನಿಂತು "ಮಾಲಕತ್ತಿ" ಎಂದು ಬರೆದುದನ್ನು ಅಲ್ಲಿಯ "ಕ" ಕಾರ ತೆಗೆದು"ಗ" ಕಾರ ಬರೆಯಲು ಹವಣಿಸುತ್ತಿದ್ದೆ. ಎಲ್ಲಿದ್ದರೋ, ಗುರೋತ್ತಮರು ತರಗತಿಯ ಒಳಗೆ ಬಂದರು. ನೋಡಿದವರೆ ಗೂಟದ ಮೇಲಿರುವ ಕಟ್ಟಿಗೆಯನ್ನು ಹಿರಿದರು. ಅವರನ್ನು ನೋಡಿದಾಕ್ಷಣವೇ ನನ್ನ ಜಂಘಾಬಲವೇ ಅಡಗಿದಂತಾಗಿ ನಡುಕ ಪ್ರಾರಂಭವಾಯಿತು. ಕೆಳಗಿಳಿದು "ಕತ್ತಿ" ಎಂದು ಬರೆದಿದ್ದಾರೆ ಎಂದು ವಿವರಣೆಯನ್ನು ಕೊಡುವುದರಲ್ಲಿಯೇ ಥಳಿಸುವುದಕ್ಕೆ ಪ್ರಾರಂಭಿಸಿದರು.

"ಕತ್ತಿ ಅಂತ ಬರದ್ರ ಏನಾಯ್ತು? ಗತ್ತಿ ಅಂತ ಮಾಡಾಕ ಹೋಗಿದ್ಯಾ? ಮಗಾ ಬರ್‍ಯಾಕ ಬಂತು ಅಂತ ತಿದ್ದಾಕ ಹೋಗ್ಯಾನ... ಕತ್ತಿ... ಕತ್ತಿನೇ... ಕತ್ತೆಲ್ಲರ ಕುದುರ್‍ಯಾಕ್ಕದೇನ?... ಕತ್ತಿಗೆಲ್ಲ ಯಾಕ ಬೇಕು ಹತ್ತಿಕಾಳ ನೀರ?..... ಎಂದು ಮನ ತುಂಬುವವರೆಗೆ ಹೊಡೆದರು. ಅನಂತರ ಅಳುತ್ತ ನನ್ನ ಅಂಗಿ ಕಳೆದು ಅವರ ಕುರ್ಚಿಯನ್ನು ಒರಸಿದ್ದು ಅಚ್ಚಳಿಯದ ನೆನಪು.

ಹರಿಜನರ ಕೇರಿಯಲ್ಲಿ ಓದು

ನನ್ನ ಓದಿನ ಆತ್ಮೀಯ ಸ್ಥಳವೆಂದರೆ "ಪದ್ಮಾವತಿಯ ಗುಡ್ಡ" ನಾನೊಬ್ಬನ ಓದಿನ ದಿನಗಳಲ್ಲಿ ಕೇರಿಯ ಸ್ನೇಹಿತರೆಲ್ಲ ನನಗೆ ಹಂಗಿಸುತ್ತಿದ್ದರು."ನಾಳೆ ಇಂವ ಚೌಕಟ್‌ನ್ಯಾಗ ಬರ್‍ತಾನಪ್ಪಾ" ಎನ್ನುತ್ತಿದ್ದರು. "ಮತ್ತೇನಪಾ ಚೌಕಟ್" ಎಂದೇ ಮಾತನಾರಂಭಿಸುತ್ತಿದ್ದರು. ಎಂದರೆ ಓದಿ ರ್‍ಯಾಂಕ್ ಬರ್‍ತಾನೆ. ಆಗ ಈತನ ಫೋಟೋ ಪತ್ರಿಕೆಯಲ್ಲಿ ಬರುತ್ತದೆಂದು ಗೇಲಿ ಮಾಡುತ್ತಿದ್ದರು. ಆದರೆ ಪ್ರತೀ ವರ್ಷ ಪಾಸಾಗುತ್ತಾ ಹೋದಾಗ ಅನಂತರ ಅವರು ನನ್ನ ಹಾದಿಯನ್ನೇ ತುಳಿದರು. ನನ್ನ ಹಿಂದೆ ನನ್ನ ಕೇರಿಯ ಜನ; ಕೇರಿಯ ಜನಗಳ ನಂತರ ಊರ ಜನವೇ ಪದ್ಮಾವತಿಯ ಗುಡ್ಡಕ್ಕೆ ಬರಲು ಪ್ರಾರಂಭಿಸಿದರು.

ಕಾಲೇಜಿನ ಪರೀಕ್ಷೆಯ ಓದು ಗಂಭೀರವಾಗಿ ಪ್ರಾರಂಭವಾಗುವುದು ಪರಿಕ್ಷೆ,ಝಿ ಒಂದು ಎರಡು ತಿಂಗಳು ಇದೆ ಎನ್ನುವಾಗ. ವಿದ್ಯುತ್ ದೀಪ ಕೇರಿಗೆ ಪ್ರವೇಶವಾಗಿತ್ತು. ಆದರೆ ಇನ್ನೂ ಯಾರ ಮನೆಯೊಳಗೂ ಪ್ರವೇಶವಾಗಿರಲಿಲ್ಲ. ಹೀಗಾಗಿ ನಾನು ರಸ್ತೆಯ ವಿದ್ಯುತ್ ದೀಪದ ಬೆಳಕಿನಲ್ಲಿ ಕುಳಿತು ಓದುವ ರೂಢಿ ಮಾಡಿಕೊಂಡಿದ್ದೆ. ಕೆಲವೊಮ್ಮೆ ವಿದ್ಯುತ್ ಶಕ್ತಿ ಹೊರಟು

ಆರಂಭಗೊಂಡ ಡಿವೈಎಫ್‌ಐನ 6ನೇ ರಾಷ್ಟ್ರ ಸಮ್ಮೇಳನ

'ಇತಿಹಾಸದ ಸವಾಲು ಎದುರಿಸಿದವರು ಗೆಲ್ಲುತ್ತಾರೆ' ವಿ.ಪಿ.ಸಿಂಗ್

ದೇಶದ ಸಂಪತ್ತು ಎಂದರೆ ಅಲ್ಲಿಯ ಜನ. ಅದರಲ್ಲೂ ಕ್ರಿಯಾಶೀಲ ಸಂಪತ್ತು ಎಂದರೆ ದೇಶದ ಯುವಜನ ದೇಶದ ಭವಿಷ್ಯವೆಂದರೇ ಯುವಜನ. ಆದರೆ ಯುವಜನರ ಪ್ರಶ್ನೆಯನ್ನು ಈ ರಾಷ್ಟ್ರದ ಮುಖ್ಯ ಚರ್ಚೆಯನ್ನಾಗಿ ಎಂದೂ ಪರಿಗಣಿಸಲೇ ಇಲ್ಲ. ಅವರನ್ನು ರಾಷ್ಟ್ರೀಯ ಪ್ರಶ್ನೆಯಿಂದ ವ್ಯವಸ್ಥಿತವಾಗಿ ದೂರವಿಡಲಾಗಿದೆ. ಇದು ಬದಲಾಗಬೇಕು' ಎಂದು ಮಾಜಿ ಪ್ರಧಾನಿ ವಿ.ಪಿ. ಸಿಂಗ್‌ರವರು ಹೇಳಿದರು.

ದೇಶದ ಸಂಪತ್ತೆಂದರೆ ಹಣವಲ್ಲ, ಯುವಜನರು


ಅವರು ಕೇರಳದ ತಿರುವನಂತಪುರದಲ್ಲಿ ಏಪ್ರಿಲ್ 6-10ರವರೆಗೆ ನಡೆಯುತ್ತಿರುವ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ)ನ ಐತಿಹಾಸಿಕ ಆರನೆಯ ರಾಷ್ಟ್ರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದುವರಿದು ದೇಶದ ಸಂಪತ್ತೆಂದರೆ ಬ್ಯಾಂಕ್‌ನಲ್ಲಿರುವ ಹಣದ ಲೆಕ್ಕಾಚಾರವಲ್ಲ, ಹಣವನ್ನು ಕೂಡಿಕಳೆಯುವ ಲೆಕ್ಕವಲ್ಲ. ಈ ದೇಶದ ಯುವಜನರು, ರೈತರು, ಕಾರ್ಮಿಕರು ಬ್ಯಾಂಕಿನ ನಿಜವಾದ ಖಾತೆ. ಹಾಗಾಗಿ ಉದ್ಯೋಗ ಮತ್ತು ಶಿಕ್ಷಣ ರಾಷ್ಟ್ರದ ಪ್ರಮುಖ ಅಜೆಂಡಾ ಆಗಬೇಕಾಗಿದೆ. ದುರ್ದೈವವೆಂದರೆ ಇನ್ನೂ ಇಲ್ಲಿ ಒಂದು ರಾಷ್ಟ್ರೀಯ ಯುವನೀತಿ ಇಲ್ಲ. ಸರ್ಕಾರಕ್ಕೆ ಇದನ್ನು ರೂಪಿಸುವುದು ಅಗತ್ಯವೆಂದನ್ನಿಸಲಿಲ್ಲ. ಯುವಜನರಿಗಾಗಿ ಒಂದು ರಾಷ್ಟ್ರೀಯ ಮಂಡಳಿ ಅಗತ್ಯವಿದ್ದು, ಶಾಸನಬದ್ಧ ಅಧಿಕಾರವನ್ನು ಅದು ಹೊಂದಿರಬೇಕು. ಪ್ರಧಾನಮಂತ್ರಿ ಅದರ ಮುಖ್ಯಸ್ಥರಾಗಿ, ಆಗು-ಹೋಗುಗಳಿಗೆ ನೇರ ಜವಾಬ್ದಾರರಾಗಿರಬೇಕು ಎಂದು ಸಲಹೆ ನೀಡಿದರು.

ದೇಶದ ಪ್ರಜಾಸತ್ತಾತ್ಮಕ ಚಳುವಳಿಗೆ ರಾಜಕೀಯಕ್ಕೆ ಬಹುದೊಡ್ಡ ಕೊಡುಗೆ ನೀಡಿದ ಇ.ಎಂ.ಎಸ್. ರವರ ರಾಜ್ಯದಲ್ಲಿ ನಿಂತು ನಾನು ಮಾತನಾಡುತ್ತಿರುವುದು ನನಗೆ ಅತ್ಯಂತ ಸಂತೋಷ ತಂದಿದೆ ಎಂದು ಮಾತನ್ನಾರಂಭಿಸಿದ ಅವರು ಇ.ಎಂ.ಎಸ್.ರವರ ಒಡನಾಟದಿಂದ 'ನಾನು ಹಲವು ವಿಷಯ ಕಲಿತಿದ್ದೇನೆ. ಹಲವು ಪ್ರಶ್ನೆಗಳಲ್ಲಿ ಹಿರಿಯ ಸ್ಥಾನದಿಂದ ಅವರು ನನಗೆ ರಾಜಕೀಯ ಮಾರ್ಗದರ್ಶನ ನೀಡಿದ್ದಾರೆ. ಇದರೊಂದಿಗೆ ಕೇರಳ ಈ ದೇಶದಲ್ಲಿಯೇ ಅತೀ ಹೆಚ್ಚು ಸಾಕ್ಷರತೆ ಸಾಧಿಸಿದ ರಾಜ್ಯ ಕೂಡ ಹೌದು ಎಂದು ಭಾವೋದ್ವೇಗದಿಂದ ನುಡಿದರು.

ಶಿಕ್ಷಣರಂಗದ ಕಡೆಗೆ ಗಮನಸೆಳೆದ ಸಿಂಗ್‌ರವರು ಹಿಂದೆಯೂ ಖಾಸಗಿ ಶಿಕ್ಷಣ ಸಂಸ್ಥೆಗಳಿದ್ದವು. ಅವರು ಶಿಕ್ಷಣವನ್ನು ಸೇವೆಯೆಂದು ತಿಳಿದಿದ್ದಾರೆ ಹೊರತು ಹಣದ ವ್ಯಾಪಾರಕ್ಕೆ ಇಳಿದಿರಲಿಲ್ಲ. ಆದರೆ ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ಶಿಕ್ಷಣದ ವ್ಯಾಪಾರ ಜೋರಾಗಿ ನಡೆಯುತ್ತಿದೆ. ಶಿಕ್ಷಣವನ್ನು ಕಾಳಸಂತೆಖೋರರು ಒಂದು ದಂಧೆಯನ್ನಾಗಿಸಿಕೊಂಡಿದ್ದಾರೆ. ಶಿಕ್ಷಣ ತೀರಾ ದುಬಾರಿಯಾಗಿದೆ. ಹೀಗೆ ವ್ಯಾಪಾರೀಕರಣದ ಮೂಲಕ ಬಡವರನ್ನು, ಮಾಧ್ಯಮವರ್ಗದವರನ್ನು ಸಾಮಾನ್ಯ ಹಾಗೂ ಉನ್ನತ ಶಿಕ್ಷಣದಿಂದ ವಂಚಿಸಲಾಗುತ್ತಿದೆ. ಶಿಕ್ಷಣ ಶ್ರೀಮಂತರಿಗೆ ಮೀಸಲು ಎಂದಾಗಿದೆ. ಹಾಗಾಗಿ ಇಂತಹ ಶಿಕ್ಷಣ ಪಡೆದವರೇ ಆಡಳಿತದಲ್ಲಿ ಸ್ಥಾನ ಪಡೆಯುತ್ತಾರೆ. ನೀತಿ ನಿರೂಪಣೆ ಮಾಡುತ್ತಾರೆ. ಯಾರು ನೀತಿನಿರೂಪಣೆಯಲ್ಲಿ ಪಾಲ್ಗೊಳ್ಳಬೇಕಿತ್ತೋ ರಾಷ್ಟ್ರೀಯ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಿತ್ತೋ ಅವರನ್ನು ಈ ವ್ಯವಸ್ಥೆಯಿಂದ ದೂರವಿರಿಸಲಾಗಿದೆ. ಎಂದು ವಿಷಯ ವ್ಯಕ್ತಪಡಿಸಿದರು.

ದೇಶದಲ್ಲಿ ಎನ್.ಡಿ.ಎ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಯ ಕಡೆ ಗಮನ ಸೆಳೆದ ಮಾಜಿ ಪ್ರಧಾನಿಗಳು "ಭಾರತದಲ್ಲಿ ಸುಮಾರು ಶೇ. 40 ಜನ ಬಡತನದ ರೇಖೆಯಡಿ ಇದ್ದಾರೆ.

ಇದರ ಪರಿಹಾರಕ್ಕೆ ಉದಾರೀಕರಣ ಮಾತ್ರವೇ ಉತ್ತರವೇ? ಹಲವರ ಪ್ರಕಾರ ಇದೇ ಸರಿ. ಅನೇಕರು ಅವರವರ ಸಂಕುಚಿತ ದೃಷ್ಟಿಯಿಂದ ಮಾತ್ರ ನೋಡಿ ವಿಶ್ಲೇಷಿಸುತ್ತಿದ್ದಾರೆ. ಆದರೆ ಒಂದು ಸಮಗ್ರ ದೃಷ್ಟಿಯಿಂದ ನೋಡಬೇಕು. ಇಂದು ದೇಶ ಎದುರಿಸುತ್ತಿರುವ ಆರ್ಥಿಕ ದುಸ್ಥಿತಿಗೆ ಭಾರತದ್ದೇ ಆದ ಒಂದು ಪರಿಹಾರ ಕಂಡುಕೊಳ್ಳಬೇಕು. ಈ ವಾಸ್ತವ ಮರೆತರೆ ಜಗತ್ತಿನ ಯಾವ ಶಕ್ತಿಯೂ ನಮ್ಮನ್ನು ರಕ್ಷಿಸುವುದಿಲ್ಲ ಎಂಬುದನ್ನು ಗಮನಿಸಬೇಕು" ಎಂದು ಹೇಳಿ "ಇಂದುಕೇವಲ ಬದಲಾವಣೆಯ ಮಾತನ್ನು ಮಾತ್ರ ಕೇಳುತ್ತಿದ್ದೇವೆ. ಬದಲಾವಣೆ ಮಾನವೀಯತೆಯಿಂದ ಕೂಡಿರಬೇಕು. ಬದಲಾವಣೆ ರಕ್ಷಣೆಯ ವ್ಯೂಹ ಹೊಂದಿರಬೇಕು. ಆದರೆ ಇದರ ಬಗ್ಗೆ ಮಾತನಾಡುವ ಈ ಜನರ ಬಾಯಿಂದ ಈ ಎರಡೂ ಅಂಶಗಳನ್ನು ಕೇಳಲುಸಾಧ್ಯವಾಗುತ್ತಿಲ್ಲ" ಎಂದು ವ್ಯಂಗ್ಯವಾಡಿದರು.



ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಿರುವ ವಿ.ಪಿ.ಸಿಂಗ್

ದೇಶವೆಂದರೆ ಗೋಡೆಗೆ ತೂಗುಹಾಕಿದ ನಕಾಶೆಯಲ್ಲ

ದುಡಿಯುವ ಜನರ ಬಗ್ಗೆ ಗಮನ ಸೆಳೆಯುತ್ತಾ, ಹಸು, ಕುದುರೆಗಳು ವಾಸಿಸಲು ಮೇಲ್ಛಾವಣಿ ಇದೆ. ಆರ್ಥಿಕ ಉನ್ನತಿಗೆ ಕೊಡುಗೆ ನೀಡುತ್ತಿರುವ ಕೆಲಸಗಾರರಿಗೆ ವಾಸಿಸಲು ಸೂರಿಲ್ಲ. ಸಾಮಾಜಿಕ ನೇತೃತ್ವ ವಹಿಸಬೇಕಾದವರಿಗೆ ಉಳಿಯಲು ಮನೆ ಇಲ್ಲದ ಹೀನ ಸ್ಥಿತಿ ನಿರ್ಮಾಣವಾಗಿದೆ. ಈಸ್ಥಿತಿ ಬದಲಾಗಲೇಬೇಕೆಂದರು.


ನಮ್ಮ ಪ್ರಜಾಪ್ರಭುತ್ವ ಗಂಡಾಂತರ ಸ್ಥಿತಿಯಲ್ಲಿದೆ. ದೇಶವೆಂದರೆ ಕೇವಲ ಗೋಡೆಗೆ ತೂಗು ಹಾಕಿದ ನಕಾಶೆ ಅಲ್ಲ. ಅದು ಪ್ರತೀ ಮನುಷ್ಯನ ಹೃದಯದಲ್ಲಿರುವ ನಕಾಶೆ. ಅದನ್ನು ಛಿದ್ರಮಾಡಲು ಬಿಡಬಾರದು. ಇತ್ತೀಚೆಗೆ ಗುಜರಾತ್‌ನಲ್ಲಿ ಆಡಳಿತವನ್ನು ಕೋಮವಾದೀಕರಣಗೊಳಿಸಲು ಯತ್ನಿಸಲಾಯಿತು. ಇದು ಗಂಡಾಂತರ ವಿಷಯ. ಅವರು ಮುಂದುವರಿದು ಸಂವಿಧಾನವನ್ನು ಪರಾಮರ್ಶಿಸಲು ಹೊರಟಿದ್ದಾರೆ. ಪಾರ್ಲಿಮೆಂಟ್ ಹಾಗೂ ಜನರ ಆಶೋತ್ತರಗಳನ್ನು ನಿರ್ಲಕ್ಷಿಸಿ ಕೋಮುವಾದಿಗಳು ಅಪ್ರಜಾಪ್ರಭುತ್ವ ರೀತಿಯಲ್ಲಿ ಸಂವಿಧಾನವನ್ನು ಬದಲಾಯಿಸಿ ಮುನ್ನುಗ್ಗುತ್ತಿರುವುದನ್ನು ತಡೆಯಲೇಬೇಕು" ಎಂದು ಆಡಳಿತದಲ್ಲಿರುವ ಕೋಮುವಾದಿ ನೀತಿಗಳನ್ನು ಖಂಡಿಸಿದರು. ಇತಿಹಾಸವನ್ನು ಸವಾಲಾಗಿ ಸ್ವೀಕರಿಸಿ ಹೋರಾಡಿದವರನ್ನು ಇತಿಹಾಸ ಸ್ಮರಿಸುತ್ತದೆ. ಇತಿಹಾಸದ ತಪ್ಪುಗಳ ವಿರುದ್ಧ ದೃಢವಾಗಿ ದನಿಯೆತ್ತಬೇಕು. ಲಕ್ಷಾಂತರ ಜನರ ನೋವಿನ ಧ್ವನಿ ಆಗ ಕೇಳಬೇಕು. ಕೇವಲ ಧ್ವನಿವರ್ಧಕದಲ್ಲಿ ಒಂದು ಧ್ವನಿ ಮೊಳಗಿದರೆ ಸಾಲದು. ದೇಶದಲೆಲ್ಲಾ ಮೊಳಗಬೇಕು. ಆಗ ಮಾತ್ರ ಜನರ ಜೀವನಮಟ್ಟ ಬದಲಾವಣೆ ಸಾಧ್ಯ" ಎಂದು ಹೇಳಿಯುವಜನರ ಅತೃಪ್ತಿ, ತಳಮಳ, ಹೋರಾಟದ ರೂಪ ಪಡೆದಾಗಬದಲಾವಣೆ ಸಾಧ್ಯ. ಈ ಬದಲಾವಣೆ ನಿಮ್ಮ ಕನಸಾಗಬೇಕು. ನಿಮ್ಮ ಕನಸೇ ನಿಮ್ಮ ಆಸ್ತಿ. ಅದನ್ನು ಯಾವುದೇ ಕಾರಣಕ್ಕೆ ಬಿಡಬೇಡಿ. ಸಮೂಹ ಮಾಧ್ಯಮಗಳು ಗ್ರಾಹಕ ಸಂಸ್ಕೃತಿಯನ್ನು ವಿಸ್ತರಿಸುವ ಮೂಲಕಈ ಕನಸುಗಳನ್ನು ಕೊಲ್ಲಲು ಹೊರಟಿದೆ. ನಿಮ್ಮ ಕನಸುಗಳನ್ನು ಗೌರವಿಸದ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಬೇಡಿ. ಹೀಗೆ ಇತಿಹಾಸಕ್ಕೆ ಸವಾಲು ನೀಡಿದವರು ಮತ್ತು ಸವಾಲು ಎದುರಿಸಿದವರು ಗೆಲ್ಲುತ್ತಾರೆ" ಎಂದು ಕರೆ ನೀಡಿ ಡಿವೈಎಫ್‌ಐ ಇಂದು ಸ್ವೀಕರಿಸಿದ ಮಾರ್ಗಹಾಗೂ ತ್ಯಾಗದ ಪರಂಪರೆಯನ್ನು ಶ್ಲಾಘಿಸಿದರು.

ಡಿವೈಎಫ್‌ಐನ ರಾಷ್ಟ್ರ ಅಧ್ಯಕ್ಷರಾದ ಎನ್.ಎಸ್.ಕೃಷ್ಣದಾಸ್ ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ. ಅಚ್ಯುತಾನಂದನ್ ಸ್ವಾಗತಿಸಿದರು. ಆರಂಭದಲ್ಲಿ ದೇಶಾದ್ಯಂತ ಜಾಥಾ ನಡೆಸಿ ಬಂದ ಸಂಗಾತಿಗಳಿಂದ ಹುತಾತ್ಮ ಜ್ಯೋತಿಯನ್ನು ಕಾಂ. ಮಹಮ್ಮದ್ ಸಲೀಂ, ಕೃಷ್ಣದಾಸ್‌ರವರು ಸ್ವೀಕರಿಸಿದರು. ನೆರೆದಿದ್ದ ಇಡೀ ಯುವಸಮೂಹ ಹುತಾತ್ಮ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿ ಘೋಷಣೆ ಹಾಕಿತು. ಕೃಷ್ಣದಾಸ್ ಧ್ವಜಾರೋಹಣ ಮಾಡಿದರು.

ಇಡೀ ದೇಶದ ಸಾಂಸ್ಕೃತಿಕ ಹಿರಿಮೆಯನ್ನು ಪರಿಚಯಿಸುವ ನೃತ್ಯ ಮತ್ತು ಕೋಮುವಾದಿ ಅಟ್ಟಹಾಸದಿಂದ ಕಲೆ, ಸಂಸ್ಕೃತಿ ಹಾಗೂ ಸ್ವಚ್ಛಂದ ಬದುಕನ್ನು ಆಕ್ರಮಿಸುತ್ತಿರುವುದು ಹಾಗೂ ಇದನ್ನು ಎದುರಿಸಿ ಹೋರಾಡುವ ವೈವಿಧ್ಯಮಯ, ಪರಂಪರೆ ಇದರ ರಕ್ಷಣೆಗೆ ನಿಂತ ಡಿವೈಎಫ್‌ಐ ಯನ್ನು ಸಾಂಕೇತಿಸುವ ನೃತ್ಯರೂಪಕ ಪ್ರದರ್ಶಿಸುವುದರೊಂದಿಗೆ ಉದ್ಘಾಟನೆ ಆರಂಭಗೊಂಡಿತು. ಇದನ್ನು ಖ್ಯಾತ ಕಲಾವಿದ ದೀಕ್ಷಾ ಸೇತ್‌ರವರ ಶಿಷ್ಯ 'ರೆಜಿ' ನಿರ್ದೇಶಿಸಿದ್ದರೆ, ಜಯನನ್, ಸುನೀತಾ ಮುಖ್ಯ ಪಾತ್ರ ವಹಿಸಿದ್ದರು. ಓ.ಎನ್.ವಿ.ಕುರುಪ್(ಖ್ಯಾತ ಲೇಖಕರು) ರವರ ಹಾಡನ್ನು ಹಾಡಲಾಯಿತು. ಸಮ್ಮೇಳನದ ಸ್ಥಳಕ್ಕೆ ಭಗತ್‌ಸಿಂಗ್ ನಗರವೆಂದು ಹೆಸರಿಸಲಾಗಿದ್ದು, ಖ್ಯಾತ ಕಲಾವಿದ ಅನಿಲ್ ಶ್ರೀಕಾರಿಯಂ ವೇದಿಕೆ ಸರಳ, ಸುಂದರವಾಗಿ ಕೇರಳದ ಗೃಹ ಮಾದರಿಯಲ್ಲಿ ರಚಿಸಿದ್ದರು.

ಎಲ್ಲೆಲ್ಲೂ ಸಂಭ್ರಮದ ಸಿದ್ಧತೆ

ಕೇರಳದಲ್ಲಿ ಸಮ್ಮೇಳನವೆಂದರೆ ಉತ್ಸವವೇ. ಅದೊಂದು ಜನರ ಉತ್ಸಾಹದ ಉತ್ಸವ. ಈ ಸಮ್ಮೇಳನದ ಯುವ ಪ್ರತಿನಿಧಿಗಳನ್ನು ಸ್ವಾಗತಿಸಲು ರೈಲು ನಿಲ್ದಾಣದಲ್ಲಿ ಕಾದು ನಿಂತ ಸಂಗಾತಿಗಳು ನೂರಾರು. ಅವರಲ್ಲಿಯೂ ವಿವಿಧ ಪ್ರಾದೇಶಿಕ ಭಾಷೆಗಳನ್ನಾಡುವವರು ಸೇರಿದವರಂತೂ ಎಷ್ಟೋ ದಿನಗಳ ನಂತರ ಬಂಧುಗಳು ಕಲೆತಂತೆ. ಕರ್ನಾಟಕ 23 ಪ್ರತಿನಿಧಿಗಳು ರೈಲಿನಿಂದ ಕೆಳಗೆ ಇಳಿಯುತ್ತಿದ್ದಂತೆ ಸ್ವಾಗತ ಘೋಷಣೆಯೊಡನೆ ತಂಗುವ ಸ್ಥಳಕ್ಕೆ ಕರೆದೊಯ್ಯಲಾಯಿತು. ಹಾದಿಯುದ್ದಕ್ಕೂ ಬೀದಿ ಬದಿಗಳಲ್ಲಿ ವೃತ್ತಗಳಲ್ಲಿ ಎಲ್ಲೆಲ್ಲೂ ಕಲಾತ್ಮಕ ಸಿಂಗಾರ. ಕ್ರಾಂತಿಕಾರಿ 'ಚೆ', ಇ.ಎಂ.ಎಸ್., ಎ.ಕೆ.ಜಿ. ಮುಂತಾದ ಹಿರಿಯ ನಾಯಕರ ಚಿತ್ರಗಳು. ಸಾಂಸ್ಕೃತಿಕ ವೈಭವ ಸಾರುವ ರೂಪಕಗಳು. ತೆಂಗು, ಅಡಿಕೆ, ಬಾಳೆ ಎಲೆಗಳಿಂದ ವಿಶೇಷವಾಗಿ ಶೃಂಗಾರಗೊಂಡ ಕಮಾನುಗಳು, ಸ್ತಬ್ಧ ಚಿತ್ರಗಳು, ಕೋಮುಸೌಹಾರ್ದತೆ, ಸಮಾನತೆ, ಶಿಕ್ಷಣ, ಉದ್ಯೋಗ, ವರದಕ್ಷಿಣೆ ದೌರ್ಜನ್ಯ, ಸಾಮ್ರಾಜ್ಯಶಾಹಿ ಆಕ್ರಮಣ ಸಾರುವ ನೂರಾರು ಚಿತ್ತಾಕರ್ಷಕ ಗೋಡೆ ಬರಹಗಳು. ಹೀಗೆ ಎಲ್ಲೆಲ್ಲೂ ಸಂಭ್ರಮದ ಸಿದ್ಧತೆ ಕಾಣುತ್ತಿವೆ. ಈ ಸೃಜನಶೀಲ ಕಾರ್ಯದಲ್ಲಿ ತೊಡಗಿದ ಕಲಾವಿದರ ಸಂಖ್ಯೆ ನೂರಾರು.



ಹುತಾತ್ಮ ಸಂಗಾತಿಗಳಿಗೆ 'ಲಾಲ್‌ಸಲಾಂ'

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 33

ಕಳೆದ ಸಂಚಿಕೆಯಲ್ಲಿ ಬಿಹಾರ-ಪ.ಬಂಗಾಳ ರಾಜ್ಯಗಳ ವಿಲೀನ ಕೈಬಿಟ್ಟು ಕಾಂಗ್ರೆಸ್ ಸರ್ಕಾರದ ನಿಲುವು ಹಾಗೂ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸೋಲಿನ ಬಗ್ಗೆ ಓದಿರುವಿರಿ ಈ ವಾರ ಗ್ರಾಮೀಣ ಪ್ರದೇಶಗಳಲ್ಲಿ ಬರಗಾಲ ಪರಿಸ್ಥಿತಿಯಿಂದ ಆಹಾರ ಬಿಕ್ಕಟ್ಟು ಉಂಟಾಗಿ ಬೆಲೆ ಏರಿಕೆಯಾದಾಗ ಕಮ್ಯುನಿಸ್ಟ್ ಪಕ್ಷ ವಿಷಯಗಳನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಂಡು ಸಕಾರಾತ್ಮಕ ಪಾತ್ರ ವಹಿಸಿದ ಬಗ್ಗೆ ಹಾಗೂ 2ನೇ ಮಹಾ ಚುನಾವಣೆಗಳಲ್ಲಿ 'ಪ್ರಜಾಸತ್ತಾತ್ಮಕ ಏಕತೆಯ ಕಾರ್ಯಕ್ರಮ' ಬಿಡುಗಡೆ ಬಗ್ಗೆ ಓದಿ

ಬರ, ಬೆಲೆಯೇರಿಕೆಯ ಬಿಸಿ....

ಗ್ರಾಮೀಣ ಪ್ರದೇಶಗಳಲ್ಲಿ ಬರಗಾಲದಂಥ ಪರಿಸ್ಥಿತಿ ಉದ್ಭವಿಸಿತ್ತು. ಆಹಾರ ಬಿಕ್ಕಟ್ಟು ಮತ್ತು ಬೆಲೆಯೇರಿಕೆ ಸಮಸ್ಯೆ ಉಲ್ಬಣಗೊಳ್ಳುತ್ತಿತ್ತು. ಅಲ್ಲೆಲ್ಲಾ ಕಮ್ಯುನಿಸ್ಟ್ ಪಕ್ಷ ವಿಷಯಗಳನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಂಡು ಸಕಾರಾತ್ಮಕ ಪಾತ್ರ ನಿರ್ವಹಿಸಲು ನಾವು ಯಾವತ್ತೂ ಸಿದ್ಧರಿದ್ದವು.

ಬೆಲೆಯೇರಿಕೆಯನ್ನು ಪ್ರತಿಭಟಿಸಲು ಮತ್ತು ಬರಗಾಲದ ವಿರುದ್ಧ ಹೋರಾಡಲು ರಚಿಸಲಾದ ಸಮಿತಿ 1956 ಜೂನ್ 5 ರಂದು ವೆಲ್ಲಿಂಗ್ಟನ್ ಚೌಕದಲ್ಲಿ ಒಂದು ರ್‍ಯಾಲಿ ನಡೆಸಿತು. ಇದು ಪ್ರಥಮ ಸಾಮೂಹಿಕ ಕಾರ್ಯಕ್ರಮವಾಗಿತ್ತು.

ಕಲ್ಕತ್ತ ಮತ್ತು ಅದರ ಉಪನಗರಗಳಲ್ಲಿ ಮೌಂಡ್‌ಗೆ (ಮುಡಿ ಇರಬಹುದೇ?) 17.50 ರೂಪಾಯಿನಂತೆ ಉತ್ತಮ ಗುಣಮಟ್ಟದ ಅಕ್ಕಿ ಸರಬರಾಜು, ಗರಿಷ್ಟ ಸಂಖ್ಯೆಯ ಪಡಿತರ ಅಂಗಡಿಗಳನ್ನು ತೆರೆಯುವುದು ಮತ್ತು ಹೊರ ವಲಯಗಳಲ್ಲಿ ಮೌಂಡಗೆ 10 ರೂಪಾಯಿಯಂತೆ ಅಕ್ಕಿ ಸರಬರಾಜನ್ನು ಖಾತರಿಪಡಿಸುವಂತೆ ಸರಕಾರವನ್ನು ಕೋರುವ ಪ್ರಸ್ತಾವವೊಂದನ್ನು ವಿಧಾನಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಪಿ.ಎಸ್.ಪಿ.ನಾಯಕ, ಡಾ. ಎಸ್.ಬಂದೋಪಾಧ್ಯಾಯ ಆ ರ್‍ಯಾಲಿಯಅಧ್ಯಕ್ಷತೆ ವಹಿಸಿದ್ದರು. ಹೇಮಂತ ಬೋಸ್, ಜತಿನ್ ಚಕ್ರವರ್ತಿ ನಿಹಾತ್ ಚಕ್ರವರ್ತಿ ಮತ್ತು ನಾನು ಭಾಷಣ ಮಾಡಿದೆವು.

ಅವಶ್ಯಕ ಸಾಮಗ್ರಿಗಳ ಬೆಲೆಗಳ ತೀವ್ರ ಏರಿಕೆಯಿಂದಾಗಿ ಜನರ ಜೀವನ ಅಸಹನೀಯವಾಗುತ್ತಿದೆ ಹಾಗೂ ಪಂಚವಾರ್ಷಿಕ ಯೋಜನೆಯ ಹೊರತಾಗಿಯೂ ಈ ಸಮಸ್ಯೆ ಪರಿಹಾರವಾಗಿಲ್ಲ ಎಂಬುದು ರ್‍ಯಾಲಿಯಲ್ಲಿ ವ್ಯಕ್ತವಾದ ಸಾಮಾನ್ಯವಾದ ಅಭಿಪ್ರಾಯವಾಗಿತ್ತು. ಅಕ್ರಮ ದಾಸ್ತಾನುಗಾರರಿಂದ ಆಹಾರ ಸಾಮಗ್ರಿ ವಶಪಡಿಸಿಕೊಂಡು ಕಡಿಮೆ ಬೆಲೆಯಲ್ಲಿ ಜನರಿಗೆ ವಿತರಿಸಬೇಕು ಎಂದೂ ನಾವು ಒತ್ತಾಯ ಮಾಡಿದೆವು.

ಜೂನ್ 16 ರಂದು ಕಲ್ಕತ್ತದ ಹಜ್ರಾಪಾರ್ಕ್‌ನಲ್ಲಿ ಮತ್ತೊಂದು ಸಭೆ ನಡೆಯಿತು. ಸುಂದರಬನದ ಹರೋವಾ ಚಪತಲಾದಲ್ಲಿ ಜೂನ್ 13ರಂದು ನಡೆದ ಸಭೆಯಲ್ಲಿ ಮಾತನಾಡಿದ ನಾನು, ಸರಕಾರದ ಸ್ವಾರ್ಥ ನೀತಿಯೇ ಹಣದುಬ್ಬರಕ್ಕೆ ಕಾರಣ ಎಂದು ಹೇಳಿದೆ. ರೈತರನ್ನು ಅವರ ಜಮೀನಿನಿಂದ ಒಕ್ಕಲೆಬ್ಬಿಸುವುದನ್ನು ತಡೆಯಲು ಸತತ ಹಾಗೂ ಸಂಘಟಿತ ಚಳುವಳಿ ಅಗತ್ಯ ಎಂದೆ. ಹಾಗೂ ಒಂದು ಸೂಕ್ತ ನೀರಾವರಿ ವ್ಯವಸ್ಥೆ ತುರ್ತು ಅವಶ್ಯ ಎಂದು ಪ್ರತಿಪಾದಿಸಿದೆ.

ಜನರನ್ನು ಪರಿಹಾಸ್ಯ ಮಾಡಿದ ಮಂತ್ರಿ

ಜುಲೈ 9 ರಂದು ಹತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಅಸೆಂಬ್ಲಿವರೆಗೆ ಒಂದು ರ್‍ಯಾಲಿ ನಡೆಸಿದರು. ಮೆರವಣಿಗೆಕಾರರು ಅಸೆಂಬ್ಲಿ ಆವರಣದ ಸಮೀಪ ಬರುತ್ತಿರುವಂತೆ, ಜನರನ್ನು ಭೇಟಿ ಮಾಡುವಂತೆ ಅಂದಿನ ಆಹಾರ ಸಚಿವ ಪ್ರಫುಲ್ಲ ಚಂದ್ರ ಸೇನ್ ಅವರನ್ನು ನಾನು ವಿನಂತಿಸಿದೆ. ವಿಧಾನಸಭೆ ರ್‍ಯಾಲಿಗಾಗಿ ಕೆಲವರು 30 ಮೈಲಿ ದೂರ ನಡೆದು ಬಂದಿದ್ದರು ಎನ್ನುವುದು ನನಗೆ ಚೆನ್ನಾಗಿ ನೆನಪಿದೆ. ಜನರನ್ನು ಭೇಟಿ ಮಾಡಬೇಕೆಂದ ಮನವಿಯನ್ನು ಆ ಮಂತ್ರಿ ತಿರಸ್ಕರಿಸಿದರು. ಮಾತ್ರವೇ ಅಲ್ಲ ಜನರನ್ನು ಲಘುವಾಗಿ ಪರಿಗಣಿಸಿದರು.

ಹಸಿವಿನಿಂದಿರುವ ಜನರು ಇಷ್ಟೊಂದು ಮೈಲಿಗಟ್ಟಲೆ ಹೇಗೆ ನಡೆಯುತ್ತಾರೆ ಎನ್ನುವುದೇ ತನಗೆ ಆಶ್ಚರ್ಯ ಎಂದು ಹೇಳಿದರು! ಇದಕ್ಕೆ ತಕ್ಷಣವೇ ಪ್ರತಿಕ್ರಿಯಿಸಿದ ಪ್ರತಿಪಕ್ಷ ಮಂತ್ರಿ ತನ್ನ ಈ ಮಾತನ್ನು ವಾಪಸು ಪಡೆಯಬೇಕು ಎಂದು ಆಗ್ರಹಿಸಿತು. ಜನರನ್ನು ಪರಿಹಾಸ್ಯ ಮಾಡುವ ತನ್ನ ಮಾತನ್ನು ವಾಪಸು ಪಡೆಯಲು ಮಂತ್ರಿ ನಿರಾಕರಿಸಿದಾಗ ವಿಧಾನಸಭೆಯಿಂದ ನಾವು ಸಭಾತ್ಯಾಗ ಮಾಡಿದೆವು.

ಆ ತಿಂಗಳ ಒಂದು ಮಹತ್ವದ ಪ್ರಕರಣವನ್ನು ನಾನು ಉಲ್ಲೇಖಿಸಲೇಬೇಕು. ನಮ್ಮೆಲ್ಲರಿಗೆ ಗೊತ್ತಿರುವಂತೆ, ರಾಜ್ಯಗಳ ಪುನರ್‌ಘಟನೆ ಆಯೋಗದ ಶಿಫಾರಸುಗಳ ಬಗ್ಗೆ ಪಶ್ಚಿಮ ಬಂಗಾಳದ ಜನತೆಗೆ ಅತೃಪ್ತಿಯಿತ್ತು. ಜುಲೈ 7 ರಂದು ಬಂದ್ ನಡೆಸಲು ಎಡಪಕ್ಷಗಳು ನೀಡಿದ ಜಂಟಿ ಕರೆಗೆ ಪ್ರತಿಸ್ಪಂದನವಾಗಿ ಬಂದ್ ಯಶಸ್ವಿಯಾಗಿ ನಡೆಯಿತು.

ಈ ನಡುವೆ, ಎರಡನೇ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಚುನಾವಣೆಗಳು ಸಮೀಪಿಸುತ್ತಿದ್ದವು. ನಾನಾ ಪಕ್ಷಗಳು ಸ್ಥಾನ ಹೊಂದಾಣಿಗೆ ಬಗ್ಗೆ ಸಮಾಲೋಚನೆ ಆರಂಭಿಸಿದ್ದವು. ಅಸೆಂಬ್ಲಿಗೆ 100 ಹಾಗೂ ಲೋಕಸಭೆಗೆ 50 ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ಘಟಕ ತೀರ್ಮಾನಿಸಿತು. ಕನಿಷ್ಟ ಸಾಮಾನ್ಯ ಕಾರ್ಯಕ್ರಮದೊಂದಿಗೆ ಎಡ ಸಂಯುಕ್ತ ರಂಗ ಅಸ್ತಿತ್ವಕ್ಕೆ ಬಂತು. ಇಲ್ಲಿಯೂ ಈ ರಂಗ ರೂಪಿಸುವಲ್ಲಿ ತಮ್ಮ ಪಕ್ಷ ಪ್ರಮುಖ ಪಾತ್ರ ನಿರ್ವಹಿಸಿತು.

ಕಾಲ ಸರಿಯಿತು; ಬೇಗನೆ ನಾವು ಇನ್ನೊಂದು ಚುನಾವಣೆಯ ಹೊಸ್ತಿಲಲ್ಲಿ ನಿಂತಿದ್ದವು. ಪ್ರಥಮ ಸಾರ್ವತ್ರಿಕ ಚುನಾವಣೆ ವೇಳೆ ಆಶ್ವಾಸನೆಗಳಲ್ಲಿ ಯಾವುದನ್ನೂ ಕಾಂಗ್ರೆಸ್ ಈಡೇರಿಸಲಿಲ್ಲ, ಬದಲಿಗೆ ಜನರು ನಿರಂತರವಾಗಿ ರಾಜಕೀಯವಾಗಿಯೂ ಆರ್ಥಿಕವಾಗಿಯೂ ಸಂಕಷ್ಟಗಳನ್ನು ಅನುಭವಿಸುವಂತೆ ಮಾಡಿತು.

ಕರಗಿದ ಕನಸುಗಳು

ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕನಸು ಕಾಂಗ್ರೆಸ್ ಆಡಳಿತದಲ್ಲಿ ನಿಧಾನವಾಗಿ ಕರಗಿಹೋಗತೊಡಗಿತು. ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ದಿನದಿಂದ ದಿನಕ್ಕೆ ಏರುತ್ತಲೇ ಇತ್ತು. ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಿದ್ದರು. ಬಡವರು ಅಧೋಗತಿ ಗಿಳಿಯುತ್ತಿದ್ದರು. ದೇಶ ಎರಡನೇ ಪಂಚವಾರ್ಷಿಕ ಯೋಜನೆಯ ಯುಗ ಪ್ರವೇಶಿಸಿದರೂ ಒಂದಲ್ಲ ಒಂದು ಬಿಕ್ಕಟ್ಟು ವ್ಯವಸ್ಥೆಯನ್ನು ಕಾಡುತ್ತಿತ್ತು.

ಪಶ್ಚಿಮ ಬಂಗಾಳ ಕೂಡಾ ವಿಲೀನ ಸಮಸ್ಯೆಗಳ ಹೊರೆ ಹೊತ್ತಿತು. ಯೋಜನೆ ಅವಧಿ ಆರಂಭವಾದ 1951 ಕ್ಕೆ ಹೋಲಿಸಿದರೆ ಫ್ಯಾಕ್ಟರಿಗಳ ಸಂಖ್ಯೆಯೇನೋ ಸ್ವಲ್ಪ ಹೆಚ್ಚಾಗಿತ್ತು. ಆದರೆ, 1951 ರಲ್ಲಿ ಇದ್ದ ಕಾರ್ಮಿಕರ ಸಂಖ್ಯೆ 6,54,901. ಅದು 1955 ರಲ್ಲಿ 5,92,231 ಕ್ಕೆ ಇಳಿಯಿತು ಎನ್ನುವುದನ್ನು ನಾವು ನೆನಪಿಡಬೇಕು. ಅಂದಿನ ಕಾರ್ಮಿಕ ಸಚಿವರ ಹೇಳಿಕೆಯಿಂದ ವಿಧಾನಸಭೆಯಲ್ಲಿ ನಾನು ಈ ಮಾಹಿತಿ ಪಡೆದೆ.

ನಾರು ವಲಯದಲ್ಲಿ 29,000 ನೌಕರರನ್ನು ರಿಟ್ರೆಂಚ್‌ಮಾಡಲಾಗಿದೆ, ಎಂಜಿನಿಯರಿಂಗ್ ಘಟಕಗಳಲ್ಲಿ 4000 ಹಾಗೂ ಚಹಾ ತೋಟಗಳಲ್ಲಿ 2000 ಕ್ಕೂ ಹೆಚ್ಚು ಕಾರ್ಮಿಕರನ್ನು ತೆಗೆದುಹಾಕಲಾಗಿದೆ ಎಂದು ಈ ಹೇಳಿಕೆ ವಿವರಿಸಿತ್ತು.

ಇಲ್ಲ..... ಇಲ್ಲ...... ಇಲ್ಲ........

ಭೂಸುಧಾರಣೆಯೇನೂ ಇರಲಿಲ್ಲ, ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ಸೇವೆ ಉತ್ತಮವಿರಲಿಲ್ಲ, ಬೆಲೆಯೇರಿಕೆಯೆನ್ನುವುದು ಸರಕಾರದ ವೈಫಲ್ಯದ ಪ್ರತಿನಿತ್ಯದ ಸೂಚ್ಯಂಕವಾಗಿತ್ತು, ನಿರುದ್ಯೋಗ ಹೆಚ್ಚುತ್ತಲೇ ಇತ್ತು.

ಸರಕಾರ ತೆರಿಗೆ ವಿಧಿಸುವಲ್ಲಿ ತಾರತಮ್ಯ ಮಾಡುತ್ತಿತ್ತು, ನಿರಾಶ್ರಿತರ ಸಮಸ್ಯೆಯ ಪರಿಹಾರಕ್ಕೆ ಯಾವುದೇ ಕಣ್ಣೋಟ ಇರಲಿಲ್ಲ, ಸರಕಾರದ ಕಲ್ಯಾಣ ಕಾರ್ಯಕ್ರಮ ಆಮೆ ಗತಿಯಲ್ಲಿ ಸಾಗುತ್ತಿತ್ತು, ಮಂತ್ರಿಗಳ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಪ್ರತಿದಿನವೂ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸುತ್ತಿತ್ತು.

ಆದರೆ, ಈ ಎಲ್ಲಾ ಸಮಸ್ಯೆಗಳ ವಿರುದ್ಧ ಜನರು ಬೀದಿಗಿಳಿದಾಗ ರಾಜ್ಯಸರ್ಕಾರದ ಸೂಚನೆ ಮೇರೆಗೆ ಪೋಲೀಸರು ಎಂದಿನಂತೆ ದೌರ್ಜನ್ಯಕ್ಕೆ ಮುಂದಾಗುತ್ತಿದ್ದರು.

ನಾವು ವಿಧಾನಸಭೆ ಮತ್ತು ಸಂಸತ್ತಿನ ಒಳಗೆ ಹಾಗೂ ಹೊರಗೆ ಈ ಸಮಸ್ಯೆಗಳ ವಿರುದ್ಧ ಹೋರಾಡುತ್ತಿದ್ದೆವು ಹಾಗೂ ಅವುಗಳತ್ತ ಗಮನ ಸೆಳೆಯುತ್ತಿದ್ದೆವು. ಜನತೆಗೆ ತಿಳುವಳಿಕೆ ಕೊಡುವ ಜವಾಬ್ದಾರಿ ಮತ್ತು ಪ್ರಯತ್ನ ಒಂದು ನಿರಂತರ ಪ್ರಕ್ರಿಯೆ. ರಾಷ್ಟ್ರಮಟ್ಟದಲ್ಲಿ, ಚುನಾವಣೆಗಳು ನಮ್ಮ ಉದ್ದೇಶಕ್ಕೆ ಅನುಕೂಲವಾಗಿ ಬಂತು. ನಮ್ಮ ಪರಿಮಿತ ಸಂಪನ್ಮೂಲಗಳೊಂದಿಗೆ ನಾವು ಚುನಾವಣೆ ಕಣಕ್ಕೆ ಧುಮುಕಿದೆವು. ಪ್ರಜಾಸತ್ತಾತ್ಮಕ ಹಾಗೂ ಕಾಂಗ್ರೆಸ್-ವಿರೋಧಿ ಶಕ್ತಿಗಳನ್ನು ಒಂದುಗೂಡಿಸಲು ಹಗಲೂ ರಾತ್ರಿ ಶ್ರಮಿಸಿದೆವು. 1957 ಜನವರಿ 3 ರಂದು ಬಿಡುಗಡೆ ಮಾಡಲಾದ ತನ್ನ ಪ್ರಣಾಳಿಕೆಯಲ್ಲಿ ಕಮ್ಯುನಿಸ್ಟ್ ಪಕ್ಷ ಇಂಥ ಏಕತೆಯ ಅಗತ್ಯವನ್ನು ಸ್ಪಷ್ಟವಾಗಿ ವಿವರಿಸಿತು.

ಪಶ್ಚಿಮ ಬಂಗಾಳದಲ್ಲಿ ಕೂಡ ಈ ಪ್ರಕ್ರಿಯೆ ಆರಂಭವಾಯಿತು. 'ಪ್ರಜಾಸತ್ತಾತ್ಮಕ ಏಕತೆಯ ಕಾರ್ಯಕ್ರಮ'(The programme of Democratic Unity) ಎಂಬ ಪುಸ್ತಿಕೆಯನ್ನು ನಾವು ಪ್ರಕಟಿಸಿದೆವು. ಅದರಲ್ಲಿ ಹೀಗೆ ಹೇಳಲಾಗಿತ್ತು-

"ಪಶ್ಚಿಮ ಬಂಗಾಳದಲ್ಲಿ ಸಮಾನ ಮನಸ್ಕ ಶಕ್ತಿಗಳ ನಡುವೆ ಏಕತೆಯನ್ನು ತರುವಲ್ಲಿ ಪ.ಬಂಗಾಳ ಪ್ರಜಾಸತ್ತಾತ್ಮಕ ಮತ್ತು ಎಡಪಕ್ಷಗಳು ಗಮನಾರ್ಹ ಯಶಸ್ಸನ್ನು ಸಾಧಿಸಿವೆ. ಐದು ಪ್ರಮುಖ ಪಕ್ಷಗಳಾದ ಕಮ್ಯುನಿಸ್ಟ್ ಪಕ್ಷ, ಪಿ.ಎಸ್.ಪಿ., ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್ ಮತ್ತು ಫಾರ್ವರ್ಡ್ ಬ್ಲಾಕ್(ಮಾರ್ಕ್ಸ್‌ವಾದಿ) ಇವು ಈಗಾಗಲೇ ಸ್ಥಾನ ಹೊಂದಾಣಿಕೆ ಮಾಡಿಕೊಂಡಿವೆ".

ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಆಯ್ಕೆಗೆ ನಾವು ಈ ಕೆಳಗಿನ ಮಾನದಂಡವನ್ನು ಅನುಸರಿಸಬೇಕೆಂದು ಪ್ರಸ್ತಾಪಿಸಿದೆವು.

1. ಸಾಮೂಹಿಕ ಪ್ರಭಾವವಿರುವ ಮತ್ತು ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಬಲ್ಲ ಅಭ್ಯರ್ಥಿಗಳನ್ನು ಮಾತ್ರ ಕಣಕ್ಕಿಳಿಸಬೇಕು.

2. ಯಾವ ಪಕ್ಷಕ್ಕೆ ನಿರ್ದಿಷ್ಟ ಪ್ರದೇಶದಲ್ಲಿ ಹೆಚ್ಚು ಪ್ರಭಾವ ಇದೆಯೋ ಆ ಕ್ಷೇತ್ರಗಳ ಜವಾಬ್ದಾರಿಯನ್ನು ಅಂಥ ಪಕ್ಷಕ್ಕೆ ವಹಿಸಬೇಕು.

3. ಉತ್ತಮ ಸಾಧನೆ ಹೊಂದಿದ ಮತ್ತು ಕಳೆದ ಸಲ ಯಶಸ್ವಿಯಾದವರನ್ನು ಪುನಃ ಅಭ್ಯರ್ಥಿಯನ್ನಾಗಿ ಮಾಡಬೇಕು.

37 ಅಂಶಗಳ ಕಾರ್ಯಕ್ರಮವೊಂದನ್ನು ಅನುಷ್ಠಾನಗೊಳಿಸಬೇಕೆಂಬ ಪ್ರಸ್ತಾವವೂ ರಂಗದ ಮುಂದಿತ್ತು.

"ಪ್ರತಿ ವಿಚಾರದಲ್ಲೂ ಪಶ್ಚಿಮ ಬಂಗಾಳದ ಪ್ರಗತಿಗೆ ನೆರವಾಗುವ ಹಾಗೂ ದೇಶವನ್ನು ಮುನ್ನಡೆಸಲು ಸಹಾಯಕವಾಗುವ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ರೂಪಿಸಲು ಪ್ರಯತ್ನಗಳನ್ನು ಮಾಡಬೇಕು. ಎಡಪಕ್ಷಗಳು ಮಾತ್ರವೇ ಇಂಥ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬಲ್ಲರು. ಈ ಪ್ರಜಾಸತ್ತಾತ್ಮಕ ಏಕತೆಯನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಚರ್ಚೆ ಆರಂಭವಾಗುತ್ತದೆ ಹಾಗೂ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ವಿಚಾರವಾಗಿ ಏಕತೆ ರೂಪುಗೊಳ್ಳುತ್ತದೆ ಎಂದು ಕಮ್ಯುನಿಸ್ಟ್ ಪಕ್ಷ ಆಶಿಸುತ್ತದೆ" ಎಂದು ಅದು ಹೇಳಿತು.

(ಮುಂದುವರಿಯುವುದು)

ಕಾಂಗ್ರೆಸ್‌ನ ಅವಕಾಶವಾದಿ ಅನೈತಿಕ ಮೈತ್ರಿ

ಆರ್.ಎಸ್.ಎಸ್. ಮತ್ತು ಬಿಜೆಪಿ ನಿರ್ದೇಶಿತ ಎನ್.ಡಿ.ಎ ಅವಿಭಾಜ್ಯ ಅಂಗವಾದ ತೃಣಮೂಲ ಕಾಂಗ್ರೆಸ್ಸಿನ ಜೊತೆ ಅನೀತಿಯುತ ಹಾಗೂ ಅಪವಿತ್ರ ಮೈತ್ರಿ ಮಾಡಿಕೊಳ್ಳಲು ಹೊರಡುವ ಮೂಲಕ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷವು ಅತ್ಯಂತ ಅವಕಾಶವಾದಿ ನೆಲೆಗೆ ಬಂದಿಳಿದಿದೆ. ದೇಶವನ್ನು ಮತ್ತು ಅದರ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಕೇಸರೀಕರಣದಿಂದ ಪಾರುಮಾಡುವ ಗಂಭಿರ ಸಂಘರ್ಷದಲ್ಲಿ ಈ ದೇಶವನ್ನು ಪ್ರೀತಿಸುವ ಜನ ತಮ್ಮನ್ನು ತೊಡಗಿಸಿಕೊಂಡಿರುವ ಕಾಲಘಟ್ಟದಲ್ಲಿ, ಕಾಂಗ್ರೆಸ್ ಪಕ್ಷ ಕೋಮುವಾದಿ ಶಕ್ತಿಗಳೊಂದಿಗೆ ಕೈಜೋಡಿಸಲು ತೀರ್ಮಾನಿಸಿದೆ. ಈ ಮೂಲಕ, ಭಾರತದ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಹಂದರವನ್ನು ಕಾಪಾಡುವ ದೇಶಪ್ರೇಮಿ ಹೋರಾಟಕ್ಕೆ ಕಾಂಗ್ರೆಸ್ ದ್ರೋಹ ಬಗೆದಿರುವುದು ಬಯಲುಗೊಂಡಿದೆ.

ಆರ್.ಎಸ್.ಎಸ್. ಹಿಂದುತ್ವ ಅಜೆಂಡಾ ಜಾರಿಗೆ ಅದರ ಕೂಟದ ಮುಖ್ಯ ಅಂಗವಾಗಿರುವ ತೃಣಮೂಲ ಕಾಂಗ್ರೆಸ್ ಎಷ್ಟೊಂದು ವಿಶ್ವಾಸಪೂರ್ವಕವಾಗಿದೆಯೆಂದರೆ, ಅದರ ಕೋಮುವಾದಿ ಅಜೆಂಡಾವನ್ನು ಬಹಿರಂಗವಾಗಿ ಪ್ರಶ್ನಿಸಿದ್ದಾಗಲೀ ಅಥವಾ ಅದರಿಂದ ತನ್ನನ್ನು ಬೇರ್ಪಡಿಸಿಕೊಂಡಿದ್ದಾಗಲೀ ಎಂದಿಗೂ ಮಾಡಲಿಲ್ಲ. ಸಂವಿಧಾನವನ್ನು ಪರಾಮರ್ಶಿಸುವ ಪ್ರಯತ್ನವನ್ನು ತೃಣಮೂಲ ಕಾಂಗ್ರೆಸ್ ಸಂಪೂರ್ಣವಾಗಿ ಬೆಂಬಲಿಸಿದೆ. ಆದರೂ ಕಾಂಗ್ರೆಸ್ ಇಂತಹ ಶಕ್ತಿಯನ್ನು ಇಂದು ತನ್ನ ಮಿತ್ರನನ್ನಾಗಿಸಿಕೊಂಡಿದೆ.

ತೃಣಮೂಲ ಕಾಂಗ್ರೆಸಿನೊಂದಿಗೆ ಮತ್ತು ಆ ಮೂಲಕ ಬಿಜೆಪಿ ಮತ್ತು ಎನ್.ಡಿ.ಎ ದೊಂದಿಗೆ "ಮಹಾಕೂಟ" ರಚಿಸಿಕೊಂಡು ಸಿಪಿಐ(ಎಂ) ನೇತೃತ್ವದ ಎಡರಂಗವನ್ನು ಸೋಲಿಸುವ ಕನಸನ್ನು ಕಾಂಗ್ರೆಸ್ ಕಾಣುತ್ತಿದ್ದರೆ, ಅದು ಸಂಪೂರ್ಣ ತಪ್ಪು ಗ್ರಹಿಕೆಯಾಗಿದೆ. ಸಿಪಿಐ(ಎಂ) ಪಕ್ಷವು ಹಲವು ದಶಕಗಳಿಂದ ತನ್ನ ವಿರುದ್ಧ ಗುಂಪುಗೂಡಿದ ಮತ್ತು ಪುನರ್ ಗುಂಪುಕಟ್ಟಿದ ಪ್ರತಿಗಾಮಿ ಶಕ್ತಿಗಳ ಇಂತಹ ವಿವಿಧ ಕೂಟಗಳನ್ನು ಎದುರಿಸುತ್ತಾ ಬಂದಿದೆ.


ಕಾಂಗ್ರೆಸ್‌ನ ಅರೆಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಎದುರಿಸುತ್ತಾ ಗಟ್ಟಿಯಾಗಿರುವ ಮತ್ತು ಭಾರತದ ಜಾತ್ಯಾತೀತ, ಪ್ರಜಾಪ್ರಭುತ್ವ ತಳಹದಿಯನ್ನು ರಕ್ಷಿಸುವುದಕ್ಕಾಗಿ ಕಟಿಬದ್ಧರಾಗಿರುವ ಬಂಗಾಳದ ಜನತೆ ಇಂತಹ ಅಪವಿತ್ರ ಕೂಟಗಳಿಗೆ ಸರಿಯಾದ ಪಾಠವನ್ನು ಖಂಡಿತವಾಗಿ ಕಲಿಸುತ್ತಾರೆ.

ತನ್ನ ಹಳೆಯ ತಪ್ಪುಗಳಿಂದ ಪಾಠ ಕಲಿಯಲು ಕಾಂಗ್ರೆಸ್ ನಿರಾಕರಿಸುತ್ತಿರುವುದು ವಿಪರ್ಯಾಸವಾಗಿದೆ. ಕೋಮುವಾದದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಅದರ ನೀತಿಯು ಅದರ ಚುನಾವಣಾ ಭವಿಷ್ಯಕ್ಕೆ ತೀವ್ರ ಧಕ್ಕೆ ಉಂಟುಮಾಡಿದೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಇದುವರೆಗಿನ ಅತ್ಯಂತ ಕಡಿಮೆ ಮಟ್ಟಕ್ಕೆ ಕಾಂಗ್ರೆಸ್ ಕುಸಿಯುವುದರೊಂದಿಗೆ ಇದು ಸಾಬೀತಾಗಿದೆ. ಇಂತಹ ನಿರ್ನಾಮದ ಹಾದಿಯನ್ನೇ ಈಗಲೂ ಮುಂದುವರೆಸುತ್ತಿರುವ ಹಾಗೆ ಕಾಣುತ್ತಿದೆ. ಇಂತಹ ಒಂದು ಅನಿವಾರ್ಯತೆಯಲ್ಲಿ, ಜನಕ್ಕೆ ಅಲ್ಲದೆ ಬೇರೆ ಆಯ್ಕೆಯಿಲ್ಲ.

ಸ್ವತಂತ್ರ ಭಾರತದ ಗಣತಂತ್ರದ ಗುಣಲಕ್ಷಣಗಳನ್ನು ತಿರುವುಮುರುವು ಮಾಡಲು ನಿರತರಾಗಿರುವ ಕೋಮುವಾದಿ ಶಕ್ತಿಗಳ ವಿಕೃತ ಯೋಜನೆಯನ್ನು ಸೋಲಿಸಲು, ಜಾತ್ಯಾತೀತ ಶಕ್ತಿಗಳ "ಮಹಾ ಒಕ್ಕೂಟ"ವನ್ನು ರಚಿಸಲು ದೇಶಪ್ರೇಮಿ ಭಾರತೀಯರು ಬಯಸುತ್ತಿದ್ದರೆ. ಇಂತಹ ಹೋರಾಟದಲ್ಲಿ ಎಡಶಕ್ತಿಗಳು, ಮುಖ್ಯವಾಗಿ ಸಿಪಿಐ(ಎಂ), ಅತ್ಯಂತ ದೃಢವಾಗಿ ನಿಂತಿದೆ. ಇದಕ್ಕೆ ಬದಲಿಯಾಗಿ, ಎಡಶಕ್ತಿಗಳ ವಿರುದ್ಧ ಕೋಮುವಾದಿ ಶಕ್ತಿಗಳೊಂದಿಗೆ ಕೈಜೋಡಿಸಿದ "ಮಹಾನ್ ಕೂಟ"ವನ್ನು ಸೇರಲು ಕಾಂಗ್ರೆಸ್ ಬಯಸುತ್ತಿದ್ದಾರೆ. ಇಂತಹ ಬೆಳವಣಿಗೆಗಳು ಬಂಗಾಳದ ಜನತೆಯ ನಡುವೆ ರಾಜಕೀಯ ಧೃವೀಕರಣವನ್ನು ಮತ್ತಷ್ಟು ಮೊನಚಾಗಿಸುತ್ತದೆ ಅಷ್ಟೇ. ಬಂಗಾಳದ ಪರಂಪರೆ ಮತ್ತು ಅಲ್ಲಿನ ಜನತೆಯ ಬದ್ಧತೆಗಳನ್ನು ಗಮನಿಸಿದಾಗ ಇಂತಹ ಧೃವೀಕರಣ ಎಡಶಕ್ತಿಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಾಯ ಮಾಡುತ್ತವೆ.

ಸಾಮ್ರಾಜ್ಯಶಾಹಿಗಳ ಭಟ್ಟಂಗಿಗಳಿಗೆ ಮುಜುಗರ ತಂದ ರಾಷ್ಟ್ರಪತಿ ಭಾಷಣ

ಶ್ರೀಯುತ ಅಧ್ಯಕ್ಷರೇ...............



ಭಾರತಕ್ಕೆ ಭೇಟಿ ನೀಡಿದ ಅಮೆರಿಕಾ ಸಂಯಕ್ತ ಸಂಸ್ಥಾನಗಳ ಅಧ್ಯಕ್ಷ ಕ್ಲಿಂಟನ್‌ರ ಗೌರವಾರ್ಥ ಭಾರತದ ರಾಷ್ಟ್ರಪತಿ ಕೆ.ಆರ್.ನಾರಾಯಣನ್‌ರವರು ನೀಡಿದ ಔತಣ ಕೂಟದಲ್ಲಿ ಮಾಡಿದ ಭಾಷಣ 'ಜೀ ಹುಜೂರ್' ಎನ್ನುವುದನ್ನು ತಮ್ಮ ಲಾಂಛನವಾಗಿರಿಸಿಕೊಂಡಿರುವ ನಮ್ಮ ಪ್ರಮುಖ ರಾಷ್ಟ್ರೀಯ ಮಾಧ್ಯಮಗಳಲ್ಲಿ ಹಲವರ ಕಣ್ಣು ಕೆಂಪಗಾಗಿಸಿತು. ಅವರ ಭಾಷಣ ವಿವಾದಾತ್ಮಕವಾಗಿಯೇನೂ ಇರಲಿಲ್ಲ. ಆದರೂ ಅವರನ್ನು ಟೀಕಿಸಲಾಯಿತು. ಏಕೆ? ಏಕೆಂದರೆ ವಾಜಪೇಯಿ ಸರಕಾರ ಮತ್ತು ಈ ಮಾಧ್ಯಮದವರು ಅಮೆರಿಕನ್ ದೊರೆಯ ಬಗ್ಗೆ ಪ್ರದರ್ಶಿಸಿದ ಹೊಲಸು ಹೊಗಳು ಭಟ್ಟಂಗಿತನವನ್ನು, ಗುಲಾಮಭಾವನೆಯನ್ನು ತಮ್ಮ ಭಾಷಣದಲ್ಲೂ ಪ್ರತಿಬಿಂಬಿಸಲು ರಾಷ್ಟ್ರಪತಿ ನಾರಾಯಣ್ ನಿರಾಕರಿಸಿದರು.

ರಾಷ್ಟ್ರಪತಿಗಳ ಔತಣಕೂಟ ಭಾಷಣದ ಬಗ್ಗೆ ಈ ಆತ್ಮಗೌರವಶೂನ್ಯರ ಆಕ್ಷೇಪಗಳು ಮುಖ್ಯವಾಗಿ ಮೂರು - ಒಂದು, ಸಾಮ್ರಾಜ್ಯಶಾಹಿಗೆ ನಮೋನಮಃ ಎನ್ನುವುದು ಪ್ರಸಕ್ತ ಚಾಳಿಯಾಗಿಬಿಟ್ಟಿರುವಾಗ, ನಮ್ಮ ವಿದೇಶಾಂಗ ಮಂತ್ರಿಗಳು ನಮ್ಮ ಹಿಂದಿನ ವಿದೇಶಾಂಗ ಮಂತ್ರಿಗಳು ನಮ್ಮ ಹಿಂದಿನ ವಿದೇಶಾಂಗ ನೀತಿಯ ಅವಧಿ 'ವ್ಯರ್ಥಗೊಳಿಸಿದ ದಶಕಗಳು' ಎಂದಿರುವಾಗ ರಾಷ್ಟ್ರಪತಿಗಳು ಅಲಿಪ್ತ ನೀತಿಯ ಪ್ರಸ್ತಾಪ ಏಕೆ ಮಾಡಬೇಕಿತ್ತು? ಎರಡು ಜಾಗತಿಕ ಹಳ್ಳಿಯ ನೇತೃತ್ವವನ್ನು ಒಬ್ಬ ಸರದಾರ ವಹಿಸಬಾರದು ಎಂಬ ಆಫ್ರಿಕನ್ ಮುತ್ಸದ್ದಿಯ ಮಾತನ್ನು ಅವರು ಅಮೆರಿಕಾದ ಅಧ್ಯಕ್ಷರ ಎದುರು ಏಕೆ ಪ್ರಸ್ತಾಪಿಸಬೇಕಿತ್ತು?

ಮೂರು, ಕಾಶ್ಮೀರ ಒಂದು ಸ್ಫೋಟಕ ಜಾಗ ಎಂಬ ಅಮೆರಿಕನ್ ಆಳರಸರ ಅಭಿಪ್ರಾಯವನ್ನು ಔತಣಕೂಟದಲ್ಲಿ ಏಕೆ ನೆನಪಿಸಬೇಕಿತ್ತು?

ತಮ್ಮನ್ನೇ ಮಾರಿಕೊಂಡು ಸಾಮ್ರಾಜ್ಯಶಾಹಿಗಳ ಬಾಲಬಡುಕರಾಗಿರುವವರಿಗೆ ಇವು ದೊಡ್ಡ ಆಕ್ಷೇಪಗಳಾಗಿ ಕಾಣುತ್ತಿರಬಹುದು, ಆದರೆ ಭಾರತದ ಜನತೆಗೆ ಇವುಗಳಲ್ಲಿ ಯಾವುದರಲ್ಲೂ ಯಾವ ಆಕ್ಷೇಪಾರ್ಹ ಅಂಶಗಳೂ ಕಾಣುತ್ತಿಲ್ಲ. ನಮ್ಮ ರಾಷ್ಟ್ರಪತಿಗಳು ಸಂವಿಧಾನದಲ್ಲಿ ಹೇಳಿದ 'ನಾವು, ಭಾರತದ ಜನತೆ'ಯ ಭಾವನೆಗಳಿಗೆ ದನಿ ನೀಡಿ ತಮ್ಮ ಸಾಂವಿಧಾನಿಕ ಕರ್ತವ್ಯವನ್ನು ನಿಭಾಯಿಸಿದ್ದಾರೆ. ವಾಜಪೇಯಿ ಸರಕಾರ ದೇಶದಲ್ಲಿ ಹರಡಿಸಿರುವ ಗುಲಾಮಗಿರಿಯ ಭಾವೋನ್ಮಾದ ನಡುವೆಯೂ ಭಾರತದ ಆತ್ಮಗೌರವವನ್ನು ಎತ್ತಿಹಿಡಿದ ಈ ಭಾಷಣದ ಪೂರ್ಣಪಾಠವನ್ನು 'ಐಕ್ಯರಂಗ'ದ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಶ್ರೀಯುತ ಅಧ್ಯಕ್ಷರೇ, ಅತ್ಯಂತ ಸಂತಸಭರಿತವಾಗಿ ನಾನು ನಿಮ್ಮನ್ನು, ನಿಮ್ಮ ನಿಯೋಗದ ಗಣ್ಯ ಸದಸ್ಯರನ್ನು, ಅಮೇರಿಕನ್ ಸಂಸತ್ತಿನ ಮಾನ್ಯ ಸದಸ್ಯರನ್ನು ಮತ್ತು ಅಮೆರಿಕದ ಸರಕಾರದ ಉನ್ನತ ಅಧಿಕಾರಿಗಳನ್ನು ಭಾರತದ ಸರಕಾರ ಮತ್ತು ಜನತೆಯ ಪರವಾಗಿ ಸ್ವಾಗತಿಸುತ್ತೇನೆ. ನೀವು ಅಧ್ಯಕ್ಷ ಪದವಿ ಸ್ವೀಕರಿಸಿದಂದಿನಿಂದಲೇ ಭಾರತಕ್ಕೆ ಭೇಟಿ ನೀಡಬಯಸಿದ್ದಿರಿ ಎಂಬುದು ನಮಗೆ ತಿಳಿದಿದೆ. ನಿಮ್ಮ ಭಾವನೆಯ ಹರಿಕಾರರಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಪ್ರಥಮ ಮಹಿಳೆ, ಶ್ರೀಮತಿ ಹಿಲರಿ ರೋಡಮ್ ಕ್ಲಿಂಟನ್, ಮಾರ್ಚ್ 1995 ರಲ್ಲಿ ಭಾರತಕ್ಕೆ ಭೇಟಿ ನೀಡಿದರು. ಈ ಭೇಟಿಯ ಸಂತಸಪೂರ್ಣ ನೆನಕೆಗಳು ನಮ್ಮೊಡನಿವೆ. ಈ ಸಂದರ್ಭದಲ್ಲಿ ಅವರು ನಿಮ್ಮ ಪಕ್ಕದಲ್ಲಿ ಇರಲೇಬೇಕಾಗಿತ್ತು ಎಂದು ನಾನು ಹೇಳಲೇಬೇಕು.

ಭಾರತ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳು ವಿಚಾರಗಳು, ಆದರ್ಶಗಳು ಹಾಗೂ ಜ್ಞಾನಪೂರಿತ ಆಸಕ್ತಿಗಳಿಂದ ಪರಸ್ಪರ ಬೆಸೆದಿವೆ. ಇವು ಆರ್ಥಿಕ, ವ್ಯಾಪಾರಗಳ ಆಕರ್ಷಣೆ, ಯಾವುದೇ ಮಿಲಿಟರಿ ಕೂಟದ ತೊಡಕುಗಳಿಗಿಂತ ಬಹಳ ಆಚೆಗೆ ಹೋಗಿರುವ ಆಳವಾದ ಬೆಸುಗೆ, ಬಹುಪಾಲು ಭಾರತೀಯರ ಮನದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳೆಂದರೆ ಬೆಂಜಮಿನ್ ಫ್ರಾಂಕ್ಲಿನ್, ಜಾರ್ಜವಾಷಿಂಗ್ಟನ್, ಥಾಮಸ್ ಜೆಫರ್ಸನ್ ಹಾಗೂ ಅಬ್ರಹಾಂ ಲಿಂಕನ್‌ರಂತಹ ಮಹಾನ್ ಹೆಸರುಗಳು ಮತ್ತು ಅವರ ಉನ್ನತ ಆದರ್ಶಗಳು ಹಾಗೂ ವಿವೇಕಾನಂದ, ರವೀಂದ್ರನಾಥ ಟಾಗೋರ್, ಜವಾಹರಲಾಲ್ ನೆಹರೂ ಮತ್ತು ಮಹಾತ್ಮಗಾಂಧಿಯವರ ಮೇಲೆ ಪ್ರಭಾವ ಬೀರಿದ ಎಮರ್ಸನ್, ಥೋರೋ ಮತ್ತು ವಾಲ್ಟ್ ವ್ಹಿಟ್‌ಮನ್'ರಂತಹ ಮಹಾನ್ ಚಿಂತಕರ, ಲೇಖಕರ ಹೆಸರುಗಳು ಅನುರಣನಗೊಳ್ಳುತ್ತವೆ. ಅಮೆರಿಕದ ಕರಿಯರ ಸಮಾನತೆಯ ಹೋರಾಟದಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್‌ರವರ ಮೇಲೆ ಮಹಾತ್ಮಗಾಂಧಿಯವರ ಪ್ರಭಾವ ಸರ್ವವಿದಿತ. ಎಷ್ಟೆಂದರೆ ಕಿಂಗ್‌ರನ್ನು ಗುಂಡಿಟ್ಟು ಕೊಂದಾಗ 'ಇನ್ನೊಬ್ಬ ಗಾಂಧಿಯನ್ನು ಗುಂಡಿಟ್ಟು ಕೊಂದರು' ಎಂದು ಇಡೀಜಗತ್ತು ಹೇಳಿತು.

ಹೀಗೆ, ಶ್ರೀಯುತ ಅದ್ಯಕ್ಷರೇ, ವ್ಯಾಪಾರ-ವಾಣಿಜ್ಯಕ್ಕಿಂತಲೂ ದೊಡ್ಡದಾದ ಭಾವನೆಗಳು ನಮ್ಮೆರಡು ದೇಶಗಳನ್ನು, ಜನಗಳನ್ನು ಬೆಸೆದಿದೆ. 1961 ರಲ್ಲಿ ನಾವು ಕೆಲವು ತೀವ್ರ ಪ್ರಶ್ನೆಗಳನ್ನು ಎದುರಿಸುತ್ತಿದ್ದಾಗ ಆಗಿನ ಪ್ರಧಾನ ಮಂತ್ರಿ ಜವಾಹರ ಲಾಲ್ ನೆಹರೂ ಅಧ್ಯಕ್ಷ ಜಾನ್ ಎಫ್ ಕೆನಡಿಯವರಿಗೆ ಪತ್ರ ಬರೆದು, ಅಮೆರಿಕಾ ಭಾರತಕ್ಕೆ ಏನೂ ಕೊಡದಿದ್ದರೂ ಭಾರತ ಅದರೊಂದಿಗೆ ಗೆಳತನದಿಂದಿರುತ್ತದೆ ಎಂದಿದ್ದರು. ಈ ವಿಚಾರದ ಬಗ್ಗೆ ವಿಸ್ತಾರವಾಗಿ ಹೇಳುತ್ತಾ ಅದಕ್ಕೆ ಕೆಲವು ಸಮಯದ ಮೊದಲು ಭಾರತದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಅವರು ಹೀಗೆ ಹೇಳಿದ್ದರು -

"ಅಮೆರಿಕಾ ನಮಗೆಷ್ಟು ಹಣಕಾಸು ನೆರವು ಕೊಡುತ್ತದೆ ಎಂಬುದರ ಮೇಲೆ, ಅವರೊಂದಿಗೆ ನಮ್ಮ ಸಂಬಂಧಗಳು ಅವಲಂಬಿಸಿವೆ ಎಂದು ಹಲವರು ಯೋಚಿಸುತ್ತಾರೆ. ಇದು ಒಂದು ಸಂಪೂರ್ಣ ತಪ್ಪು ತಿಳುವಳಿಕೆ. ಅಮೆರಿಕಾ ನಮಗೆ ತುಂಬಾ ಕೊಡುತ್ತದೋ, ಸ್ವಲ್ಪ ಕೊಡುತ್ತದೋ ಅಥವಾ ಏನೂ ಕೊಡುವುದಿಲ್ಲವೋ ಎಂಬ ಸಂಗತಿಯ ಮೇಲೆ ಅವರೊಂದಿಗೆ ನಮ್ಮ ಸಂಬಂಧಗಳು ಅಷ್ಟಾಗಿ ಅವಲಂಬಿಸಿರುವುದಿಲ್ಲ - ಇತರ ಅಂಶಗಳು ತೃಪ್ತಿಕರವಾಗಿದ್ದರೆ. ಆದರೆ ಅಡ್ಡ

ಶ್ರೀಯುತ ಅಧ್ಯಕ್ಷರೇ,
ಶೀತಲ ಸಮರದ ನಂತರ ಜಗತ್ತಿನಲ್ಲಿ ಅಲಿಪ್ತತೆಯೆಂಬ ಬಹುಸ್ವರೂಪೀ ವಿಶ್ವ ವ್ಯವಸ್ಥೆಯ ಪರಿಕಲ್ಪನೆ ಮಿಲಿಟರಿ ಬಣಗಳ ಮತ್ತು ಕೂಟಗಳ ರಾಜಕೀಯಕ್ಕಿಂತ ಹೆಚ್ಚು ಪ್ರಸ್ತುತ ಎಂದು ನಾವು ನಂಬುತ್ತೇವೆ.

ಬರುತ್ತಿರುವುದು ಈ ಇತರ ಹಾಗೂ ರಾಜಕೀಯ ಅಂಶಗಳೇ"

ಇದಕ್ಕೂ ಎಷ್ಟೋ ಮೊದಲು 1936 ರಲ್ಲಿ ಸುಮಾರು ಇಂತಹುದೇ ಭಾವನೆಗಳನ್ನು ಮಹಾತ್ಮ ಗಾಂಧಿ ವ್ಯಕ್ತಪಡಿಸಿದ್ದರು. ಕ್ರಿಶ್ಚಿಯನ್ ಕಾರ್ಯಕರ್ತರ ಒಂದು ಗುಂಪು ಅವರನ್ನು ಭೇಟಿ ಮಾಡಿದಾಗ ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಅವರು ಹೀಗಂದಿದ್ದರು -

"ಅಮೆರಿಕನ್ನರು ಬಂದು ನಮಗೆ ನಾವೇನು ನೆರವು ನೀಡಬಹುದು ಎಂದು ಹೇಳುವಾಗ ನಾನವರಿಗೆ ಹೇಳುತ್ತೇನೆ - ನೀವು ನಿಮ್ಮ ಕೋಟ್ಯಂತರ ಡಾಲರುಗಳನ್ನು ನಮ್ಮ ಎದುರು ಝುಳಪಿಸಿದರೆ ನಮ್ಮನ್ನು ಭಿಕ್ಷುಕರನ್ನಾಗಿ ಮಾಡುತ್ತೀರಿ, ನಮ್ಮನ್ನು ಹತಾಶಗೊಳಿಸುತ್ತೀರಿ. ಆದರೆ ಒಂದು ವಿಷಯದಲ್ಲಿ ಭಿಕ್ಷುಕನಾಗಿರಲು ನನಗೇನೂ ಅಭ್ಯಂತರವಿಲ್ಲ ನೀವು ನಿಮ್ಮ ಇಂಜಿನಿಯರುಗಳ, ಕೃಷಿ ತಜ್ಞರ ಸೇವೆಗಳನ್ನು ನಮಗೆ ಕೊಡಲು ಹೇಳಬಹುದು. ಅವರು ನಮ್ಮ ಬಳಿ ದೊರೆಗಳಾಗಿ ಬರಬಾರದು, ಸ್ವಯಂಸೇವಕ ಕಾರ್ಯಕರ್ತರಾಗಿ ಬರಬೇಕು"

ಶ್ರೀಯುತ ಅಧ್ಯಕ್ಷರೇ,
ವಿಶ್ವಸಂಸ್ಥೆಯನ್ನು ಬಲಪಡಿಸಲು ಅಮೆರಿಕಾ ಸಂಯುಕ್ತ ಸಂಸ್ಥಾನದ ಅಖಂಡ ಬೆಂಬಲದಿಂದ, ಇಂದಿನ ವಿಶ್ವದ ವಾಸ್ತವತೆಯನ್ನು ಬಿಂಬಿಸುವಂತೆ ವಿಶ್ವಸಂಸ್ಥೆಯ ಪ್ರಮುಖ ಅಂಗಗಳನ್ನು ಸುಧಾರಿಸಿ ವಿಶ್ವದ ಅಭಿವೃದ್ಧಿಶೀಲ ದೇಶಗಳಿಗೆ ಅವುಗಳಿಗೆ ಸಲ್ಲತಕ್ಕ ಸ್ಥಾನವನ್ನು ಕೊಡುವ ಮೂಲಕ ಸಾಧ್ಯ ಎಂದು ನಮ್ಮ ನಂಬಿಕೆ.

ನೆಹರೂ, ಗಾಂಧೀಜಿ ಈ ಭಾವನೆಗಳಿಗೆ ಅಭಿವ್ಯಕ್ತಿ ನೀಡಿದ ನಂತರ ನಮ್ಮೆರಡು ದೇಶಗಳ ನಡುವೆ ಆರ್ಥಿಕ ಮತ್ತು ವಾಣಿಜ್ಯ ಮತ್ತು ವೈಜ್ಞಾನಿಕ ರಂಗಗಳಲ್ಲಿ ವಿನಿಮಯಗಳು ಅಪಾರವಾಗಿ ಬೆಳೆದಿವೆ - ಗುಣಮಟ್ಟದಲ್ಲೂ ಪ್ರಮಾಣದಲ್ಲೂ. ಮಿಲಿಯಗಟ್ಟಲೆ ಗೋಧಿಯನ್ನು ಅಮೆರಿಕಾ ಭಾರತಕ್ಕೆ ಕಳಿಸಿದೆ. ಅಮೆರಿಕಾ ಕೃಷಿ ತಜ್ಞರು ಸ್ವಾತಂತ್ರ್ಯನಂತರ ಭಾರತದ ಪ್ರಮುಖ ಸಾಧನೆಗಳಲ್ಲಿ ಒಂದಾದ ಹಸಿರುಕ್ರಾಂತಿಯ ಕಿಡಿ ಹಚ್ಚಲು ನೆರವಾಗಿದ್ದಾರೆ. ವ್ಯಾಪಾರ, ಹೂಡಿಕೆಯಲ್ಲಿ ಈಗ ಅಮೆರಿಕಾ ಸಂಯುಕ್ತ ಸಂಸ್ಥಾನ ಭಾರತದ ನಂಬರ್ ಒಂದು ಪಾಲುದಾರ ದೇಶವಾಗಿ ಮೂಡಿ ಬಂದಿದೆ. ನಮ್ಮ ಆರ್ಥಿಕ ಸಹಕಾರ ನಮ್ಮೆರಡೂ ದೇಶಗಳ ಹಾಗೂ ಜಗತ್ತಿನ ಒಳಿತಿಗಾಗಿ ಭಾರೀ ನಿರೀಕ್ಷೆಗಳ ಭರವಸೆ ನೀಡಿದೆ. ನಾನಿಲ್ಲಿ ಒಂದು ಮಿಲಿಯಕ್ಕಿಂತಲೂ ಹೆಚ್ಚು ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯ ಮೂಲದ ಜನಗಳು ತಾವು ಅಂಗೀಕರಿಸಿದ ದೇಶಕ್ಕೆ ಹಾಗೂ ಅಮೆರಿಕ ಮತ್ತು ಭಾರತಗಳ ನಡುವೆ ಸರಕಾರಕ್ಕೆ ನೀಡಿದ ಗಮನಾರ್ಹ ಕೊಡುಗೆಗಳನ್ನು ಪ್ರಸ್ತಾಪಿಸಲೇಬೇಕು.

ಆದರೂ ಶೀತಲ ಸಮರದ ಅವಧಿಯಲ್ಲಿ ನಮ್ಮ ಸಂಬಂಧಗಳಿಗೆ ಮಿಲಿಟರಿ ಮೈತ್ರಿಯಿಂದ, ಸೈದ್ಧಾಂತಿಕ ಒಣ ರಾಜಕೀಯದಿಂದ ಹಾಗೂ ಆ ಅತಿಗಳ ಯುಗದಲ್ಲಿ ಭಾರತದ ಅಲಿಪ್ತ ನೀತಿ ಹಾಗೂ ಶಾಂತಿಯುತ ಸಹ-ಅಸ್ತಿತ್ವದ ಧೋರಣೆಯನ್ನು ಅರಿಯುವಲ್ಲಿ ಅಮೆರಿಕಾಗಿದ್ದ ತೊಂದರೆಗಳಿಂದಾಗಿ ಗ್ರಹಣ ಬಡಿದಿತ್ತು ಎಂಬ ಬಗ್ಗೆ ಸಂದೇಹವಿಲ್ಲ. ಶೀತಲ ಸಮರದ ಆ ಮನೋಭಾವ ಇನ್ನೂ ಪೂರ್ಣವಾಗಿ ಮಾಯವಾದಂತಿಲ್ಲ. ಶೀತಲ ಸಮರದ ಕಾರ್ಯತಂತ್ರಗಳು ಪಳೆಯುಳಿಕೆಗಳು ಈಗಲೂ ಆಗಾಗ ಬಂದು ವಿಶ್ವವನ್ನು ಕಾಡುತ್ತಿರುತ್ತದೆ. **ಶ್ರೀಯುತ ಅಧ್ಯಕ್ಷರೇ, ಶೀತಲ ಸಮರದ ನಂತರ ಜಗತ್ತಿನಲ್ಲಿ ಅಲಿಪ್ತತೆಯೆಂಬ ಬಹುಸ್ವರೂಪೀ ವಿಶ್ವ ವ್ಯವಸ್ಥೆಯ ಪರಿಕಲ್ಪನೆ ಮಿಲಿಟರಿ ಬಣಗಳ ಮತ್ತು ಕೂಟಗಳ ರಾಜಕೀಯಕ್ಕಿಂತ ಹೆಚ್ಚು ಪ್ರಸ್ತುತ ಎಂದು ನಾವು ನಂಬುತ್ತೇವೆ.** ಈ ಸಂದರ್ಭದಲ್ಲಿ 1940 ರಲ್ಲಿ ಜವಾಹರಲಾಲ್ ನೆಹರೂರವರು ಅಧಿಕಾರ ವಹಿಸಿಕೊಳ್ಳುವಾಗ ಹೇಳಿದ ಮಾತುಗಳನ್ನು ನೆನಪಿಸಬಯಸುತ್ತೇನೆ.

"ನಾವು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ವಿಧಿಯು ಒಂದು ಪ್ರಮುಖ ಪಾತ್ರವನ್ನು ನೀಡಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಜನತೆಗೆ ಶುಭಾಶಯ ಕಳಿಸುತ್ತೇವೆ. ಈ ಭಾರೀ ಹೊಣೆಯನ್ನು ಎಲ್ಲೆಲ್ಲೂ ಶಾಂತಿ ಹಾಗೂ ಮಾನವ ಸ್ವಾತಂತ್ರ್ಯದ ಪ್ರತಿಪಾದನೆಗಾಗಿ ಬಳಸಲಾಗುವುದು ಎಂಬುದು ನಮ್ಮ ವಿಶ್ವಾಸ'

ಪ್ರಧಾನ ಮಂತ್ರಿ ನೆಹರೂರವರಿಗೆ ಅಧ್ಯಕ್ಷ ಐಸೆನ್‌ಹೋವರ್‌ರೊಂದಿಗೆ, ನಂತರ ಅಧ್ಯಕ್ಷ ಜಾನ್ ಎಫ್ ಕೆನಡಿಯವರೊಂದಿಗೆ ಒಂದು ಸೌಹಾರ್ದಯುತ ಸಂಬಂಧವಿತ್ತು. ಕೆನಡಿಯವರ ಬಗ್ಗೆ ನೆಹರೂ ಹೀಗಂದಿದ್ದರು: 'ಸಂಪತ್ತು, ಸಮೃದ್ಧಿ,

ಅವರ ದೇಶಕ್ಕೆ ಬಂದಿತ್ತು. ಅಧ್ಯಕ್ಷ ಕೆನೆಡಿ ಅದಕ್ಕೆ ಜಗತ್ತಿನ ಎಲ್ಲಾ ಜನಗಳನ್ನು ಆವರಿಸಿದ ಒಂದು ಆಳವಾದ ಮಾನವೀಯ ಮತ್ತು ನೈತಿಕ ದೃಷ್ಟಿಕೋನವನ್ನು ಸೇರಿಸಿದರು"

ಶ್ರೀಯುತ ಅಧ್ಯಕ್ಷರೇ, ನಿಮ್ಮ ದೂರದೃಷ್ಟಿಯ ಪ್ರತೀಕವಾಗಿ ನೀವು ಕೂಡಾ ಅಭಿವೃದ್ಧಿಶೀಲ ದೇಶಗಳ ಮುನ್ನಡೆಗೆ ನಿಮ್ಮ ಶಕ್ತಿಯನ್ನು ವ್ಯಯಿಸಿದ್ದೀರಿ. ನಮ್ಮ ದ್ವಿಪಕ್ಷೀಯ ಸಂಬಂಧಗಳ ಸವಾಲುಗಳನ್ನು ಕೂಡಾ ಎರಡೂ ದೇಶಗಳು ಹಾರ್ದಿಕವಾಗಿ ಒಂದು ಅವಕಾಶವಾಗಿ ಪರಿವರ್ತಿಸುವಂತೆ ಶ್ರಮಿಸಿದ್ದೀರಿ.

ಶ್ರೀಯುತ ಅಧ್ಯಕ್ಷರೇ, ಶೀತಲ ಸಮರದ ನಂತರ ವಿಶ್ವದ ಒಂದು ಗಮನಾರ್ಹ ಲಕ್ಷಣ ಎಂದರೆ ವಿಶ್ವದ ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಹಲವಾರು ಅಭಿವೃದ್ಧಿಶೀಲ ದೇಶಗಳು ಮೂಡಿ ಬರುತ್ತಿರುವುದು. ಇನ್ನೊಂದು ಪ್ರಬಲ ಸಂಗತಿಯೆಂದರೆ ಅಮೆರಿಕಾ ಸಂಯುಕ್ತ ಸಂಸ್ಥಾನ ವಿಶ್ವದಲ್ಲಿ ಒಂದು ಪ್ರಮುಖ ಆರ್ಥಿಕ, ಸಾಂತ್ರಿಕ ಮತ್ತು ಮಿಲಿಟರಿ ಅಂಶವಾಗಿ ಮೂಡಿಬರುತ್ತಿರುವುದು. ಅಮೆರಿಕದ ಮೇಲೆ ವಿಶ್ವದ ಶಾಂತಿ ಮತ್ತು ಸ್ಥಿರತೆಯನ್ನು ಬಲಪಡಿಸುವ ಭಾರೀ ಜವಾಬ್ದಾರಿಯಿದೆ. ಆ ಉದ್ದೇಶಕ್ಕಾಗಿ ವಿಶ್ವ ಸಂಸ್ಥೆಯನ್ನು ಬಲಪಡಿಸಬೇಕಾಗಿದೆ, ಅದನ್ನು ಹೊಸ ಜಾಗತಿಕ ವಾಸ್ತುಶಿಲ್ಪದ ಕೇಂದ್ರ ವಿಷಯವಾಗಿ ಮಾಡಬೇಕಾಗಿದೆ.

ಶ್ರೀಯುತ ಅಧ್ಯಕ್ಷರೇ, ವಿಶ್ವಸಂಸ್ಥೆಯನ್ನು

ಶೀಯುತ ಅಧ್ಯಕ್ಷರೇ,
ನಿಮ್ಮ ಭಾರತ ಭೇಟಿಯ ಈ ಐತಿಹಾಸಿಕ ಮತ್ತು ಶುಭ ಸಂದರ್ಭದಲ್ಲಿ ಪರಮಾಣು ಪ್ರಸರಣ-ನಿರೋಧದ ಜತೆಗೆ ಪರಮಾಣು ನಿಶ್ಯಸ್ತ್ರೀಕರಣದತ್ತ ಕ್ರಮಗಳನ್ನು - ಮೂರ್ತವಾದ ಮತ್ತು ಗಮನಾರ್ಹವಾದ ಕ್ರಮಗಳನ್ನು - ಕೈಗೊಳ್ಳಬೇಕೆಂದು ವಿಶ್ವಕ್ಕೆ ಮನವಿ ಮಾಡೋಣ. ಈ ಮೂಲಕ ಈಗಿರುವ ಅಸಮಾನತೆಗಳನ್ನು ಕ್ರೋಢೀಕರಿಸದಿರೋಣ ಮತ್ತು ದೇಶಗಳ ಶಸ್ತ್ರಾಗಾರಗಳಲ್ಲಿ ಪರಮಾಣು ಶಸ್ತ್ರಗಳ ದಾಸ್ತಾನಕ್ಕೆ ಶುಭಮಸ್ತು ಎಂದು ಹೇಳದಿರೋಣ.

ಬಲಪಡಿಸಲು ಅಮೆರಿಕಾ ಸಂಯುಕ್ತ ಸಂಸ್ಥಾನದ ಅಖಂಡ ಬೆಂಬಲದಿಂದ, ಇಂದಿನ ವಿಶ್ವದ ವಾಸ್ತವತೆಯನ್ನು ಬಿಂಬಿಸುವಂತೆ ವಿಶ್ವಸಂಸ್ಥೆಯ ಪ್ರಮುಖ ಅಂಗಗಳನ್ನು ಸುಧಾರಿಸಿ ವಿಶ್ವದ

ಪುಟ 8 ಕ್ಕೆ

ಬೆಲೆ ಏರಿಕೆ ಏನು? ಎಷ್ಟು

ಬೆಲೆ ಏರಿಕೆ ಅಂಗಡಿಗೆ ಹೋಗಿ ಅಕ್ಕಿ, ಬೇಳೆ, ಎಣ್ಣೆ ಕೊಳ್ಳುವವರಿಗೆ ಕಣ್ಣಿಗೆ ಹೊಡೆಯುವಂತೆ ಕಾಣುವಂಥದ್ದು. ಬೆಲೆ ಏರಿಕೆಗೆ ಅಂಕಿಸಂಖ್ಯೆಗಳು ಬೇಕೆ? ಅಂಗೈಯಲ್ಲಿರುವ ಹುಣ್ಣಿಗೆ ಕನ್ನಡಿ ಬೇಕೆ? ಎನ್ನಬಹುದು ನೀವು. ಬೆಲೆ-ಏರಿಕೆಯ ಅಗಾಧತೆ, ಪ್ರಮಾಣ ಅರ್ಥಮಾಡಿಕೊಳ್ಳಲು ಅಂಕೆ ಸಂಖ್ಯೆಗಳು ಬೇಕು.

ಎಲ್ಲಾ ಜೀವನಾವಶ್ಯಕ ಬೆಲೆಯ ಏರಿಕೆ -ಇಳಿತ(ಇಳಿತ ಕೇಳಿಲ್ಲಾ ಅಂದಿರಾ?) ವನ್ನು ಒಟ್ಟಿಗೆ ಅರ್ಥಮಾಡಿಕೊಳ್ಳಲು ಬಳಕೆದಾರರ ಬೆಲೆ ಸೂಚ್ಯಂಕ ಸಹಾಯ ಮಾಡುತ್ತದೆ. ಇನ್ನು ಪ್ರಮುಖ ಜೀವನಾವಶ್ಯಕ ವಸ್ತು-ಅಕ್ಕಿ, ಗೋಧಿ, ಬೇಳೆ, ಎಣ್ಣೆ ಇವುಗಳ ಬೆಲೆ ಏರಿಕೆಯಂತೂ ಇದ್ದೇ ಇದೆ. ಕಳೆದ 15 ವರ್ಷಗಳ ಬೆಲೆ ಏರಿಕೆ ಅಂಕೆ ಸಂಖ್ಯೆ ಕೊಡಲಾಗಿದೆ. ಜಾಗತೀಕರಣ/ಉದಾರೀಕರಣ ತೀವ್ರವಾದ 90 ರ ದಶಕ, ಅದರ ಹಿಂದಿನ ಅವಧಿ, ಬಿಜೆಪಿ ಆಡಳಿತ ಅವಧಿಯಲ್ಲಿ ಬೆಲೆ ಏರಿಕೆ-ಯಾವುದರಲ್ಲಿ ಎಷ್ಟು ಎಂದು ಅರ್ಥಮಾಡಿಕೊಳ್ಳಲು 15 ವರ್ಷಗಳ ಬೆಲೆ ಏರಿಕೆ ಕೊಡಲಾಗಿದೆ. ಕಳೆದ ಎರಡು ವರ್ಷಗಳ ಬಿಜೆಪಿ ಆಡಳಿತದಲ್ಲಿ ಬೆಲೆ ಏರಿಕೆ ಅರ್ಥಮಾಡಿಕೊಳ್ಳಲು ತಿಂಗಳ ಬೆಲೆ ಏರಿಕೆ ಕೊಡಲಾಗಿದೆ. ಸಪ್ತಾಹದ ಆಚರಣೆ ಬೆಲೆ ಏರಿಕೆಯ ವಿರುದ್ಧ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ಕೊಟ್ಟಿರುವ ಹಿನ್ನೆಲೆಯಲ್ಲಿ ಈ ಅಂಕೆ ಸಂಖ್ಯೆಗಳನ್ನು ಪ್ರಚಾರ-ಪ್ರಕ್ಷೋಭೆಗೆ ಅನುಕೂಲವಾಗುವಂತೆ ಕೊಡಲಾಗಿದೆ. ಎಲ್ಲಾ ಅಂಕೆ-ಸಂಖ್ಯೆಗಳು ಕೇಂದ್ರ ಸರ್ಕಾರ ಬಜೆಟ್ ಮೊದಲು ಮಂಡಿಸಿದ ಆರ್ಥಿಕ ಸಮೀಕ್ಷೆಯಿಂದ ತೆಗೆದುಕೊಂಡಿದ್ದು. ಅಂದರೆ ನಿಜವಾದ ಬೆಲೆ ಏರಿಕೆ ಈ ಸಂಖ್ಯೆಗಳು ಹೇಳುವುದಕ್ಕಿಂತಲೂ ಎಷ್ಟೋ ಹೆಚ್ಚಿರುತ್ತದೆ.

1. ಅಖಿಲ ಭಾರತ ಬಳಕೆದಾರರ ಬೆಲೆ ಸೂಚ್ಯಂಕ

ಅಖಿಲ ಭಾರತ ಬಳಕೆದಾರರ ಬೆಲೆ ಸೂಚ್ಯಂಕವನ್ನು ಹಲವು ಬಳಕೆವಸ್ತುಗಳ ಬೆಲೆಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಲಾಗುತ್ತದೆ. ಹೆಚ್ಚು ಜೀವನಾವಶ್ಯಕ ವಸ್ತುಗಳಿಗೆ ಹೆಚ್ಚಿನ 'ತೂಕ' ಇರುತ್ತದೆ.

ಕೋಷ್ಟಕ-1 ಬಳಕೆದಾರರ ಬೆಲೆ ಸೂಚ್ಯಂಕ

ವರ್ಷ	ಕೈಗಾರಿಕಾ ಕಾರ್ಮಿಕರು (1982=100) ಆಹಾರ	ಕೈಗಾರಿಕಾ ಕಾರ್ಮಿಕರು (1982=100) ಒಟ್ಟು	ನಗರದ ಉದ್ಯೋಗಿಗಳು (1984=100) ಒಟ್ಟು	ಗ್ರಾಮೀಣ ಕೃಷಿ ಕಾರ್ಮಿಕರು (1986-87=100) ಒಟ್ಟು
1986-87	141	137	115	97
87-88	154	149	126	112
88-89	169	163	136	124
89-90	177	173	145	125
90-91	199	193	161	146
91-92	230	219	183	178
92-93	254	240	202	179
93-94	272	258	216	200
94-95	297	279	232	221
95-96	337	313	259	237
96-97	369	342	283	262
97-98	388	366	302	284
98-99	431	414	340	293
1999-2000 ನವೆಂಬರ್	462	438	357	316

ಈ ಸೂಚ್ಯಂಕ ಲೆಕ್ಕ ಹಾಕುವಲ್ಲಿ. ಉದಾಹರಣೆಗೆ ಅರ್ಧದಷ್ಟು ತೂಕ ಆಹಾರಕ್ಕೆ ಸಂಬಂಧಿಸಿದ ಸರಕುಗಳಿಗೆ ಅರ್ಧದಷ್ಟು ಹೆಚ್ಚು ತೂಕ ಇರುತ್ತದೆ. ಉದಾಹರಣೆಗೆ ಅಕ್ಕಿಗೆ ಹನ್ನೆರಡುವರೆ(ನೂರರಲ್ಲಿ), ಗೋಧಿ-ಗೋಧಿ ಹಿಟ್ಟಿಗೆ ಆರುವರೆ(ನೂರರಲ್ಲಿ) ತೂಕವಿರುತ್ತದೆ. ಈ ಸೂಚ್ಯಂಕವನ್ನು ಪ್ರತಿ ತಿಂಗಳು ಲೆಕ್ಕ ಹಾಕಲಾಗುತ್ತದೆ. ಉದಾಹರಣೆಗೆ ಕಳೆದ ವರ್ಷ ಈ ಸೂಚ್ಯಂಕ 100 ಇದ್ದದ್ದು, ಈ ವರ್ಷ 150 ಆದರೆ ಅರ್ಧದಷ್ಟು ಬೆಲೆಗಳು ಹೆಚ್ಚಿವೆ ಎಂದರ್ಥ (ಎಲ್ಲಾ ಅವಶ್ಯಕ ಸರಕುಗಳ ಬೆಲೆ ತೆಗೆದುಕೊಂಡು) ಬರಿಯ ಒಂದು ಸರಕಿನ ಬೆಲೆ ಹೆಚ್ಚಾದರೆ ಈ ಸೂಚ್ಯಂಕ ಏರುವುದಿಲ್ಲ. ಒಟ್ಟಾರೆ ಬೆಲೆ ಏರಿಕೆಯಾದಾಗ ಮಾತ್ರ ಈ ಸೂಚ್ಯಂಕ ಏರುವುದು.

ಅಖಿಲ ಭಾರತ ಬಳಕೆದಾರರ ಬೆಲೆ ಸೂಚ್ಯಂಕವನ್ನು ಕೈಗಾರಿಕಾ ಕಾರ್ಮಿಕರಿಗೆ, ನಗರ ಪ್ರದೇಶದ ಉದ್ಯೋಗಿಗಳಿಗೆ, ಗ್ರಾಮೀಣ ಕೃಷಿ

ಕೋಷ್ಟಕ-2 ಬಳಕೆದಾರರ ಬೆಲೆ ಸೂಚ್ಯಂಕ
(ಬಿಜೆಪಿ ದುರಾಡಳಿತದ ಎರಡು ವರ್ಷಗಳಲ್ಲಿ)

ವರ್ಷ ತಿಂಗಳು	ಕೈಗಾರಿಕಾ ಕಾರ್ಮಿಕರು 1982:100 ಆಹಾರ	ಕೈಗಾರಿಕಾ ಕಾರ್ಮಿಕರು 1982:100 ಒಟ್ಟು	ನಗರದ ಉದ್ಯೋಗಿಗಳು 984-85:100 ಒಟ್ಟು	ಕೃಷಿ ಕಾರ್ಮಿಕರು 1986-87:100 ಒಟ್ಟು
1998				
ಮೇ	417	389	320	276
ಜುಲೈ	444	411	336	289
ಸೆಪ್ಟೆಂಬರ್	456	420	340	297
ನವೆಂಬರ್	485	438	350	310
1999				
ಜನವರಿ	444	420	342	299
ಮಾರ್ಚ್	431	414	340	296
ಮೇ	437	419	344	298
ಜುಲೈ	443	424	350	304
ಸೆಪ್ಟೆಂಬರ್	451	429	353	310

ಲೆಕ್ಕಹಾಕಲಾಗುತ್ತದೆ. ಅಲ್ಲಿ ತೆಗೆದುಕೊಳ್ಳುವ ಸರಕುಗಳು, ಅವುಗಳ 'ತೂಕ' ಬೇರೆ ಬೇರೆಯಾಗಿರುತ್ತದೆ.

ಕೋಷ್ಟಕ -1ರಲ್ಲಿ ಕಳೆದ 15 ವರ್ಷಗಳ ಬೆಲೆ ಏರಿಕೆಯಿಂದ ತಿಳಿದುಬರುವ ಸಂಗತಿ ಎಂದರೆ

. 15 ವರ್ಷಗಳಲ್ಲೇ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ 98-99ರ ಸಾಲಿನ ವಾರ್ಷಿಕ ಬೆಲೆ ಏರಿಕೆ ಅದರಲ್ಲೂ ಆಹಾರ ಧಾನ್ಯಗಳ ಅತಿ ಹೆಚ್ಚು(ಕೈಗಾರಿಕಾ ಕಾರ್ಮಿಕರಿಗೆ -48, ನಗರದ ಉದ್ಯೋಗಿಗಳ-38)

. ಒಟ್ಟಾರೆ ಬೆಲೆ ಏರಿಕೆಗಿಂತ ಆಹಾರ ಧಾನ್ಯಗಳ ಬೆಲೆ ಏರಿಕೆ ಹೆಚ್ಚು ವೇಗವಾಗಿ ಆಗುತ್ತಿದೆ.

. ಈಗಿನ ಬೆಲೆ 1982 ರ ಆಹಾರ ಧಾನ್ಯದ ಬೆಲೆಯ ನಾಲ್ಕು ಪಟ್ಟು (ಕೈಗಾರಿಕಾ ಕಾರ್ಮಿಕರು-1982-100, 1999 ನವೆಂಬರ್ 462)

. 80ರ ದಶಕದಲ್ಲಿ 8 ವರ್ಷಗಳಲ್ಲಿ ಆಗಿದ್ದ ಆಹಾರ ಧಾನ್ಯಗಳ ಬೆಲೆ ಏರಿಕೆ 90 ರ ದಶಕದಲ್ಲಿ ಜಾಗತೀಕರಣದ ದುಷ್ಪರಿಣಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಆಗುತ್ತಿದೆ. (ಕೈಗಾರಿಕಾ ಕಾರ್ಮಿಕರ ಆಹಾರ ಬೆಲೆ ಸೂಚ್ಯಂಕ 1982:100, 89-90: 177, 92-93:254, 95-96: 337, 98-99:431)

. ನಗರದ ಉದ್ಯೋಗಿಗಳು, ಕೃಷಿಕೂಲಿಗಾರರ ಬೆಲೆ ಸೂಚ್ಯಂಕ ಕಡಿಮೆಯಿರುವುದರಿಂದ ಬೆಲೆ ಕಡಿಮೆ ಎಂದಲ್ಲ. ನಗರದ ಉದ್ಯೋಗಿಗಳಿಗೆ 1984-85 ಕ್ಕೆ ನೂರು ಎಂದು ತೆಗೆದುಕೊಂಡದ್ದು, ಕೃಷಿಕಾರ್ಮಿಕರಿಗೆ 1986-87 ರಲ್ಲಿ ನೂರು ಎಂದು ತೆಗೆದುಕೊಂಡದ್ದರಿಂದ ಕೃಷಿಕಾರ್ಮಿಕರಿಗೆ 1982 ರಲ್ಲಿ ನೂರು ಎಂದು ಆಧಾರವಾಗಿ ತೆಗೆದುಕೊಳ್ಳಲಾಗಿತ್ತು.

ಕೋಷ್ಟಕ-2 ರಿಂದ ತಿಳಿಯುವುದೇನೆಂದರೆ

. 80 ದಶಕದಲ್ಲಿ ವಾರ್ಷಿಕ ಬೆಲೆ ಏರಿಕೆ (ಸುಮಾರು 10-15 ಅಂಶಗಳು)ಈಗ ಎರಡು ತಿಂಗಳ ಬೆಲೆ ಏರಿಕೆ ಆಗಿದೆ(1986-87, 87-88, 88-89 ವಾರ್ಷಿಕ ಬೆಲೆ ಏರಿಕೆ, 1999, ಮೇ, ಜುಲೈ, ಸೆಪ್ಟೆಂಬರ್, ನವೆಂಬರ್ ಬೆಲೆ ಏರಿಕೆ ನೋಡಿ)

ಕೋಷ್ಟಕ - 5-1999ರಲ್ಲಿ ಬೆಲೆ ಏರಿಕೆ

ವಸ್ತು	ಬೆಲೆ ಏರಿಕೆ ಮೊದಲು	ಜನವರಿ 99ರಲ್ಲಿ ಬೆಲೆಏರಿದ ನಂತರ
ಸಕ್ಕರೆ ಕೆ.ಜಿ.ಗೆ	11-40	12.00
ಯೂರಿಯಾ 50 ಕೆ.ಜಿ	183	200
ಅಡುಗೆ ಅನಿಲ (ಸಿಲಿಂಡರಿಗೆ)	130	146

. ನವೆಂಬರ್ 1999 ರಲ್ಲಿ ಬೆಲೆ ಏರಿಕೆ ತುತ್ತತುದಿಗೆ ಹೋಗಿತ್ತು. ಈಗ ಪುನಃ ಆ ಮಟ್ಟದ ಹತ್ತಿರ ಹೋಗುತ್ತಿದೆ. ಬಜೆಟ್ ನಂತರದ ಪರಿಣಾಮದಿಂದ ಅದನ್ನು ದಾಟಿ ಹೋಗಬಹುದು.

2. ಅವಶ್ಯಕ ಆಹಾರ-ವಸ್ತುಗಳ ಬೆಲೆ ಏರಿಕೆ ದರ

ಬಿಜೆಪಿಯ 2 ವರ್ಷಗಳ ಆಡಳಿತದಲ್ಲಿ ಕೆಲವು ಜೀವನಾವಶ್ಯಕ ಆಹಾರ-ವಸ್ತುಗಳ ವಾರ್ಷಿಕ ಬೆಲೆ ಏರಿಕೆಯನ್ನು ಕೋಷ್ಟಕ-3 ರಲ್ಲಿ ಕೊಡಲಾಗಿದೆ. ಒಂದು ವರ್ಷದ ನವೆಂಬರ್‌ನಿಂದ ಇನ್ನೊಂದು ವರ್ಷದ ನವೆಂಬರ್‌ಗೆ ಆಗಿರುವ ಶೇಕಡಾ ಬೆಲೆ ಏರಿಕೆಯನ್ನು ಕೊಡಲಾಗಿದೆ.

. ವಿಪರೀತವಾಗಿ ಏರಿದ ಸಾಸಿವೆ ಎಣ್ಣೆ, ಮೆಣಸು, ಈರುಳ್ಳಿ, ಆಲೂಗಡ್ಡೆ, ಚಹಾ ಬೆಲೆಗಳು ಮಾತ್ರ ಈ ವರ್ಷ ಸ್ವಲ್ಪ ಕಡಿಮೆಯಾಗಿದೆ. ಆದರೆ 1998 ರ ಏರಿಕೆಯ ಹಿಂದಿನ ಮಟ್ಟಕ್ಕೆ ಬಂದಿಲ್ಲ.

1998 ರಲ್ಲಿ ಎಲ್ಲಾ ಸರಕುಗಳು

ಆದರೆ ಕಳೆದ ವರ್ಷದಷ್ಟು ವಿಪರೀತವಾಗಿ ಏರಿಲ್ಲ.

3. ರೇಶನ್ ಅಕ್ಕಿ-ಗೋಧಿಗಳ ಬೆಲೆ ಏರಿಕೆ

ರೇಶನ್‌ನಲ್ಲಿ ಕೇಂದ್ರ ಸರ್ಕಾರ ಅಕ್ಕಿ-ಗೋಧಿಗಳಿಗೆ ಯಾವ ಬೆಲೆಯಲ್ಲಿ ಕೊಡುತ್ತದೆ ಎಂಬುದು ಒಟ್ಟಾರೆ ಬೆಲೆಯನ್ನು ನಿರ್ಧರಿಸುತ್ತದೆ. ಅಲ್ಲಿ ಬೆಲೆ ಏರಿಸಿದರೆ ಒಟ್ಟಾರೆ ಬೆಲೆ ಏರುತ್ತದೆ. 1997-98 ರಿಂದ ಬಡತನದ ಮೇಲಿರುವವರಿಗೆ ರೇಶನ್ ಧಾನ್ಯಗಳ ಬೆಲೆ ಏರಿಸಿದ್ದು, ಒಟ್ಟಾರೆ ಬೆಲೆ ಏರಿಕೆಗೆ ಒಂದು ಪ್ರಮುಖ ಕಾರಣವಾಗಿದೆ. ಕಳೆದ 10 ವರ್ಷದಿಂದ ರೇಶನ್‌ನಲ್ಲಿ ಅಕ್ಕಿ-ಗೋಧಿಗಳ ಬೆಲೆ ಕೋಷ್ಟಕ - 4 ರಲ್ಲಿ ಇದೆ.

ಕೋಷ್ಟಕ-3 ಜೀವನಾಶ್ಯಕ ವಸ್ತುಗಳ ಬೆಲೆ ಏರಿಕೆ
(ಬಿಜೆಪಿ ದುರಾಡಳಿತದ ವರ್ಷಗಳಲ್ಲಿ)

ಜೀವನಾವಶ್ಯಕ ವಸ್ತು	ಶೇಕಡಾವಾರು ಏರಿಕೆ (ನವೆಂಬರ್ ನಿಂದ ನವೆಂಬರ್‌ವರೆಗೆ) 1998-99(%)	1999-2000(%)
ಅಕ್ಕಿ	13.1	6.3
ಗೋಧಿ	9.0	12.5
ಗೋಧಿ ಹಿಟ್ಟು	17.7	9.9
ಜೋಳ	32.0	13.4
ಬೇಳೆ	28.7	0.9
ಉದ್ದು	31.8	10.2
ತೆಂಗಿನೆಣ್ಣೆ	29.3	19.5
ಸಾಸಿವೆ ಎಣ್ಣೆ	103.3	-33.5
ಮೆಣಸು	69.9	-12.6
ಈರುಳ್ಳಿ	246.9	-65.0
ಆಲೂಗಡ್ಡೆ	156.7	- 46.6
ಚಹಾ	34.6	-3.7
ಸೀಮೆ ಎಣ್ಣೆ	11.3	1.1

ಹೊಸ ಸರ್ಕಾರಗಳು ಗೆದ್ದು ಬಂದರ ಹೊಸದರಲ್ಲಿ ರೇಶನ್ ಅಕ್ಕಿ-ಗೋಧಿ ಬೆಲೆ ಏರಿಕೆಯಲ್ಲಿ ಭಾರಿ ಹೆಚ್ಚಳ ಮಾಡಿವೆ - 1991-92 ರಲ್ಲಿ ಕಾಂಗ್ರೆಸ್ ಸರ್ಕಾರ (ಅಕ್ಕಿಗೆ ಶೇಕಡಾ 30) 1997-98 ರಲ್ಲಿ ಸಂಯುಕ್ತ ರಂಗ ಸರ್ಕಾರ (ಅಕ್ಕಿಗೆ ಶೇಕಡಾ 30) ಇವರೆಲ್ಲರನ್ನು ಮೀರಿಸುವಂತೆ ಬಿಜೆಪಿ ಸರ್ಕಾರ (ಗೋಧಿಯಲ್ಲಿ ಶೇಕಡಾ 444) ರೇಶನ್ ಆಹಾರ ವಸ್ತುಗಳ ಬೆಲೆ ಏರಿಸಿ ಹೊಟ್ಟೆ ಮೇಲೆ ಹೊಡೆದಿದೆ.

ಕೋಷ್ಟಕ 6. ಮಾರ್ಚ್ 2000ದಲ್ಲಿ ಬೆಲೆ ಏರಿಕೆ

ವಸ್ತು	ಬೆಲೆ ಏರಿಕೆ ಮೊದಲು	ಮಾರ್ಚ್ 2000 ದಲ್ಲಿ ಬೆಲೆ ಏರಿಕೆ
ಗೋಧಿ(ಬಡವರಿಗೆ)	2.50	4.50
ಅಕ್ಕಿ (ಬಡವರಿಗೆ)	3.50	5.90
ಗೋಧಿ(ಬಡವರಲ್ಲದವರು)	6.82	9-00
ಅಕ್ಕಿ (ಬಡವರಲ್ಲದವರು)	9.05	11.80
ಸಕ್ಕರೆ	12-00	13-00
ಸೀಮೆಎಣ್ಣೆ	2-80	5-64
ಅಡುಗೆ ಅನಿಲ	155.35	202.25

ಕೋಷ್ಟಕ-4 ರೇಶನ್ ಅಕ್ಕಿ-ಗೋಧಿಗಳ ಬೆಲೆ ಏರಿಕೆ

ವರ್ಷ	ಗೋಧಿ ಬೆಲೆ ರೂ. (ಕೆ.ಜಿ.ಗೆ)	ಶೇಕಡಾ ಏರಿಕೆ ಹಿಂದಿನ ವರ್ಷದಿಂದ %	ಅಕ್ಕಿ (ಕೆ.ಜಿ.ಗೆ)	ಶೇಕಡಾ ಏರಿಕೆ (ಹಿಂದಿನ ವರ್ಷದಿಂದ)
1990-91	2.34	-	2.89	-
91-92	2.80	19.7	3.77	30.4
92-93	2.80	0.0	3.77	0.0
93-94	3.30	17.9	4.37	15.9
94-95	4.02	21.8	5.37	22.9
95-96	4.02	0.9	5.37	0.0
96-97	4.02	0.0	5.37	0.0
1997-98				
ಬಡವರಿಗೆ	250	-	3.50	-
ಬಡವರಲ್ಲದವರಿಗೆ	4.50	12.0	7.00	30.3
1998-99				
ಬಡವರಿಗೆ	2.50	0.0	3.50	0.0
1999-2000				

ಕೋಷ್ಟಕ 7 ಸಗಟು ಬೆಲೆ ಸೂಚ್ಯಾಂಕ ಏರಿಕೆ
ಕೆಲವು ಜನಮಾವಶ್ಯಕ ವಸ್ತುಗಳು.

ವರ್ಷ ತಿಂಗಳು	ಅಕ್ಕಿ	ಗೋಧಿ	ಧಾನ್ಯಗಳು	ಚಹ	ಸಕ್ಕರೆ ಬೆಲ್ಲ	ಖಾದ್ಯ ತೈಲ	ಗೊಬ್ಬರ
1982	100	100	100	100	100	100	100
1986-87	134	127	128	169	118	144	108
1990-91	178	172	228	300	152	223	99
1995-96	316	271	399	348	244	302	211
1996-97	347	330	449	359	251	301	212
1997-98	365	333	440	533	304	299	224
1998							
ಮೇ	369	337	428	547	310	320	223
ಜುಲೈ	383	357	453	504	323	339	223
ಸೆಪ್ಟೆಂಬರ್	403	362	464	516	338	365	223
ನವೆಂಬರ್	415	374	526	519	308	358	230
1999							
ಜನವರಿ	412	389	507	468	294	362	233
ಮಾರ್ಚ್	421	416	457	415	287	355	234
ಮೇ	424	386	480	642	306	343	234
ಜುಲೈ	434	410	485	563	311	320	233
ಸೆಪ್ಟೆಂಬರ್	459	429	500	592	318	309	233
ನವೆಂಬರ್	456	436	510	599	313	300	233

4. ಬಿಜೆಪಿ ಸರಕಾರ ಮಾಡಿದ ಬೆಲೆಯೇರಿಕೆಯದ್ದೇ ಸಿಂಹಪಾಲು.

ಬಿಜೆಪಿ ಸರ್ಕಾರ ಮಾಡಿದ ಬೆಲೆ ಏರಿಕೆ ಇಳಿಕೆ, ಒಟ್ಟಾರೆ ಬೆಲೆ ಏರಿಕೆಯದೇ ಸಿಹಪಾಲು ಇದಕ್ಕೆ ಉದಾಹರಣೆ ಅಕ್ಕಿ, ಗೋಧಿ ಬಗ್ಗೆ ಈಗಾಗಲೇ ನೋಡಿದ್ದೇವೆ. ಜನವರಿ 99ರಲ್ಲಿ ಬಿಜೆಪಿ ಸರ್ಕಾರ ಮಾಡಿದ ಇತರ ಏರಿಕೆಗಳು ನೋಡಿ.

5. ಕೆಲವು ಜೀನವಾನಶ್ಯಕ ವಸ್ತುಗಳ ಬೆಲೆ ಏರಿಕೆ

(ಸಗಟು ಬೆಲೆ ಸೂಚ್ಯೂಂಕದ ಆಧಾರದ ಮೇಲೆ)

6. ಬೆಂಗಳೂರಲ್ಲಿ ಬೆಲೆ ಏರಿಕೆ

ಬೆಂಗಳೂರಲ್ಲಿ ಕೆಲವು ಜೀನಮಾವಶ್ಯಕ ವಸ್ತುಗಳ ಸಗಟು ಮಾರುಕಟ್ಟೆ ಬೆಲೆ ಏರಿಕೆ ಬಿಜೆಪಿ ಸರ್ಕಾರ ಬರುವ ಮೊದಲು, ಬಿಜೆಪಿ ಮೊದಲ ಬಜೆಟ್ ನಂತರ, ಏಪ್ರಿಲ್ 2000ರಲ್ಲಿ ಹೀಗಿವೆ.

ವಸ್ತು	ಮಾರ್ಚ್29. 1998	ಏಪ್ರಿಲ್ 2000
ಅಕ್ಕಿ ಉತ್ತಮ	1500	1900
ಅಕ್ಕಿ ಮಧ್ಯಮ	1300	1750
ರಾಗಿ	500	740
ಜೋಳ	760	1300
ಅವರೆ	1650	2250
ಹುರುಳಿ	780	950
ಗೋಧಿ	1000	1200
ರವೆ	1060	1400
ಮೆಕ್ಕೆ ಜೋಳ	410	510
ಸಕ್ಕರೆ	1465	1520
ಹುಣಸೆ ಹಣ್ಣು	1800	2300
ಕಡಲೆಕಾಯಿ ಎಣ್ಣೆ	3860	3760

ಪ್ರಜಾ ಪ್ರಭುತ್ವ ಮತ್ತು ಹಣಕಾಸಿನ ದಬ್ಬಾಳಿಕೆ

ಸಂವಿಧಾನ ಪರಾಮರ್ಶೆಗಾಗಿ ಸಮಿತಿ ರಚಿಸಿರುವುದರಿಂದ ಪ್ರಜಾಪ್ರಭುತ್ವಕ್ಕೆ ಉಂಟಾಗಿರುವ ಗಂಡಾಂತರವನ್ನು ಬಹಳ ಜನ ಗುರುತಿಸಿದ್ದಾರೆ ಆದರೆ 2000.01 ನೇ ಸಾಲಿಗೆ ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್ ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸುವ ಪ್ರಸ್ತಾಪಗಳನ್ನು ಹೊಂದಿದೆ ಎಂಬುದು ಬಹುತೇಕರ ಗಮನಕ್ಕೆ ಬಾರದೇ ಹೋಗಿದೆ.

ಉದಾಹರಣೆಗೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಸ್ವಾಯತ್ತೆ ನೀಡುವ ಪ್ರಸ್ತಾಪ. ಇದು ಜಾರಿಗೆ ಬಂದರೆ ಹಣಕಾಸು ಮತ್ತು ವಿನಿಮಯ ದರಕ್ಕೆ ಸಂಬಂಧಿಸಿದ ಒಟ್ಟಾರೆ ನೀತಿಗಳು ರಾಜಕೀಯ ಹಿಡಿತದಿಂದ ಹೊರಹೋಗಿ ಈ ದೇಶದ ಪ್ರಜೆಗಳಿಗೆ ಜವಾಬ್ದಾರರಲ್ಲದವರ ಹಿಡಿತಕ್ಕೆ ಹೋಗುತ್ತದೆ. ರಾಜಕೀಯ ಹಿಡಿತವೆಂದರೆ ಪಾರ್ಲಿಮೆಂಟಿನ ಹಿಡಿತ. ಎಷ್ಟೇ ನ್ಯೂನತೆಗಳಿದ್ದರೂ ಇಲ್ಲಿ ದೇಶದ ಜನತೆಗೆ ಜವಾಬ್ದಾರಿ ಇರುತ್ತದೆ. ಸಂಸದರನ್ನು ಜನರು ಆರಿಸುತ್ತಾರೆ. ಆ ಸಂಸದರು ಭಾರತೀಯ ರಿಸ್ವ್‌ಬ್ಯಾಂಕಿನ ನೀತಿಗಳನ್ನು ನಿಯಂತ್ರಿಸುತ್ತಾರೆ.

ಹಲವು ವಸ್ತುಗಳ ಬೆಲೆಗಳ ನಿಯಂತ್ರಣ ಸರ್ಕಾರದ ಹೊರಗೇ ಉಳಿಯಬಹುದಾದರೆ ಬಡ್ಡಿ ದರ ಮತ್ತು ವಿನಿಮಯ ದರದ ನಿಯಂತ್ರಣ ಯಾಕೆ ಸರ್ಕಾರದ ಕೈಯಲ್ಲಿರಬೇಕೆಂದು ಕೇಳುವವರಿದ್ದಾರೆ. ಇದಕ್ಕೆ ಉತ್ತರ ಸರಳ ಬಡ್ಡಿ ದರ ಮತ್ತು ವಿನಿಮಯದರ ಎರಡು ಬಹು ವಿಶಿಷ್ಟವಾದ ಬೆಲೆಗಳು. ಇವುಗಳ ಬೆಲೆಯ ಮೇಲಿನಿಂದ ಅಪಾರ ಜನರ ಜೀವನ ಮಟ್ಟ ನಿರ್ಧರಿತವಾಗುತ್ತದೆ ಆದ್ದರಿಂದಲೇ ಭಾರತೀಯ ರಿಸರ್ವ್‌ಬ್ಯಾಂಕಿಗೆ ಸ್ವಾಯತ್ತತೆ ನೀಡ ಬಾರದೆನ್ನುವುದು.

ಇದು ಬರೀ ಒಣ ವಾದವಲ್ಲ. ಸ್ವಾಯುತ್ತತೆ ನೀಡಿದರೆ ಅಂತಹ ಕಾರ್ಯ ಮಾರುಕಟ್ಟೆಯಲ್ಲಿ ಸ್ಥಿರತೆ ತರಲು ವಿದೇಶೀ ಹೂಡಿಕೆದಾರರನ್ನು ಖುಷಿಯಲ್ಲಿಡಲು ಪ್ರಯತ್ನಿಸುತ್ತದೆ. ಅಂತರ್ರಾಷ್ಟ್ರೀಯವಾಗಿ ಹರಿದಾಡುವ ಬಂಡವಾಳಕ್ಕೆ ಪ್ರತಿಫಲದ ತೃಪ್ತಿ ನೀಡಬಯಸುತ್ತದೆ. ಇದಕ್ಕೆ ಎರಡು ಅರ್ಥವಿರುತ್ತದೆ. ಒಂದನೇಯದಾಗಿ ಪಟ್ಟಾ ವ್ಯವಹಾರಸ್ಥರ ವಿಶ್ವಾಸ ಪಡೆಯಲು ಏನೇನು ಮಾಡಬೇಕೂ ಅದೆಲ್ಲವನ್ನು ಅದು ಮಾಡಬಯಸುತ್ತದೆ. ಎರಡನೇಯದಾಗಿ ಈ ಕೇಂದ್ರ ಬ್ಯಾಂಕನ್ನು ಐ.ಎಂ.ಎಫ್. ವಿಶ್ವಬ್ಯಾಂಕುಗಳ ವಿಶ್ವಾಸ ಪಡೆದ ವ್ಯಕ್ತಿಗಳು ಅವುಗಳ ಈಗಿನ ಯಾ ಮಾಜಿ ಅಧಿಕಾರಿಗಳು ಚುಕ್ಕಾಣಿ ಹಿಡಿಯಬೇಕಾಗುತ್ತದೆ ಬೇರೆ ಮಾತಿನಲ್ಲಿ ಹೇಳುವುದಾದರೆ ಅಂತರಾಷ್ಟ್ರೀಯ ಹಣಕಾಸುದಾರರ ಹಿತೋಟಿಗೆ ಇದು ಒಳಪಡುತ್ತವೆ ಹೊರತು ಭಾರತದ ಜನರ ಹತೋಟಿಗಲ್ಲ.

ಹೀಗಾದರೆ ತಪ್ಪೇನು? ನಮ್ಮ ದೇಶದಲ್ಲಿ ಹಣಹೂಡಿಕೆ ಮಾಡುವವರಿಗೆ ಇಂತಹ ಪ್ರತಿಫಲ ನೀಡಿದರೆ ಅವರಿಂದ ಹೆಚ್ಚೆಚ್ಚು ಹಣ ಹರಿದು ಬಂದು ದೇಶದ ಆರ್ಥಿಕಕ್ಕೆ ಒಳ್ಳೆಯ ದಾಗುವುದಿದ್ದರೆ ಅದರಲ್ಲಿ ತಪ್ಪೇನು? ಎಂಬ ಪ್ರಶ್ನೆಗಳನ್ನು ಯಾರಾದರೂ ಕೇಳಬಹುದು. ಇಷ್ಟಕ್ಕೂ ಅಮೇರಿಕದ ಕೇಂದ್ರ ಬ್ಯಾಂಕಿಗೂ ಸ್ವಾಯತ್ತತೆ ನೀಡಿಲ್ಲವೇ? ಆ ದೇಶದ ಆರ್ಥಿಕ ಉತ್ತಮವಾಗಿದೆಯಲ್ಲವೆ? ನಾವು ಅವರನ್ನು ಅನುಸರಿಸಿದರೆ ತಪ್ಪೇನು?

ಆದರೆ ಈ ಪ್ರಶ್ನೆ ಕೇಳುವವರು ಹಾಟ್ ಮನಿಯ ಹರಿದಾಟ ಮತ್ತು ವಿದೇಶಿ ನೇರ ಹೂಡಿಕೆಯ ನಡುವಿನ ವ್ಯತ್ಯಾಸವನ್ನು ಮರೆಯುತ್ತಾರೆ. ವಿದೇಶಿ ನೇರ ಹೂಡಿಕೆ ಮಾತ್ರ ಬೆಳವಣಿಗೆಗೆ ಕಾಣಿಕೆ ನೀಡಬಲ್ಲದೇ ಹೊರತು ತನ್ನ ಕೊಡುಗೆಯನ್ನು ನೀಡಬಲ್ಲದು.

ಇದಕ್ಕೆಬದಲಾಗಿ ಹಾಟ್ ಮನಿ ಹರಿದಾಟ ಹಣದುಬ್ಬರ ಇಳಿಸುವ ನೀತಿಗಳನ್ನು ಬಯಸುತ್ತದೆ. ಇದರಿಂದ ಬೆಳವಣಿಗೆ ಕುಂಠಿತವಾಗುತ್ತದೆ. ಆದ್ದರಿಂದ ಸರಿಯಾದ ತರಹದ ಹೂಡಿಕೆ ಬರಬೇಕಾದ ಅವಶ್ಯಕತೆ ನಮಗಿದೆ ಹಾಗೆ ಬೇಡವಾದ ಬಂಡವಾಳ ಬರದಂತೆ ತಡೆಯಲು ನಮಗೆ ರಾಜಕೀಯ ಮಧ್ಯ ಪ್ರವೇಶದ ಅವಶ್ಯಕತೆ ಇದೆ. ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳು ನಡೆಸುವ ಸ್ವಾಯುತ್ತತೆ ಹೊಂದಿದ ರಿಸರ್ವ್‌ಬ್ಯಾಂಕ್ ಇದನ್ನು ಮಾಡಲಾರದಲ್ಲವೇ?

ಅಮೇರಿಕ ಮತ್ತು ಬ್ರಿಟನ್ನಿನ ಉದಾಹರಣೆಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಸರಿಯಾದದ್ದಲ್ಲ ಯಾಕೆಂದರೆ ಈ ದೇಶಗಳು ಅಂತರಾಷ್ಟ್ರೀಯ ಹಣಕಾಸಿನ ನೆಲೆಗಳು ಹಣಕಾಸು ಈ ನೆಲೆಯಿಂದ ಸುಲಭದಲ್ಲಿ ಲಾಭ ಸಿಗುವ ಜಗತ್ತಿನ ಎಲ್ಲ ಕಡೆ ಸುತ್ತಾಡಿ ಮತ್ತೆ ಇದೇ ನೆಲೆಗೆ ಬಂದು ತಲುಪಿ ಬಿಡುತ್ತದೆ. ಈ ದೇಶಗಳ ಹಣಕಾಸು ವಲಯ (ಅಲ್ಲಿನ ಜನಸಂಖ್ಯೆಗೆ ಹೋಲಿಸಿದರೆ) ಅತಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುತ್ತದೆ ಅಥವಾ ಖರ್ಚಿನ ಹೊಳೆಯನ್ನು ಹರಿಸಿ ಕೊಳ್ಳುವಿಕೆ ಹೆಚ್ಚಿಸುತ್ತದೆ. ಆದರೆ ಭಾರತದಂತಹ ದೇಶದಲ್ಲಿ ಇದು ಹಿಂಜರಿತವನ್ನು ಸೃಷ್ಟಿಸುತ್ತವೆ ಬೆಳವಣಿಗೆಯು ಕತ್ತು ಹಿಚುಕುತ್ತದೆ. ಯಾಕೆಂದರೆ ಇಲ್ಲಿ ಹಣಕಾಸು ನಮ್ಮ ದೇಶವನ್ನು ಬಿಟ್ಟುಹೋಗದಂತೆ ತಡೆಯ ಬೇಕಾಗುತ್ತದೆ

ಭಾರತಕ್ಕೆ ಉದಾರೀಕರಣ ಸರಿಯಾದದ್ದಲ್ಲ ಎಂಬುದೂ ಇದೇ ಕಾರಣಕ್ಕೆ. ಅದು ಅಂತರಾಷ್ಟ್ರೀಯ ಹಣಕಾಸಿನ ದಬ್ಬಾಳಿಕೆಗೆ ದೇಶವನ್ನು ಒಡ್ಡುತ್ತದೆ. ಜನ ವಿರೋಧಿ ಯಾಗುವುದರ ಜೊತೆಗೆ ಉತ್ಪಾದನಾ ವಿರೋಧಿಯು ಆಗಿಬಿಡುತ್ತದೆ. ಈ ಸಾಲಿನ ಬಜೆಟ್ಟು ಉದಾರೀಕರಣದ ಒಂದು ಕ್ರಮ. ಭಾರತೀಯ ರಿಸರ್ವ್ ಬ್ಯಾಂಕಿಗೆ ಸ್ವಾಯತ್ತೆ ನೀಡುವುದು ಅದರ ಒಂದು ಅಂಶವಷ್ಟೇ.

ಇದಲ್ಲದೆ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸರ್ಕಾರದ ಪಾಲನ್ನು ಶೇ. 33 ಕ್ಕೆ ಇಳಿಸುವುದು ಅಂತಹ ಇನ್ನೊಂದು ಪ್ರಸ್ತಾಪ ಇದು ನರಸಿಂಹಂ ಸಮಿತಿಯ ಶಿಫಾರಸ್ಸುಗಳಿಗೆ ಅನುಗುಣವಾಗಿದೆ. ಹಣಕಾಸು ಮಂತ್ರಿಗಳ ಸಾರ್ವಜನಿಕ ವಲಯದ ಗುಣಗಳನ್ನು ಬದಲಾಯಿಸುವುದಿಲ್ಲ ಎಂಬ ಮಾತಿಗೆ ಅರ್ಥವೇ ಇಲ್ಲ. ಯಾಕೆಂದರೆ ಇಲ್ಲಿ ಖಾಸಗಿ ಮತ್ತು ವಿದೇಶಿ ಬಂಡವಾಳಿಗರು ಶೇರುಗಳನ್ನು ಹೊಂದ ಬಹುದು. ಭಾರತದ ಬಂಡವಾಳಿಗರು ಹಣಕಾಸನ್ನು ರಫ್ತು ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಈ ಹಣಕಾಸು ಸಟ್ಟಾ ವ್ಯವಹಾರಕ್ಕೆ ಬಳಕೆಯಾಗುತ್ತದೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಭಾರತೀಯ ಕಂಪನಿಗಳಲ್ಲಿ ಶೇ 40 ರ ವರೆಗೆ ಶೇರು ಪಡೆಯತ್ತದೆ ಈ ಮೂಲಕ ಭಾರತೀಯ ಉದ್ದಿಮೆಗಳ ನಿರಾಷ್ಟ್ರೀಕರಣ ಆಗುತ್ತದೆ ಈ ವಿದೇಶಿ ಹಣಕಾಸಿಗೆ ಹಲವು ರಿಯಾಯತಿಗಳನ್ನು ನೀಡಲಾಗುತ್ತದೆ.

ಒಟ್ಟಾರೆಯಾಗಿ ಈ ಕ್ರಮಗಳು ಮೂರು ಮೂಲಭೂತ ಬದಲಾವಣೆಗಳನ್ನು ತರುತ್ತವೆ. ಮೊದಲನೆಯದಾಗಿ ಹಣಕಾಸು ವಲಯ ಸಾರ್ವಜನಿಕರಿಗೆ ಜವಾಬ್ದಾರಿ ಹೊಂದಿರುವುದಿಲ್ಲ. ಎರಡನೇಯದಾಗಿ ದೇಶದ ಉತ್ಪಾದಕ ಆರ್ಥಿಕಕ್ಕೆ ಅದು ಅಡಿಯಾಳಾಗಿರುವ ಬದಲು ಸ್ವಾಯತ್ತತೆ ಪಡೆದು ಸಟ್ಟಾ- ವ್ಯವಹಾರಗಳಿಗೆ ಲಭ್ಯವಾಗುತ್ತದೆ ... ಬುನಾದಿಯಾಗಿ ದೇಶದ ಹಣಕಾಸು ವಲಯ ಸಾರ್ವಜನಿಕ ರಿಗೆ ಜವಾಬ್ದಾರಿಕೆ ಹೊಂದುವುದು ಸಾರ್ವಜನಿಕ ಹತೋಟಿಯನ್ನು ಹೊಂದಿತ್ತು. ಈ ಮೇಲಿನ ಮೂಲಭೂತ ಬದಲಾವಣೆಗಳ ಜೊತೆಗೆ ಇವೆಲ್ಲ ನಷ್ಟವಾಗುತ್ತವೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ಕೇಂದ್ರ ಬಜೆಟ್ ಅಂತರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಖುಷಿಪಡಿಸುವ ಕೆಲಸವನ್ನು ಮಾಡಹೊರಟಿದೆ. ಈ ಕೆಲಸದಲ್ಲಿ ದೇಶದ ಹಿತಾಸಕ್ತಿಯನ್ನು ಅಂದು ಪೂರ್ತಿ ಕಡೆಗಾಣಿಸಿದೆ.

(ಫ್ರಂಟ್‌ಲೈನ್ ಪತ್ರಿಕೆಯಲ್ಲಿ ಬಂದ ಲೇಖನದ ಅನುವಾದ. ಅನು - ಜಿ.ಎಸ್.ಮಣಿ)

ಹೊಸ ಆಮದು ರಫ್ತು ನೀತಿ ದೇಶದ ಬಡ ಜನರ ಅನ್ನವನ್ನು ಅಧಿಕಾರವನ್ನು ಕಿತ್ತು ಸಾಮ್ರಾಜ್ಯ ಶಾಹಿಗಳಿಗೆ ನೀಡಿದ ಪರಿ

ಕೇಂದ್ರ ವಾಣಿಜ್ಯ ಸಚಿವ ಮುರಸೋಳಿ ಮಾರನ್ ಬಿಜೆಪಿ ಸರ್ಕಾರದ ಹೊಸ ಆಮದು ರಫ್ತು ನೀತಿಯನ್ನು ಪ್ರಕಟಿಸಿದ್ದಾರೆ. ಈ ನೀತಿ 714 ಸರಕುಗಳನ್ನು ಆಮದು ರಫ್ತು ನಿರ್ಬಂಧನೆಗಳಿಂದ ಮುಕ್ತ ಗೊಳಿಸುತ್ತದೆ. ಈ ಪಟ್ಟಿಯಲ್ಲಿ ಅಕ್ಕಿ ಕಾಫಿ ಯಿಂದ ಹಿಡಿದು ಹೆಂಗಸರ ಉಡುಪು ಒಡವೆಗಳು, ಕೊನೆಗೆ ಹಳೆಯ ಟ್ರಕ್ಕುಗಳೂ ಸೇರಿವೆ. ಈ ಸರ್ಕಾರದ ಹೊಸ ಆಮದು ರಫ್ತು ನೀತಿ ಇಂತಹ ಉದಾರೀಕರಣದ ಹೊಳೆಯನ್ನೇ ಹರಿಸುತ್ತದೆ ಎಂಬ ನಿರೀಕ್ಷೆ ಇತ್ತು ಆಗಲೆ ವಿಶ್ವ ವ್ಯಾಪಾರ ಸಂಸ್ಥೆಗೆ 714 ಸರಕುಗಳನ್ನು ನಿರ್ಬಂಧಗಳಿಂದ ಮುಕ್ತ ಗೊಳಿಸುವ ಭರವಸೆಯನ್ನು ಸರ್ಕಾರ ನೀಡಿ ಆಗಿತ್ತು. ಅಮೇರಿಕನ್ ಸಾಮ್ರಾಜ್ಯ ಶಾಹಿಯ ತೀವ್ರ ಒತ್ತಡಕ್ಕೆ ಮಣಿದು ಸರ್ಕಾರ ಇಂತಹ ದೇಶ ಒತ್ತೆ ಇಡುವ ಕ್ರಮ ಕೈಗೊಂಡಿದೆ.

ಈ ಉದಾರೀಕರಣದ ಪರಿಣಾಮಗಳು ನಮ್ಮ ಆರ್ಥಿಕತೆ ಅದರಲ್ಲೂ ಈ ದೇಶದ ಬಡ ಜನತೆಗೆ ಆಘಾತಕಾರಿ ಯಾಗಿರುತ್ತವೆ. ವಿದೇಶಗಳಿಂದ ಔದ್ಯಮಿಕ ವಸ್ತುಗಳು ಮುಕ್ತವಾಗಿ ಬರುವುದರಿಂದ ದೇಶೀ ಉತ್ಪನ್ನಗಳಿಗೆ ಬೇಡಿಕೆ ಇಲ್ಲವಾಗುತ್ತದೆ. ಈ ಉತ್ಪನ್ನಗಳನ್ನು ಉತ್ಪಾದಿಸುವ ಕಾರ್ಖಾನೆಗಳು ಹಾನಿಗೊಳಗಾಗಿ ಮುಚ್ಚುತ್ತವೆ ಔದ್ಯಮೀಕರಣ ಆಗುವ ಬದಲು ನಿರೌದ್ಯಮೀಕರಣ ಪ್ರಾರಂಭವಾಗುತ್ತದೆ.

ಉದ್ದಿಮೆಗಳು ಮುಚ್ಚತೊಡಗಿದರೆ ಅದರಿಂದಾಗುವ ಪರಿಣಾಮ ಏನೆಂದು ಹೆಚ್ಚು ವಿವರಿಸುವ ಅಗತ್ಯವೇ ಇಲ್ಲ. ದುಡಿವ ಜನ ಕೆಲಸ ಕಳೆದುಕೊಳ್ಳುತ್ತಾರೆ. ನಿರುದ್ಯೋಗ ಹೆಚ್ಚುತ್ತದೆ ಹಸಿವು ಬಡತನ ಬೆನ್ನತ್ತಿ ಬರುತ್ತವೆ. ಇಂತಹ ಬಡತನದಿಂದುಂಟಾಗುವ ಎಲ್ಲ ದುಷ್ಪರಿಣಾಮಗಳು ಸಮಾಜದ ಮೇಲೆ ಆಗುತ್ತವೆ.

ಸಾಮ್ರಾಜ್ಯ ಶಾಹಿಗಳಿಗೆ ದೊಡ್ಡ ಮಾರುಕಟ್ಟೆ ದೊರೆಯುತ್ತದೆ ದೇಶದ ದೊಡ್ಡ ಬಂಡವಾಳ ಶಾಹಿಗಳಿಗೆ ಮೂರು ಕಾಸಿಗೇ ದುಡಿಯಲು ಕೆಲಸಗಾರರು ದೊರೆಯುತ್ತಾರೆ.

ಉದಾರೀಕರಣವಾದಿಗಳನ್ನು ನೀವು ಕೇಳಿ. ಅಕ್ಕಿಯ ಆಮದು ರಫ್ತನ್ನು ಮುಕ್ತಗೊಳಿಸಿರುವುದರಿಂದ ಉತ್ತಮ ಅಕ್ಕಿ ಆಮದಾಗಿ ದರ ಕಡಿಮೆ ಯಾಗುತ್ತದೆ ಎನ್ನುತ್ತಾರೆ ಅವರು ಆದರೆ ವಾಸ್ತವವಾಗಿ ಹಾಗಾಗುವುದಿಲ್ಲ. ನಮ್ಮಲ್ಲಿಯ ಉತ್ತಮ ಅಕ್ಕಿ ಹೊರ ಹೋಗುತ್ತದೆ. ಹೊರಗಿನಿಂದ ಒಳ್ಳೆಯ ಅಕ್ಕಿ ಬಂದರೆ ಅದರ ಬೆಲೆ ಬಹಳ ದುಬಾರಿಯಾಗಿರುತ್ತದೆ. ನಮ್ಮ ರೈತರಿಗೆ ಅವರ ಬೆಳೆಗೆ ಒಳ್ಳೆಯ ಬೆಲೆ ದೊರೆಯುವು ದಿಲ್ಲ ಅದೇ ಸಮಯದಲ್ಲಿ ದೇಶದ ಇತರ ಬಡ ವರ್ಗಗಳಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ದೊರೆಯುವುದೂ ಇಲ್ಲ.

ಹೀಗೆ ದೇಶದ ಔದ್ಯಮಿಕ ಮತ್ತು ಕೃಷಿ ವಲಯಗಳೆರಡೂ ಸಾಮ್ರಾಜ್ಯ ಶಾಹಿಗಳ ಲಾಭದಾಸೆಗೆ ಗುರಿಯಾಗಿ ಅವರ ಹಿಡಿತಕ್ಕೆ ಒಳಗಾಗುತ್ತದೆ. ಸ್ವಾತಂತ್ರ್ಯದ ಐವತ್ತು ವರ್ಷಗಳ ಶ್ರಮದಿಂದ ಜನತೆ ಸಾಧಿಸಿದ ಸ್ವಾವಲಂಬನೆ ಎಂಬುದು ಕಳೆದು ಹೋಗುತ್ತದೆ ನಮಗೆ ಸ್ವಾವಲಂಬನೆ ಇಲ್ಲದೇ ಹೋದಾಗ ಸಾಮ್ರಾಜ್ಯ ಶಾಹಿಗಳು ಮನಬಂದಂತೆ ನಮ್ಮನ್ನು ಸುಲಿಯಲು ಪ್ರಾರಂಭಿಸುತ್ತಾರೆ. ಇಂತಹ ಸುಲಿಗೆ ಅವರಿಗೆ ಬಹಳ ಸುಲಭವೂ ಆಗಿ ಬಿಡುತ್ತದೆ.

ಈ ನೀತಿಯಲ್ಲಿ ದೇಶದ ಹಿತಾಸಕ್ತಿಗಳನ್ನು ಕಾಯ್ದು ... ಕಡಿಮೆ ಎಂಬುದು ನಮ್ಮ ದೇಶದ ಅನುಭವ. ಇದರ ಅರ್ಥ ದೇಶೀ ಉದ್ದಿಮೆಗಳು ತೀವ್ರವಾದ ಹೊಡೆತ ಅನುಭವಿಸಲೇಬೇಕು ಎನ್ನುವುದು.

ಸಣ್ಣ ಕೈಗಾರಿಕೆಗಳು: ಸಣ್ಣ ಕೈಗಾರಿಕೆಗಳು ಅತಿ ಕಡಿಮೆ ಬಂಡವಾಳದಲ್ಲಿ ಅತಿ ಹೆಚ್ಚುಉದ್ಯೋಗಗಳನ್ನು ನೀಡಿ ಉತ್ತಮ ಸರಕುಗಳನ್ನು ಉತ್ಪಾದಿಸುತ್ತವೆ. ಈ ಆಮದು ರಫ್ತು ನೀತಿ ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿರಿಸಿರುವ ಹಲವು ಉತ್ಪಾನ್ನಗಳ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕಿದೆ.

ಉದಾಹರಣೆಗೆ ಫ್ಲಾಸ್ಟಿಕ್ಕಿನ ಬಳಕೆ ವಸ್ತುಗಳು ಕೈಮಗ್ಗದ ಉತ್ಪನ್ನಗಳು ಉಪ್ಪಿನ ಕಾಯಿ, ಹಪ್ಪಳ, ಸಾಬೂನು, ಆಲೂಗಡ್ಡೆ ಚಿಪ್ಸ್ ಇತ್ಯಾದಿಗಳು ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿದ್ದರೂ ಹಲವು ಬಹುರಾಷ್ಟ್ರೀಯ ಕಂಪನಿಗಳು ಇವನ್ನು ಉತ್ಪಾದಿಸ ತೊಡಗಿವೆಯಂತೆ. ಈ ಆಮದು ರಫ್ತು ನೀತಿಯಿಂದ ಉಪ್ಪಿನ ಕಾಯಿ ಮಾವು ಮೆಣಸಿನಕಾಯಿ ಟೊಮ್ಯಾಟೊ ನಿಂಬೆ ಹುಣಿಸೆ ಹಣ್ಣುಗಳ ಚಟ್ನಿ, ಪ್ಲಾಸ್ಟಿಕ್ಕಿನ ಒಡವೆಗಳು ಇತ್ಯಾದಿಗಳೆಲ್ಲ ಮುಕ್ತವಾಗಿವೆ. ಇವುಗಳನ್ನು ಬಹುರಾಷ್ಟ್ರೀಯ ಕಂಪನಿಗಳ ವಹಿವಾಟಿಗೆ ಒಳಪಡಿಸಿದರೆ ಹಪ್ಪಳ ಉಪ್ಪಿನಕಾಯಿ ಮಾಡಿ ಮಾರುವವರು ನಿರುದ್ಯೋಗಿಗಳಾಗುತ್ತಾರೆ ಹಲವು ಸಣ್ಣ ಕೈಗಾರಿಕೆಗಳು ಗುಡಿ ಕೈಗಾರಿಕೆಗಳು ಮುಚ್ಚಿ ಹೋಗುತ್ತವೆ.

ದೇಶದ ಉದ್ದಿಮೆಗಳೇ ಈ 58 ಉತ್ಪನ್ನಗಳನ್ನು ಮುಕ್ತಗೊಳಿಸಿರುವುದರ ವಿರುದ್ಧ ಸೊಲ್ಲೆತ್ತಿದ್ದಾರೆ. ದೇಶದ ಬಡಜನತೆ ತಮ್ಮ ಅನ್ನಕ್ಕಾಗಿ ಹೋರಾಟಕ್ಕೆ ತೊಡಗಿದರೆ ಈ ಪ್ರತಿಭಟನೆಗೆ ಹೊಸ ರೂಪು ಹರವು ಬರುತ್ತದೆ.

ಗುಣಮಟ್ಟದ ಬಟ್ಟೆಗಳ ಮೇಲೆ ಸುಂಕಗಳನ್ನು ಹಾಗೆಯೇ ಮುಂದುವರಿಸಲಾಗಿದೆ ಎಂಬುದು. ಆದರೆ ಇದರಿಂದ ದೇಶದ ಜನತೆಗೆ ಅನುಕೂಲವೇನೂ ಇಲ್ಲ. ಪತ್ರಿಕೆಗಳು ಬರೆದಂತೆ ಶ್ರೀಮಂತ ಭಾರತೀಯ ಪ್ರಜೆ ಮದ್ಯ ಸಿಗರೇಟು, ಚಾಕಲೇಟ್ ಕಾರುಗಳ, ಟೆಲಿವಿಷನ್ ಮತ್ತು ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿರುವ ಸರಕುಗಳನ್ನು ಬಿಟ್ಟರೆ ಬೇರೆ ಏನು ಬೇಕಾದರೂ ಆಮದು ಮಾಡಿಕೊಳ್ಳಬಹುದು.

ಇದಲ್ಲದೆ ಚೀನಾ ಮಾದರಿಯಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆಯೂ ಈ ನೀತಿಯಲ್ಲಿದೆ. ಈ ವಿಶೇಷ ಆರ್ಥಿಕ ವಲಯದಲ್ಲಿ ಯಾವುದೇ ನಿರ್ಬಂಧ ವಿಲ್ಲದೆ ಏನು ಬೇಕಾದರೂ ಉತ್ಪಾದಿಸಿ ರಫ್ತು ಮಾಡಬಹುದು ಸದ್ಯಕ್ಕೆ ಈ ವಲಯಕ್ಕೆ ಬ್ಯಾಂಕಿಂಗ್ ಮತ್ತು ಕಾರ್ಮಿಕ ಕಾಯಿದೆಗಳು ಮಾತ್ರ ಅನ್ವಯುವಾಗುತ್ತವೆ. ಈಗಾಗಲೇ ದೇಶದಲ್ಲಿ ರಫ್ತು ಅಭಿವೃದ್ಧಿ ವಲಯಗಳಿವೆ. ಹಾಗೂ ಹಲವಾರು ಉದಾರೀಕರಣದ ಕ್ರಮಗಳನ್ನು ಆಗಲೇ ಕೈಗೊಳ್ಳಲಾಗಿದೆ. ಆದರೆ ಅದರಿಂದ ದೇಶದ ರಫ್ತು ಪ್ರಮಾಣವನ್ನು ಹೆಚ್ಚಿಸುವುದು ಸಾಧ್ಯವಾಗಿಲ್ಲ ಯಾಕೆಂದರೆ ಉತ್ಪಾದನೆಯ ಗುಣಮಟ್ಟ ಹೆಚ್ಚಿಸಲು ಮತ್ತು ಉತ್ಪಾದನಾ ವೆಚ್ಚ ತಪ್ಪಿಸುವುದು ಸಾಧ್ಯವಾಗಿಲ್ಲ.

ಅಭಿವೃದ್ಧಿ ಹೊಂದಿದ ದೇಶಗಳು ಸರಕುಗಳನ್ನು ತಂದು ಭಾರತದೊಳಕ್ಕೆ ಸುರಿದರೆ ಏನು ಮಾಡುವುದು ದೇಶೀ ಉದ್ದಿಮೆಗಳನ್ನು ಹೇಗೆ ರಕ್ಷಿಸುವುದು? ಈ ಪ್ರಶ್ನೆಗಳಿಗೆ ಉತ್ತರವಾಗಿ ಮಾರನ್ ಅವರು ಸುರಿತದ ವಿರುದ್ಧದ ಕಾನೂನು ಮತ್ತು ಆಮದು ಸುಂಕದ ಬಗ್ಗೆ ತಿಳಿಸಿದ್ದಾರೆ. ಆದರೆ ವಿದೇಶೀಯರು ಸರಕೊಂದನ್ನು

ಬಾಗೇಪಲ್ಲಿ: ಗ್ರಾಮಪಂಚಾಯ್ತಿ ಚುನಾವಣೆಗಳು

ಗ್ರಾಮ ಪಂಚಾಯ್ತಿ ಚುನಾವಣೆಗಳು ಮುಗಿದ ನಂತರ ಎರಡನೇ ಹಂತದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ ನಿರೀಕ್ಷೆಗೆ ತಕ್ಕಂತೆ ಆಗದಿದ್ದರೂ, ಹಲವು ನಾಯಕರು ನಿರೀಕ್ಷಿಸಿದಂತೆ ಆಯಾ ಪಂಚಾಯ್ತಿಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳ ಮೀಸಲು ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಸರ್ಕಾರ ಜಿಲ್ಲಾಧಿಕಾರಿಗಳ ಕೈಗೆ ಕೊಡುವಷ್ಟರಲ್ಲಿ ಲಾಟರಿ ಮೂಲಕ ಯಾರ ಕೈವಾಡ ಇರದೇ ಸ್ಥಾನ ಮೀಸಲಾಯಿತು. ಆದರಂತೆ ಭಾಗೇಪಲ್ಲಿಯಲ್ಲಿ ಕೂಡಾ ಸಿಪಿಐ(ಎಂ) ಪಕ್ಷಕ್ಕೆ ಸಂಪೂರ್ಣವಾಗಿ 5 ಗ್ರಾಮ ಪಂಚಾಯ್ತಿಗಳ ಎರಡೂ ಸ್ಥಾನಗಳು (ಅಧ್ಯಕ್ಷ-ಉಪಾಧ್ಯಕ್ಷ) ಸಿಕ್ಕಿವೆ.

ಈ ಹಿಂದೆ ಸಿಪಿಐ(ಎಂ) ಕೈಯಲ್ಲೇ ಇದ್ದ ಕೊತ್ತಕೋಟ ಗ್ರಾಮಪಂಚಾಯ್ತಿಯನ್ನು ಮತ್ತೆ ಉಳಿಸಿಕೊಂಡಿರುವುದಲ್ಲದೇ ಕೇವಲ 23 ವರ್ಷ ವಯಸ್ಸಿನ ಇಡೀ ಜಿಲ್ಲೆಯಲ್ಲೇ ಅತೀ ಚಿಕ್ಕ ವಯಸ್ಸಿನ ಯುವ ಮುಂದಾಳು ಕಾಂ|| ಜಯಪ್ರಕಾಶ್ ರೆಡ್ಡಿಯವರು ಅಧ್ಯಕ್ಷರಾಗಿ 7-6 ಮತಗಳ ಅಂತರದಲ್ಲಿ ಕಾಂಗ್ರೆಸ್ಸಿನ ಸುಮಾರು 70 ವರ್ಷ ವಯಸ್ಸಿನ ನಾಯಕರನ್ನು ಸೋಲಿಸಿ ಚುನಾಯಿತರಾಗಿದ್ದಾರೆ. ಕಾಂ. ಜೆ.ಪಿ. ರೆಡ್ಡಿ ಬಾಗೇಪಲ್ಲಿ ತಾಲ್ಲೂಕಿನ ಸಿಪಿಐ(ಎಂ) ಕಾರ್ಯದರ್ಶಿ ಕಾಂ|| ವಿ. ವೆಂಕಟಸ್ವಾಮಿರೆಡ್ಡಿ ಯವರ ಮಗ, ಡಿ.ವೈ.ಎಫ್.ಐ.ಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಹಲವಾರು ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಅವರ ಸಾರಥ್ಯದಲ್ಲಿ ಕೊತ್ತಕೋಟೆ ಗ್ರಾಮ ಪಂಚಾಯ್ತಿ ಅತ್ಯಂತ ಹೆಚ್ಚು ಅಭಿವೃದ್ಧಿ ಸಾದಿಸಲೀ ಎಂದು ಹಾರೈಸೋಣ. ಅದೇ ಗ್ರಾಮ ಪಂಚಾಯ್ತಿಯಲ್ಲಿ ಉಪಾಧ್ಯಕ್ಷರಾಗಿ ರಾಮಕೃಷ್ಣಪ್ಪ ಎಂಬುವರು ಆಯ್ಕೆಯಾಗಿದ್ದಾರೆ.

ತಿಮ್ಮಂಪಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷಿಯಾಗಿ ರಾಮಕೃಷ್ಣಮ್ಮ ಎಂಬುವರು ಮತ್ತು ಉಪಾಧ್ಯಕ್ಷರಾಗಿ ಎಂ.ಎನ್. ಪಾಪಾಚಾರಿ ಎಂಬುವರು ಅವಿರೋದವಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ಸಿನ ಭದ್ರ ಕೋಟೆಯಾಗಿದ್ದ ತಿಮ್ಮಂಪಲ್ಲಿ ಗ್ರಾ.ಪ. ಯಲ್ಲಿ ಚುನಾವಣೆ ದಿನ ಹಣದ ಆಮಿಷ ಒಡ್ಡಿ ಹಲವಾರು ಆಸೆ ಆಕಾಂಕ್ಷೆಗಳನ್ನು ಒಡ್ಡಿ ಯಾರನ್ನಾದರೂ ಸೆಳೆಯಲೇ ಬೇಕೆಂದು ಕಾಂಗ್ರೆಸ್ಸಿನವರು ಎಷ್ಟೇ ಪ್ರಯತ್ನ ನಡೆಸಿದರೂ ಅವರ ಆಟ ನಡೆಯಲಿಲ್ಲ. ಯಾವುದೇ ತೊಂದರೆ ಇಲ್ಲದೇ ಪಕ್ಷದ ತೀರ್ಮಾನವನ್ನು ಎಲ್ಲಾ ಸದಸ್ಯರೂ ಜಾರಿ ಮಾಡಿ ಚುನಾವಣೆ ಸರಾಗವಾಗಿ ನಡೆಯಲು ಅವಕಾಶ ಕಲ್ಪಿಸಿ ಕೊಟ್ಟರು.

ಜಮೀನುದಾರರ, ಭೂಸ್ವಾಮಿಗಳ ಹಿಡಿತದಿಂದ ಹೊರಬಂದ ಗೊರ್ತಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ ಅತ್ಯಂತ ಕಡುಬಡತನದಿಂದ ಕೃಷಿ ಕಾರ್ಮಿಕ ರಂಗಪ್ಪ ಎಂಬವರು ಅಧ್ಯಕ್ಷರಾಗಿ ಆಯ್ಕೆಯಾಗಿ ಭೂಸ್ವಾಮಿಗಳಿಗೆ ಮುಖ ಭಂಗವುಂಟುಮಾಡಿದ್ದಾರೆ. 6-5 ಮತಗಳ ಅಂತರದಲ್ಲಿ ಆಯ್ಕೆ ಆದ ರಂಗಪ್ಪ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದವರು. ಗೊರ್ತಪಲ್ಲಿಯ ರೆಡ್ಡಿಗಳು ಅಮಾನವೀಯ ಕುತಂತ್ರಗಳನ್ನು ಮಾಡಿದರು ಆದರೆ ವಿಫಲವಾದರು. ಅದಷ್ಟೇ ಅಲ್ಲ ದೊನಕೊಂಡ ಗ್ರಾಮದ ಪ.ಜಾತಿ ಮಹಿಳಾ ಸದಸ್ಯರಾದ ಈಶ್ವರಮ್ಮ ರವರನ್ನು ಸುಮಾರು ರಾತ್ರಿ 11-00 ಗಂಟೆ ಸಮಯದಲ್ಲಿ ಎಬ್ಬಿಸಿ ಅಪಹರಿಸಿಕೊಂಡು ಹೋಗಲು ಪ್ರಯತ್ನಿಸಿದರು. ಅಷ್ಟು ಹೊತ್ತಿಗೆ ಕುರಿದೊಡ್ಡಿಯ ಹತ್ತಿರ ಮಲಗಿದ್ದ ಈಶ್ವರಮ್ಮ ಗಂಡ ಬಂದು ಅದನ್ನು ವಿಫಲ ಗೊಳಿಸಿದರು. ಈಶ್ವರಮ್ಮರವರೇ ಗೊರ್ತಪಲ್ಲಿಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ನಿರಂತರವಾಗಿ ಕಾಂಗ್ರೆಸ್ಸಿನ ಹಿಡಿತದಲ್ಲಿದ್ದ ಯಲ್ಲಂಪಲ್ಲಿ ಗ್ರಾ.ಪ ಮೊದಲ ಬಾರಿಗೆ ಸಿಪಿಐ(ಎಂ) ಕೈಗೆ ಸಿಕ್ಕಿದೆ. ಬಿ.ಸಿ.ಎಂ.(ಅ) ವರ್ಗಕ್ಕೆ ಮಹಿಳೆಗೆ ಮೀಸಲಾಗಿದ್ದು, ಸಿಪಿಐ(ಎಂ)ನ ಈಶ್ವರಮ್ಮರವರು ಮತ್ತು ಯುವ ಮುಂದಾಳು ಸೋಮಶೇಕರ ರೆಡ್ಡಿಯವರು ಉಪಾಧ್ಯಕ್ಷರಾಗಿ ಅವಿರೋದವಾಗಿ ಆಯ್ಕೆಯಾಗಿದ್ದಾರೆ. ಸೋಮಶೇಖರ ರೆಡ್ಡಿಯವರು ಐಕ್ಯರಂಗದೊಂದಿಗೆ ಮಾತನಾಡುತ್ತಾ ಯಲ್ಲಂಪಲ್ಲಿ ಗ್ರಾಮ ಪಂಚಾಯ್ತಿಯನ್ನು ಮಾದರಿ ಪಂಚಾಯ್ತಿಯನ್ನಾಗಿ ಮಾಡುವ ಪ್ರಯತ್ನ ಮಾಡುವುದರೊಂದಿಗೆ ಪಕ್ಷವನ್ನು ಬಲಿಷ್ಟಗೊಳಿಸುತ್ತೇನೆಂದು ತಿಳಿಸಿದರು.

ಇನ್ನೊಂದು ಪಾಳೇಗಾರಿ ಜಮೀನುದಾರರ ಹಿಡಿತದಿಂದ ಸಿಪಿಐ(ಎಂ) ಪಕ್ಷದ ತೆಕ್ಕೆಗೆ ಬಂದಿರುವ ತೋಳ್ಳಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ 13 ಸ್ಥಾನಗಳಿಗೆ 9 ಸ್ಥಾನಗಳನ್ನು ಪಡೆದು ಪಕ್ಷದ ಆಗಿಟಮಡಕ ಶಾಖೆಯಲ್ಲಿ ಸದಸ್ಯನಾಗಿ ದುಡಿಯುತ್ತಿದ್ದ ಶಂಕರಪ್ಪ ಎಂಬುವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅತ್ಯಂತ ಬರ್ಬರ ರೀತಿಯಲ್ಲಿ ಶೋಷಣೆಗೊಳಗಾದ ಪಂಚಾಯ್ತಿಯಲ್ಲಿ ಕೃಷಿಕಾರ್ಮಿಕರು ರೈತರೆಲ್ಲಾ ಪೂರ್ಣವಾಗಿ ಈ ಬಾರಿ ಸಿಪಿಐ(ಎಂ) ಪರವಾಗಿ ನಿಂತಿರುವುದರಿಂದ ಜಮೀನುದಾರರ ಆಟ ಏನೂ ನಡೆಯಲಿಲ್ಲ. ಉಪಾಧ್ಯಕ್ಷ ಸ್ಥಾನ ಬಿ.ಸಿ.ಎಂ(ಎಂ) ವರ್ಗಕ್ಕೆ ಮೀಸಲಾಗಿದ್ದದ್ದರಿಂದ ಸಿಪಿಐ(ಎಂ) ನಲ್ಲಿ ಇಲ್ಲದೇ ಇದ್ದುದರಿಂದ ಅದು ಕಾಂಗ್ರೆಸ್‌ನ ಪಾಲಾಯಿತು.

ಸೋಮನಾಥಪುರ ಗ್ರಾಮ ಪಂಚಾಯ್ತಿಯಲ್ಲಿ ಸಿಪಿಐ(ಎಂ) ಮತ್ತು ಕಾಂಗ್ರೆಸ್ ಸಮಾನವಾಗಿ ಸ್ಥಾನಗಳು ಬಂದಿದ್ದರಿಂದ ಅದು ಲಾಟರಿಯಲ್ಲಿ ಅಧ್ಯಕ್ಷ ಸ್ಥಾನ ಕಾಂಗ್ರೆಸ್‌ಗೆ ಮತ್ತು ಉಪಾಧ್ಯಕ್ಷ ಸ್ಥಾನ ಸಿಪಿಐ(ಎಂ)ನ ಉತ್ತರೆಡ್ಡಿಯವರ ಪಾಲಾಗಿದೆ.

ಘಂಟವಾರಿಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ ಸಿಪಿಐ(ಎಂ) ನ ಚೌಡಮ್ಮರವರು ಉಪಾಧ್ಯಕ್ಷ ಸ್ಥಾನವನ್ನು ಗಳಿಸಿದ್ದಾರೆ.

ನಾರೇಮದ್ದೇಪಲ್ಲಿ ಗ್ರಾಮ ಪಂಚಾಯ್ತಿಯಲ್ಲಿ ಕಾಂಗ್ರೆಸ್ ಮತ್ತು ಸಿಪಿಐ(ಎಂ) ಪಕ್ಷಗಳು ಸಮಾನವಾಗಿ ಪಡೆದ ಸ್ಥಾನಗಳಿಂದ ಅಲ್ಲಿಗೆ ಚುನಾವಣಾಧಿಕಾರಿಯಾಗಿ ಬಂದಿದ್ದವರು ಪಕ್ಷಪಾತದಿಂದ ಎರಡೂ ಸ್ಥಾನಗಳು ಕಾಂಗ್ರೆಸ್‌ಗೆ ದಕ್ಕುವ ಹಾಗೆ ಮಾಡಿದ್ದರಿಂದ ಆಕ್ರೋಶಗೊಂಡ ಜನ ಗಲಭೆ ಮಾಡಿ ಎಲ್ಲಾ ದಾಖಲೆಗಳನ್ನು ಹರಿದುಹಾಕಿದರು. ಆತನ ಉದ್ದೇಶಿತ ಪಕ್ಷಪಾತ ದೋರಣೆ ಕಂಡ ಜನ ರೊಚ್ಚಿಗೆದ್ದರು ಎಲ್ಲಾ ದಾಖಲೆಗಳನ್ನು ಹರಿದು ಹಾಕಿದರು. ಆದರಿಂದ ಚುನಾವಣೆ ನಿಂತುಹೋಗಿ ಮುಂದೆ ಹೋಗಿದೆ.

ಗ್ರಾಮ ಪಂಚಾಯ್ತಿ ಚುನಾವಣೆಗಳಲ್ಲಿ ಬಹಳ ಮುಖ್ಯವಾದ ಅಂಶವೆಂದರೆ ಶಾಸಕ ಸಂಪಂಗಿಯವರ ಅನುಯಾಯಿಗಳು ನೆಲಕಚ್ಚಿದರು. ಅದರ ಜೊತೆಗೆ ಜನತಾದಳ (ಯು) ಬಿಜೆಪಿ ಎಲ್ಲ ಪಕ್ಷಗಳು ಮರೆಯಾದವು. ಕಾಂಗ್ರೆಸ್ ಮತ್ತು ಸಿಪಿಐ(ಎಂ) ಮಾತ್ರ ಉಳಿದಿವೆ. ಇದು ಮುಂದಿನ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಸಿಪಿಐ(ಎಂ)ಗೆ ಒಳ್ಳೆಯ ಫಲಿತಾಂಶ ಸಿಗುವ ಸೂಚನೆಗಳಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಲೆಯೇರಿಕೆ ನೀತಿಗಳಿಂದ ತತ್ತರಿಸಿ ಹೋಗಿರುವ ಜನ ಈ ಬಾರಿ ಸಿಪಿಐ(ಎಂ)ನ ಪರವಾಗಿ ನಿಲ್ಲುವುದಂತೂ ಖಚಿತವಾಗಿದೆ. ಸ್ಥಳೀಯ ಹಾಲೀ ಶಾಸಕ ಸಂಪಂಗಿಯವರ ಆಧಕ್ಷತೆಯಿಂದ ಜನರು ಈಗಾಗಲೇ ಅಸಮಾದಾನದಿಂದ ಚಡಪಡಿಸುತ್ತಿದ್ದಾರೆ. ಮನೆಯ ಹತ್ತಿರ ಸಿಗುವ ಶಾಸಕರನ್ನು ಬಿಟ್ಟು ಬೆಂಗಳೂರಿನಲ್ಲಿ ಸಿಗುವ ಶಾಸಕರನ್ನು ಆಯ್ಕೆ ಮಾಡಿಕೊಂಡು ಮಹಾಪರಾಧ ಮಾಡಿದ್ದೇವೆಂದು ಜನರ ಮನಸ್ಸಿಗೆ ನಾಟಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಅದರ ಪ್ರಯೋಜನ ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಗಳಲ್ಲಿ ಪಡೆಯಬಹುದಾಗಿದೆ.

ವರದಿ: **ಭಾಸ್ಕರ ರೆಡ್ಡಿ**
ಬಾಗೇಪಲ್ಲಿ

.... ರಾಷ್ಟ್ರಪತಿ ಭಾಷಣ

ಪುಟ 5 ರಿಂದ

ಅಭಿವೃದ್ಧಿಶೀಲ ದೇಶಗಳಿಗೆ ಅವುಗಳಿಗೆ ಸಲ್ಲತಕ್ಕ ಸ್ಥಾನವನ್ನು ಕೊಡುವ ಮೂಲಕ ಸಾಧ್ಯ ಎಂದು ನಮ್ಮ ನಂಬಿಕೆ. ಅಭಿವೃದ್ಧಿಶೀಲ ದೇಶಗಳಲ್ಲಿ ಭಾರತಕ್ಕೆ ತನ್ನ ಬೃಹತ್ ಆಹಾರ ಮತ್ತು ಆರ್ಥಿಕ ಮತ್ತು ತಾಂತ್ರಿಕ ಸ್ಥಾನಮಾನ ಮತ್ತು ಸಾಮರ್ಥ್ಯದಿಂದಾಗಿ ಮಾತ್ರವೇ ಅಲ್ಲ, ವಿಶ್ವಸಂಸ್ಥೆಯ ಉದ್ದೇಶಗಳಿಗಾಗಿ ಅದು ಸಲ್ಲಿಸಿರುವ ಮಹಾನ್ ಸೇವೆಗಳಿಂದಾಗಿ ಸುಧಾರಿತ ಹಾಗೂ ವಿಸ್ತೃತ ಭದ್ರತಾ ಸಮಿತಿಯಲ್ಲಿ ಪ್ರಾತಿನಿಧ್ಯ ಪಡೆಯಲು ಎಲ್ಲಾ ಹಕ್ಕುಗಳು ಇವೆಯೆಂಬುದೂ ನಮ್ಮ ನಂಬಿಕೆ. ತನ್ನ ಸ್ವತಂತ್ರ ಇತಿಹಾಸದಾದ್ಯಂತ, ವಿಶೇಷವಾಗಿ ವಿಶ್ವಸಂಸ್ಥೆ ತನ್ನ ಆರಂಭದ ವರ್ಷಗಳಲ್ಲಿ ಗಂಡಾಂತರಕ್ಕೊಳಗಾಗಿದ್ದಾಗ ಭಾರತ ಈ ಜಾಗತಿಕ ಸಂಸ್ಥೆಗಾಗಿ ದುಡಿದಿದೆ.

ಶ್ರೀಯುತ ಅಧ್ಯಕ್ಷರೇ, ಜಗತ್ತು ಒಂದೇ ಜಗತ್ತಿನತ್ತ ಸಾಗುತ್ತಿದೆ ಎಂಬ ಸಂಗತಿಯನ್ನು ನಾವು ಗುರುತಿಸುತ್ತೇವೆ ಹಾಗೂ ಸ್ವಾಗತಿಸುತ್ತೇವೆ. ಆರಂಭದಿಂದಲೇ ಭಾರತ ಮುಂಬರಲಿರುವ ಏಕ ಜಗತ್ತಿನ ಮನುಜಕುಲ ಒಂದೇ ಕುಟುಂಬವೆಂಬ ಅನುಭೂತಿ ಪಡೆದಿದೆ. ಆದರೆ ನಮಗೆ ಜಾಗತೀಕರಣವೆಂದರೆ ಇತಿಹಾಸದ ಮತ್ತು ಭೌಗೋಳಿಕದ ವಿಶ್ವದ ಜೀವಂತ ಹಾಗೂ ಉಲ್ಲಾಸಭರಿತ ವೈವಿಧ್ಯತೆಗಳ ಅಂತ್ಯವೆಂದು ಅರ್ಥವಲ್ಲ. ಆಫ್ರಿಕಾದ ಒಬ್ಬ ಮುತ್ಸದ್ದಿ ನಮಗೆ ಹೇಳಿರುವಂತೆ, ವಿಶ್ವ ಒಂದು ಜಾಗತಿಕ ಹಳ್ಳಿ ಎಂದರೆ ಅದರರ್ಥ ಅದನ್ನು ಒಬ್ಬ ಹಳ್ಳಿ ಸರದಾರ ನಡೆಸಬೇಕೆಂದೇನೂ ಅಲ್ಲ. ಈ ಪ್ರಜಾಪ್ರಭುತ್ವದ ಯುಗದಲ್ಲಿ ಅದನ್ನು ಒಂದು ಪಂಚಾಯತು ನಡೆಸಬೇಕು. ನಮ್ಮ ಮಟ್ಟಿಗೆ ವಿಶ್ವಸಂಸ್ಥೆಯೇ ಜಾಗತಿಕ ಪಂಚಾಯತು. ಆದ್ದರಿಂದಲೇ ಅದನ್ನು ಪ್ರಜಾಪ್ರಭುತ್ವೀಕರಿಸಬೇಕು, ಪೋಷಿಸಬೇಕು ಎಂದು ನಾವು ಬಯಸುತ್ತೇವೆ. ಜಾಗತೀಕರಣ ಎಂದರೆ ಜಾಗತಿಕ ಸಮಾಜವನ್ನು ಆದರ ಘಟಕಗಳಾದ ಹಾಗೂ ತಮ್ಮದೇ ಅಖಂಡ ಗುರುತಗಳನ್ನು, ವಿಶಿಷ್ಟ ಸ್ವರೂಪಗಳನ್ನು ಹೊಂದಿರುವ ರಾಷ್ಟ್ರಗಳು, ರಾಜ್ಯಗಳು, ಗುಂಪುಗಳು, ಕುಟುಂಬಗಳು ಮತ್ತು ವ್ಯಕ್ತಿಗಳು ಪೋಷಿಸಬೇಕು ಎಂದರ್ಥ. ಬಹಳ ಹಿಂದೆಯೇ ಮಹಾತ್ಮಗಾಂಧಿಯವರು ಏಕ ಜಗತ್ತಿನ ತನ್ನ ಕಣ್ಣೋಟವನ್ನು ಹೀಗೆ ನೀಡಿದ್ದರು-

"ಇಂದಿನ ಉತ್ತಮ ಮನಸ್ಸುಗಳು ಸರ್ವತಂತ್ರ ಸ್ವತಂತ್ರ ಪ್ರಭುತ್ವಗಳನ್ನು ಬಯಸುತ್ತಿಲ್ಲ, ಬದಲು ಪರಸ್ಪರಾವಲಂಬಿ ಮೈತ್ರಿಪೂರ್ಣ ಪ್ರಭುತ್ವಗಳ ಒಂದು ಒಕ್ಕೂಟವನ್ನು ಬಯಸುತ್ತೇವೆ...... ನನ್ನ ಬಯಕೆಯೆಂದರೆ ನನ್ನ ಸ್ವಾತಂತ್ರ್ಯವನ್ನು ಒತ್ತಿ ಹೇಳದೆ ಸಂಪೂರ್ಣ ಸ್ವತಂತ್ರವಾಗಿರುವ ಸಾಮರ್ಥ್ಯ"

ಇಂತಹ ಜಾಗತೀಕೃತ ವಿಶ್ವ ಸಮಾಜದಲ್ಲಿ ಯುದ್ಧಕ್ಕೆ, ಯಜಮಾನಿಕೆಯ ಹತೋಟಿಗಳಿಗೆ, ಕುತ್ತಿಗೆ ಕೊಯ್ಯುವ ಸ್ಪರ್ಧೆಗಳಿಗೆ ಸ್ಥಾನವಿಲ್ಲ. ಶ್ರೀಯುತ ಅಧ್ಯಕ್ಷರೇ, ಭಾರತ ಭೂಮಿಯ ಮೇಲಿನ ಅತ್ಯಂತ ಬಲಿಷ್ಠ ಸಾಮ್ರಾಜ್ಯದಿಂದ ಅಹಿಂಸಾ ವಿಧಾನದ ಮೂಲಕ ತನ್ನ ಸ್ವಾತಂತ್ರ್ಯವನ್ನು ಕಿತ್ತುಕೊಂಡ ದೇಶ. ನಮ್ಮ ನೆರೆದೇಶಗಳೊಂದಿಗೆ ಇಂದಿನ ಸಮಸ್ಯೆಗಳನ್ನು ಬಲಪ್ರಯೋಗದಿಂದ ಪರಿಹರಿಸುವ ಬಯಕೆ ನಮಗಿಲ್ಲ. ನಮ್ಮದೇ ರಾಜಕೀಯ ಶರೀರದಿಂದ ಬೇರ್ಪಟ್ಟ ಪಾಕಿಸ್ತಾನದೊಂದಿಗೆ ವಿಭಜನೆಯ ನಂತರ ನೂರಾರು ರೀತಿಗಳಲ್ಲಿ ಮೈತ್ರಿಪೂರ್ಣ ಸಹಕಾರ ಹೊಂದಿರುವುದು ನಮ್ಮ ಬಯಕೆ. ಆದರೆ ಭಾರತದ ಸಮಗ್ರತೆ ಮತ್ತು ಸ್ವಾತಂತ್ರ್ಯಕ್ಕೆ ಬೆದರಿಕೆ ಬಂದಾಗ ಅದನ್ನು ತನ್ನೆಲ್ಲಾ ಸಂಪನ್ಮೂಲಗಳು ಹಾಗೂ ಬಲದಿಂದ ರಕ್ಷಿಸುವುದು ಭಾರತೀಯ ಪ್ರಭುತ್ವ ಈ ವಿಶಾಲನಾಡಿನ ನೂರುಕೋಟಿ ಜನತೆಯ ಪ್ರತಿನಿಧಿಯಾಗಿ ನಿರ್ವಹಿಸಬೇಕಾದ ಕರ್ತವ್ಯ. ನಾವು ಮಾತುಕತೆಗಳಿಗೆ, ಭಿನ್ನಾಭಿಪ್ರಾಯಗಳ ಶಾಂತಿಯುತ ಇತ್ಯರ್ಥಗಳಿಗೆ ಸದಾ ಬಾಗಿಲು ತೆರೆದಿಟ್ಟಿದ್ದೇವೆ. ಆದರೆ ಅವರಿಗೆ ಆಕ್ರಮಣದ, ಅಂತರ್ರಾಷ್ಟ್ರೀಯ ಗಡಿಗಳಾಚೆ, ಗಂಭೀರ ಸಂಧಿಗಳಿಂದ, ವಚನಗಳಿಂದ ಪಾವಿತ್ರ್ಯ ಪಡೆದ ಪರಸ್ಪರ ಒಪ್ಪಿಕೊಂಡ ಹತೋಟಿ ರೇಖೆಯಾಚೆ ಸಿಕ್ಕಾಪಟ್ಟೆ ಹಾಗೂ ಸುಸಂಘಟಿತ ಭಯೋತ್ಪಾದನೆ ನಡೆಸುವ ದೈವದತ್ತ ಹಕ್ಕು ಇರಬೇಕೇ?

ಭಾರತೀಯ ಉಪಖಂಡ ಈಗ ವಿಶ್ವದ ಅತಿ ಅಪಾಯಕಾರಿ ಸ್ಥಳ, ಕಾಶ್ಮೀರ ಒಂದು ಪರಮಾಣು ಸ್ಫೋಟದ ಬಿಂದು ಎಂದೆಲ್ಲಾ ಹೇಳಲಾಗುತ್ತಿದೆ. ಇಂತಹ ಅಪಾಯ ಭೀತಿಯನ್ನು ಸಾರುವ ವರ್ಣನೆಗಳು ಶಾಂತಿಭಂಗ ಮಾಡಬಯಸುವವರಿಗೆ, ಭಯೋತ್ಪಾದನೆ ಮತ್ತು ಹಿಂಸಾಚಾರದಲ್ಲಿ ತೊಡಗ ಬಯಸುವವರಿಗೆ ಪ್ರೋತ್ಸಾಹ ನೀಡುತ್ತವಷ್ಟೆ. ಅಪಾಯವಿರುವುದು ನಾವು ಮೊದಲಿಗೆ ಪರಮಾಣು ಅಸ್ತ್ರಗಳನ್ನು ಬಳಸುವುದಿಲ್ಲ ಎಂದು ಗಂಭೀರವಾಗಿ ಘೋಷಿಸಿರುವ ನಮ್ಮಿಂದ ಅಲ್ಲ; ಇಂತಹ ಯಾವ ವಚನವನ್ನೂ ನೀಡಲು ನಿರಾಕರಿಸುವವರಿಂದ ವಿಶ್ವವನ್ನು ಒಂದಲ್ಲ ಹಲವು ಬಾರಿ ನಾಶಪಡಿಸಬಲ್ಲ ಪರಮಾಣು ಶಸ್ತ್ರಗಳ ಭಯಾನಕ ದಾಸ್ತಾನು ಹೊಂದಿರುವ ಪರಮಾಣು ಶಕ್ತಿ ದೇಶಗಳೊಂದಿಗೆ ಸೇರಿಕೊಂಡು ಪರಮಾಣು ಅಸ್ತ್ರಗಳ ನಿರ್ಮೂಲಕ್ಕೆ ಸಾರ್ವಜನಿಕವಾಗಿ ವಚನಬದ್ಧರಾಗಿದ್ದೇವೆ. ಭಾರತ ಬೇರೆ ಯಾವ ದೇಶಕ್ಕೂ ಬೆದರಿಕೆ ಹಾಕುವುದಿಲ್ಲ, ಯಾರೊಂದಿಗೂ ಶಸ್ತ್ರಾಸ್ತ್ರ ಪೈಪೋಟಿಗಿಳಿಯುವುದಿಲ್ಲ, ಆದರೆ ಭಾರತ ತನ್ನ ಭದ್ರತೆಗೆ ಎಷ್ಟು ಬೇಕೋ ಅಷ್ಟು - ಅದಕ್ಕಿಂತ ಹೆಚ್ಚು ಅಲ್ಲ, ಕಮ್ಮಿಯೂ ಅಲ್ಲ - ಕನಿಷ್ಟ ವಿಶ್ವಾಸಾರ್ಹ ಪರಮಾಣು ತಡೆ ಇಟ್ಟುಕೊಳ್ಳುತ್ತದೆ. ನಾವು ಸಾಮೂಹಿಕ ವಿನಾಶದ ಅಸ್ತ್ರಗಳ ಪ್ರಸರಣವನ್ನು ತಡೆಯಲು ಹಾಗೂ ಸಾಮೂಹಿಕ ವಿನಾಶದ ಅಸ್ತ್ರಗಳಿಂದ ಮುಕ್ತವಾದ ಒಂದು ವಿಶ್ವದ ಗುರಿಸಾಧನೆಗೆ ಅಮೇರಿಕದೊಂದಿಗೆ ಇನ್ನೂ ಮುಂದೆಯೂ ಕೆಲಸ ಮಾಡಲು ಕಾತುರರಾಗಿದ್ದೇವೆ.

ಶ್ರೀಯುತ ಅಧ್ಯಕ್ಷರೇ, ನಿಮ್ಮ ಭಾರತ ಭೇಟಿಯ ಈ ಐತಿಹಾಸಿಕ ಮತ್ತು ಶುಭ ಸಂದರ್ಭದಲ್ಲಿ ಪರಮಾಣು ಪ್ರಸರಣ-ನಿರೋಧದ ಜತೆಗೆ ಪರಮಾಣು ನಿಶ್ಶಸ್ತ್ರೀಕರಣದತ್ತ ಕ್ರಮಗಳನ್ನು - ಮೂರ್ತವಾದ ಮತ್ತು ಗಮನಾರ್ಹವಾದ ಕ್ರಮಗಳನ್ನು - ಕೈಗೊಳ್ಳಬೇಕೆಂದು ವಿಶ್ವಕ್ಕೆ ಮನವಿ ಮಾಡೋಣ. ಈ ಮೂಲಕ ಈಗಿರುವ ಅಸಮಾನತೆಗಳನ್ನು ಕ್ರೋಢೀಕರಿಸದಿರೋಣ ಮತ್ತು ದೇಶಗಳ ಶಸ್ತ್ರಾಗಾರಗಳಲ್ಲಿ ಪರಮಾಣು ಶಸ್ತ್ರಗಳ ದಾಸ್ತಾನಕ್ಕೆ ಶುಭಮಸ್ತು ಎಂದು ಹೇಳದಿರೋಣ.


ಶ್ರೀಯುತ ಅಧ್ಯಕ್ಷರೇ, ನಮ್ಮ ಮಹಾನ್ ಪ್ರಜಾಪ್ರಭುತ್ವಗಳ ನಡುವೆ ಒಂದು ಹೊಸ ಚೈತನ್ಯಶೀಲ ಹಾಗೂ ಬಹುಸ್ವರೂಪೀ ಪಾಲುದಾರಿಕೆಗೆ ಅಡಿಗಲ್ಲು ಹಾಕುವ ಒಂದು ಅವಕಾಶವನ್ನು ನಮಗೆ ಒದಗಿಸಿದೆ. ನಮ್ಮ ಜನಗಳು ಈಗ ನಮ್ಮ ಸಂಬಂಧಗಳನ್ನು ಶಾಂತಿ ಮತ್ತು ಪ್ರಜಾಪ್ರಭುತ್ವ ಕುರಿತ ನಮ್ಮ ಸಮಾನ ಕಣ್ಣೋಟದ ಆಧಾರದಲ್ಲಿ, ರಾಜಕೀಯ, ಆರ್ಥಿಕ ಮತ್ತು ತಾಂತ್ರಿಕ ರಂಗಗಳಲ್ಲಿ ನಮ್ಮ ಹೆಚ್ಚುತ್ತಿರುವ ಪರಸ್ಪರ ಹಿತಾಸಕ್ತಿಗಳ ಮೂಲಕ ಬಲಪಡಿಸಿ ಹಾಗೂ ನಮ್ಮ ವಿಶ್ವ ಕಣ್ಣೋಟದಲ್ಲಿ ಹೆಚ್ಚೆಚ್ಚು ಸಮಾನ ಭಾವದ ಮೂಲಕ ಮುಂದೊಯ್ಯಬೇಕು ಎಂದು ನಮ್ಮಿಂದ ನಿರೀಕ್ಷಿಸುತ್ತಾರೆ. ಇದಕ್ಕಾಗಿ ನಾವು ಹೆನ್ರಿ ಡೇವಿಡ್ ಥೋರೋ ರವರು 'ಸತ್ಯ ಹೇಳಲು ಇಬ್ಬರು ಬೇಕು - ಒಬ್ಬರು ಹೇಳಲು, ಇನ್ನೊಬ್ಬರು ಕೇಳಲು' ಎಂದು ವರ್ಣಿಸಿದ ರೀತಿಯಲ್ಲಿ ನೇರನುಡಿಯ ಸಂವಾದದಲ್ಲಿ ತೊಡಗಿರಬೇಕಾಗುತ್ತದೆ.

ಮಹಾಮಹಿಮರೇ, ಮಹನೀಯರೇ, ಮಹಿಳೇಯರೇ ನಾನೀಗ ತಮ್ಮನ್ನು

- ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ, ಶ್ರೀಯುತ ವಿಲಿಯಂ ಜೆಫರ್ಸನ್ ಕ್ಲಿಂಟನ್‌ರ ಆಯುರಾರೋಗ್ಯಕ್ಕೆ
- ಭಾರತ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಜನತೆಗಳ ನಡುವೆ ಚಿರ ಗೆಳತನಕ್ಕೆ
- ವಿಶ್ವದಲ್ಲಿ ಶಾಂತಿ ಮತ್ತು ನ್ಯಾಯಕ್ಕಾಗಿ ನಮ್ಮ ಜಂಟಿ ಪ್ರಯತ್ನಗಳ ಯಶಸ್ಸಿಗೆ

ಶುಭ ಹಾರೈಸಲು ಆಹ್ವಾನಿಸಲೇ?

ಬೀದಿ ಬದಿಯ ಜನಕೆ ಬದುಕು ಕೊಡಿ



ಬೆಂಗಳೂರನ್ನು ಸಿಂಗಾಪೂರ ಮಾಡುವ ಕನಸು ಆಮೇಲಿರಲಿ

ನಮ್ಮ ರಾಜ್ಯದ ಹೈಟೆಕ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಬೆಂಗಳೂರನ್ನು ಸಿಂಗಾಪುರ ಮಾಡಲು ಹೊರಟಿದ್ದಾರೆ. ಆದರೆ ಬೆಂಗಳೂರು ಸಿಂಗಾಪುರ ಆಗುವುದರಿಂದ ಈ ನಾಡಿನ ಬಡ ಜನತೆಗೆ ಏನಾದರೂ ಅನುಕೂಲ ಆಗುತ್ತದೆಯೇ? ವಿದೇಶಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಉತ್ಸಾಹದಲ್ಲಿ ಅವರ 'ವ್ಯವಹಾರ'ಗಳಿಗೆ ವಿವಿಧ ರಿಯಾಯ್ತಿಗಳನ್ನು ನೀಡಿ ಅವರನ್ನು 'ಜೋಪಾನವಾಗಿ' ನೋಡಿಕೊಳ್ಳಲಾಗುತ್ತಿದೆ. ಅದರ ಈ ದೇಶದ ಬಡ ಜನತೆಯ ಬಗ್ಗೆ ಕಾಳಜಿಯಿರದ ಆಳುವ ಮಂದಿ ಅಗಾಧ ಪ್ರಮಾಣದಲ್ಲಿ ದಿನ ಬಳಕೆಯ ವಸ್ತುಗಳ ಬೆಲೆಯನ್ನು ಏರಿಸಿ ಬಡ ಜನರ ನಡುವನ್ನು ಮುರಿದು ಅವರ ಬಾಳನ್ನು ದುಸ್ತರಗೊಳಿಸಿದ್ದಾರೆ. 'ಬಡವರು ಮಾಡಿದರೆ ವ್ಯಭಿಚಾರ ಶ್ರೀಮಂತರು ಮಾಡಿದರೆ ವ್ಯವಹಾರ' ಎಂಬಂತೆ ಹೈಟೆಕ್ ನಗರಗಳಲ್ಲಿ ದುಡ್ಡುಳ್ಳವರಿಗೆ ಮಾತ್ರ ಬದುಕಲು ಅವಕಾಶ, ಗತಿಯಿಲ್ಲದ ಭಿಕ್ಷುಕರು, ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಿ ಹೇಗೋ ಹೊಟ್ಟೆತುಂಬಿಸಿಕೊಳ್ಳುವ ಕಡು ಬಡವರಿಗೆ ಇಲ್ಲಿ ಜಾಗ ಇಲ್ಲ ಎನ್ನುತ್ತಿದ್ದಾರೆ.

ಬೆಂಗಳೂರಲ್ಲಿ ಫುಟ್‌ಪಾತ್ ವ್ಯಾಪಾರಿಗಳಿಂದ ವಸ್ತುಗಳನ್ನು ಕೊಳ್ಳದೆ ಬದುಕುವ ಯಾವುದಾದರೂ ಕುಟುಂಬವುಂಟೆ? ಅತ್ಯಂತ ಶ್ರೀಮಂತರೆನ್ನಿಸಿಕೊಂಡವರೂ ಕೂಡ ಹಲವು ವಸ್ತುಗಳಿಗಾಗಿ ಫುಟ್‌ಪಾತ್ ವ್ಯಾಪಾರಿಗಳನ್ನು ಅವಲಂಬಿಸಬೇಕಾಗಿದೆ. ಬಡವರು ಕೆಳಮಧ್ಯಮ ವರ್ಗದವರಿಗೆ ಚಿಲ್ಲರೆ ದಿನಸಿ ಅಂಗಡಿಗಳ ಮೂಲಕ ಅಕ್ಕಿ ಬೇಳೆಯಂತಹ ವಸ್ತುಗಳನ್ನು ಬಿಟ್ಟರೆ ಉಳಿದೆಲ್ಲಕ್ಕೆ ಫುಟ್‌ಪಾತ್ ವ್ಯಾಪಾರವೇ ಗತಿ. ಆಡಳಿತಾರೂಢರು ಇದನ್ನು ತಿಳಿದು ಕೊಳ್ಳಬೇಕಾದರೆ ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿರುವ ಬಳೇಪೇಟೆ, ಸುಲ್ತಾನ್ ಪೇಟೆ ಚಿಕ್ಕಪೇಟೆಗೆ ಭಾನುವಾರದಂದು ಭೇಟಿ ನೀಡಬೇಕು. ಬಗೆ ಬಗೆಯ ವಸ್ತುಗಳನ್ನು ನಗರದ ಹಲವು ಮೂಲೆಗಳಿಂದ ಬಂದ ಅನೇಕ ಸ್ತರದ ಜನ ಹುಡುಕಾಡುತ್ತಿರುತ್ತಾರೆ. ಅದೇ ರೀತಿ ಯಶವಂತಪುರ, ಮೂಡಲ ಪಾಳ್ಯ, ಬನಶಂಕರಿ, ಕೃಷ್ಣರಾಜಪುರಗಳು ಇಂತಹ ನಿತ್ಯ ಸಂತೆಯಾಗಿ ಪರಿಣಮಿಸಿವೆ. ಇಂತಹ ಅಗಾಧ ಪ್ರಮಾಣದ ಸೇವೆಯನ್ನು ಬೆಂಗಳೂರಿನ ನಾಗರಿಕರಿಗೆ ವಂಚಿಸಬೇಕೆ?

ಬೆಂಗಳೂರಿನ ನರಸಿಂಹರಾಜಾ ಕಾಲೋನಿಯಲ್ಲಿ ಇದೇ ಬೀದಿ ಬದಿಯ ವ್ಯಾಪಾರವನ್ನು ಅವಲಂಬಿಸಿರುವ ಬಸಮ್ಮ ತಮ್ಮ ನೋವು, ಸಂಕಷ್ಟ, ಕಿರುಕುಳಗಳನ್ನು ಇವುಗಳ ವಿರುದ್ಧ ನಡೆಸಿದ ಪ್ರತಿಭಟನೆಗಳನ್ನು ವಿವರಿಸಿದ್ದಾರೆ.

'ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲ್ಲ' ಇದು ಫುಟ್‌ಪಾತ್ ವ್ಯಾಪಾರಿಗಳ ಬಾಳು. ಬಡವರ ಹೊಟ್ಟೆಯಲ್ಲಿ ಹುಟ್ಟಿ ಬದುಕಲಾರದೆ ಉದ್ಯೋಗ ಅರಸಿ ಪಟ್ಟಣಕ್ಕೆ ಬರುವ ನಮ್ಮವರಲ್ಲಿ ಅವಿದ್ಯಾವಂತರೇ ಹೆಚ್ಚು. ಹುಡುಗರು ಹೋಟೆಲ್, ಲಾಡ್ಜ್‌ಗಳಲ್ಲಿ ಸಪ್ಲೆಯರ್‌ಗಳಾದರೆ, ಹೆಂಗಸರು ಸಿರಿವಂತರ ಮನೆಗಳಲ್ಲಿ ಮುಸುರೆ ತಿಕ್ಕುವ ಕೆಲಸಕ್ಕೆ ಸೇರುತ್ತಾರೆ. ಇನ್ನುಳಿದಂತೆ ಕೆಲವರು ಆಟೋ ರೈನ್ ಹಿಡಿದರೆ ಹೆಚ್ಚಿನವರು ಬೀದಿ ಬದಿಯ ವ್ಯಾಪಾರವನ್ನು ಅವಲಂಬಿಸುತ್ತಾರೆ. ಇರಲು ನಲೆಯಿಲ್ಲದೆ ಸ್ಲಂನ ಗುಡಿಸಲುಗಳಲ್ಲಿ ಇವರ ಜೀವನ. ಇತ್ತೀಚೆಗಷ್ಟೆ ಕೆಲವು ಮಂದಿ 'ಹಂದಿಗೂಡಿ'ನಂತಹ ಚಿಕ್ಕ ಮನೆಗಳಲ್ಲಿ ಬಾಡಿಗೆಗಿದ್ದರೂ ಬಹುತೇಕ ಮಂದಿ ಈಗಲೂ ಗುಡಿಸಲು ವಾಸಿಗಳೇ.


ಕಿರುಕುಗಳಗಳು ಇಂದು ನೆನ್ನೆಯದಲ್ಲ

ಸುಮಾರು ವರ್ಷಗಳ ಹಿಂದೆ ಕಾಲೋನಿಯ ಪಾರ್ಕಿನ ಒಳಗೆ ವ್ಯಾಪಾರ ನಡೆಸುತ್ತಿದ್ದವರನ್ನು ದೇವಸ್ಥಾನ ಕಟ್ಟುವ ಸಲುವಾಗಿ ಫುಟ್‌ಪಾತಿಗೆ ಕಳುಹಿಸಲಾಯಿತು. ಅಲ್ಲಿಂದ ಹೆಚ್ಚಾಯಿತು ಈ ವ್ಯಾಪಾರಿಗಳ ಸಂಕಷ್ಟಗಳು. ಪಾದಚಾರಿಗಳಿಗೆ ತೊಂದರೆ,ವಾಹನ ಸಂಚಾರಕ್ಕೆ ಅಡಚಣೆ, ನರೆ ಹೊರೆಯುವರಿಗೆ ತೊಂದರೆ ಎಂಧು ಹೇಳಿ ನಗರ ಪಾಲಿಕೆಯವರು, ಪೋಲಿಸರು ಕಿರುಕುಳ ಕೊಡಲು ಆರಂಭಿಸಿದರು. ಆಳುವ ಮಂದಿ ಮನಸ್ಸು ಮಾಡಿದ್ದರೆ ಆಗಲೇ ಇದಕ್ಕೆಲ್ಲಾ ಒಂದು ಪರಿಹಾರ ಕಂಡು ಕೊಳ್ಳಬಹುದಾಗಿತ್ತು. ಆದರೆ ನೂರೆಂಟು ಜನರ ಬಾಳಿಗಿಂತ ಒಂದು ದೇವಸ್ಥಾನವೇ ಮುಖ್ಯವಾಯ್ತೆ ಹೊರತು ಬಡ ಜನರ ಬದುಕಿನೆಡೆಗೆ ಇವರ ಗಮನ ಹರಿಯಲಿಲ್ಲ. ಪಾರ್ಕಿನ ಉಳಿದ ಜಾಗ ಮಕ್ಕಳು ಆಡುವುದಕ್ಕಾಗಿಇರಲಿ ಎಂದು ಹೇಳಿ ವ್ಯಾಪಾರಿಗಳು ಅಲ್ಲಿ ಕೂರಲು ಬಿಡಲಿಲ್ಲ. ಆದರೆ ಇಂದು ಆ ಪಾರ್ಕ್ ಗಬ್ಬೆದ್ದು ಹೋಗಿ ಯಾವ ಮಕ್ಕಳೂ ಆಕಡೆ ಸುಳಿಯುವಂತಿಲ್ಲ.

ಕಡೆಗೂ ಸಂಘ ಸ್ಥಾಪನೆ ಮಾಡಿದ್ದು ಗಣೇಶೋತ್ಸವ

ರಾಜಕೀಯ ಪಕ್ಷಗಳ ಕೆಲವು ಮುಖಂಡರು ಪಳೀಯರು ಸೇರಿ ಫುಟ್‌ಪಾತ್ ವ್ಯಾಪಾರಿಗಳ ಹಿತರಕ್ಷಣೆಗೆ ಹೋರಾಡುವ ಆಶ್ವಾಸನೆ ನೀಡಿ 'ಫುಟ್‌ಪಾತ್ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘ' ಸ್ಥಾಪಿಸಿದರು. ಆದರೆ ವ್ಯಾಪಾರಿಗಳ ಹಿತ ಕಾಯುವುದಕ್ಕಿಂತ ತಮ್ಮ ಬೇಳೆ ಬೇಯಿಸಿಕೊಳ್ಳುವುದರತ್ತಲೇ ಇವರು ಗಮನಹರಿಸಿದರು. ಗಣೇಶ ಉತ್ಸವ ಆಚರಿಸುವ ನೆಪದಲ್ಲಿ ಇವರಿಂದ ಪ್ರತಿವರ್ಷವೂ ಚಂದಾ ವಸೂಲು ಮಾಡತೊಡಗಿದರು. ಅನಕ್ಷರಸ್ಥರಾದ ವ್ಯಾಪಾರಿಗಳು ತಮ್ಮ ಹಿತಾಸಕ್ತಿಯನ್ನು ಮರೆತು 'ದೇವರ ಹಿತ ಕಾಯಲು' ಹೊರಟವರಿಗೆ ಭಯ-ಭಕ್ತಿಯಿಂದ ನೆರವಾಗ ತೊಡಗಿದರು.

ಅಕ್ಷರಸ್ಥರಾದ ಒಬ್ಬಿಬ್ಬರು ಇದನ್ನು ಪ್ರಶ್ನಿಸಿದಾಗ ಅವರನ್ನು ಕಡೆಗಣಿಸಲಾಯಿತಲ್ಲದೆ ಅವರನ್ನು ಹೊರಗಿಟ್ಟು ತಮ್ಮ 'ಕಾರ್ಯ ಕ್ರಮ'ಗಳನ್ನು ನಡೆಸಿಕೊಂಡರು. ಈ ಸಂಘಕ್ಕೆ ಪರ್ಯಾಯವಾಗಿ ಮತ್ತೊಂದು ಸಂಘವನ್ನು ಕಟ್ಟಲು ಇವರಿಗೆ ಶಕ್ತಿಯಾಗಲಿ ಸಾಮರ್ಥ್ಯವಾಗಲೀ ಇರಲಿಲ್ಲ. ಏಕೆಂದರೆ ಬಹುತೇಕ ವ್ಯಾಪಾರಿಗಳು 'ನಮಗೊಂದು ಗತಿ ಕಾಣಿಸಬಹುದು' ಎಂದು ಈ ಮುಖಂಡರ ಮೇಲೆ ಅಪಾರ ನಂಬಿಕೆಯನ್ನು ಇಟ್ಟುಕೊಂಡಿದ್ದರು.



ಮೂಗಿಗೆ ತುಪ್ಪ ಸವರಿದವರು

ಇದೇ ಸಂದರ್ಭದಲ್ಲಿ ಬೆಂಗಳೂರು ನಗರ ಪಾಲಿಕೆಯವರು ಒಂದು ವಾಣಿಜ್ಯ ಸಂಕೀರ್ಣವನ್ನು ಕಟ್ಟಲು ಶುರು ಮಾಡಿದರು. ಆಗಿನ ಬಿಜೆಪಿ ಕಾರ್ಪೊರೇಟರ್ ಆ ಮಳಿಗೆಗಳನ್ನು ಬೀದಿ ಬದಿಯ ವ್ಯಾಪಾರಿಗಳಿಗೆ ಕಡಿಮೆ ಬಾಡಿಗೆಗೆ ನೀಡುವುದಾಗಿ ಆಶ್ವಾಸನೆಯಿತ್ತರು. ಚುನಾವಣಾ ಸಮಯದಲ್ಲಿ ಬಿಜೆಪಿಗೇ ಓಟು ಗುದ್ದಿದರು ಈ ಜನ. ಶಾಸಕ ನಂಜೇಗೌಡರಿಂದ ಮಳಿಗೆ ಉದ್ಘಾಟನೆಯಾದ ಬಳಿಕ ಮಹಾನಗರ ಪಾಲಿಕೆಯವರು ಮಳಿಗೆಗಳನ್ನು ಹರಾಜು ಹಾಕುವುದಾಗಿ ಘೋಷಿಸಿದರು.

ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಮಳಿಗೆಗಳನ್ನು ಕೊಳ್ಳಲು ಸಾಧ್ಯವಿರದಿದ್ದ ವ್ಯಾಪಾರಿಗಳು ಇದನ್ನು ಪ್ರತಿಭಟಿಸಿದರಾದರೂ ಇವರ ಪ್ರತಿಭಟನೆಗೆ ಯಾವುದೇ ಬೆಲೆ ಸಿಗಲಿಲ್ಲ. ಬಾಯಿಗೆ ಬೀಳದ ತುಪ್ಪವನ್ನು ನೆನಸುತ್ತಾ ತಲೆ ಎತ್ತಿನಿಂತಿರುವ ವಾಣಿಜ್ಯ ಸಂಕೀರ್ಣವನ್ನು ನೋಡುತ್ತಾ ಮೂಗಿಗೆ ಸವರಿದ ತಪ್ಪವನ್ನು ಮೂಸುತ್ತಾ ಕುಳಿತ್ತಿದ್ದಾರೆ.

ಭಾಷಾ ವೈಷಮ್ಯದ ಬೆಂಕಿ ಹಚ್ಚಿದ ಮುಖಂಡರು

ಇತ್ತೀಚಿನ ದಿನಗಳಲ್ಲಿ ಇಲ್ಲಿ ಫುಟ್‌ಪಾತ್ ವ್ಯಾಪಾರಿಗಳ ಸಂಖ್ಯೆ ಹೆಚ್ಚಾದಾಗ ಹೊಸಬರನ್ನು ಸೇರಿಸಬಾರದು ಮತ್ತು ಕನ್ನಡದವರಲ್ಲದವರನ್ನು ಅಂದರೆ ಹೆಚ್ಚು ಕಮ್ಮಿ ತಮಿಳಿಗರನ್ನು ಇಲ್ಲಿಂದ ಓಡಿಸಬೇಕೆಂಬ ಪ್ರಚಾರ ಮಾಡಿದರು. ಕೆಲವು ವ್ಯಾಪಾರಿಗಳೂ ಸಹ ಇದಕ್ಕೆ ದನಿ ನೀಡಿದರು. ಆದರೆ ಕಾಲಾನಂತರದಲ್ಲಿ ಹೊಸಬರನ್ನು ಸೇರಿಸಬಾರದು ಎಂಬುದನ್ನು ಒಪ್ಪಿಕೊಂಡರೂ ಹಲವಾರು ವರ್ಷಗಳಿಂದ ತಮ್ಮಂತೆಯೇ ವ್ಯಾಪಾರ ನಡೆಸುತ್ತಿರುವ ಅನ್ಯ ಭಾಷಿಕರನ್ನು ಕೈಬಿಡುವುದು ಸರಿಯಲ್ಲವೆಂದು ಮನಗಂಡು ಮುಖಂಡರ ಮಾತುಗಳಿಗೆ ಸೊಪ್ಪು ಹಾಕಲಿಲ್ಲ. ಭಾಷಾಂಧತೆಯ ಬೇಳೆ ಬೇಯಲಿಲ್ಲ. ಇದರಿಂದ ಕೋಪಗೊಂಡ ಮುಖಂಡರು ತಮ್ಮ ಮಾತನ್ನು ಯಾರೂ ಕೇಳುವುದಿಲ್ಲ ಎಂದು ದೂಷಿಸಿ ತಮ್ಮ ದಾರಿಯನ್ನು ತಾವು ನೋಡಿಕೊಂಡರು ಈ ಮಧ್ಯೆ ಪೊಲೀಸರ ಕಿರುಕುಳ ನಿರಂತರವಾಗಿ ನಡೆಯುತ್ತಲೇ ಇತ್ತು. ಹೆದರಿಸುವುದು, ಬೆದರಿಸುವುದು ಹಣ್ಣು ತರಕಾರಿಗಳನ್ನು ಬೀದಿಗೆಸೆಯುವುದು, ಪಾನಮತ್ತರಾಗಿ ಬಂದು ಅವಾಚ್ಯ ಶಬ್ದಗಳಿಂದ ಬಯ್ಯುವುದು ಇದು ವ್ಯಾಪಾರಿಗಳಿಗೆ ಮಾಮೂಲಾಗಿ ಹೋಗಿತ್ತು.

ಮಿತಿಮೀರಿದ ಕಿರುಕುಳ ಸಂಘರ್ಷಕ್ಕೆ ಸಿದ್ಧರಾದ ವ್ಯಾಪಾರಿಗಳು

ಮೊದಲು ಬೆದರಿಸುವುದನ್ನಷ್ಟೇ ಮಾಡುತ್ತಿದ್ದ ಪೋಲಿಸರು ಇತ್ತೀಚೆಗೆ ವ್ಯಾಪಾರಿಗಳ ಕೈಗಾಡಿಗಳನ್ನೇ ವಶಪಡಿಸಿ ಕೊಂಡು ಠಾಣೆಗೆ ಒಯ್ದರು. ದಂಡವನ್ನು ತೆತ್ತರೂ ಕೂಡ ವ್ಯಾಪಾರಿಗಳಿಗೆ ಕೈಗಾಡಿಗಳನ್ನು ಹಿಂದಿರುಗಿಸಲು ನಿರಾಕರಿಸಿದರು. ಕೈಗಾಡಿಗಳೇ ಇವರ ಜೀವನಕ್ಕೆ ಆಧಾರವಾಗಿರುವಾಗ ಕೈಗಾಡಿಗಳಿಲ್ಲದೆ ವ್ಯಾಪಾರಿಗಳು ಕಂಗಾಲಾದರು.

ಪ್ರಗತಿಪರ ಸಂಘಟನೆಯೊಂದರ ನೇತೃತ್ವದಲ್ಲಿ ತಮಗಾದ ಅನ್ಯಾಯವನ್ನು ಪ್ರತಿಭಟಿಸಲು ಸಿದ್ಧರಾದ ವ್ಯಾಪಾರಿಗಳು ಮೊದಲಿಗೆ ಸ್ಥಳೀಯ ಕಾರ್ಪೊರೇಟರ್ ಮನೆ ಎದುರು ಪ್ರತಿಭಟನೆ ನಡೆಸಿ ನ್ಯಾಯ ದೊರಕಿಸಿಕೊಡಲು ಕೋರಿದರು. ಪೋಲೀಸರು ಕಿರುಕುಳ ನೀಡುತ್ತಿರುವುದು ತಮಗೇ ತಿಳಿದೇ ಇಲ್ಲ ಎಂಬಂತೆ ವರ್ತಿಸಿದ ಪಾಲಿಕೆ ಸದಸ್ಯರು ನಂತರ ಪೋಲೀಸ್ ಅಧಿಕಾರಿಗಳೊಂದಿಗೆ ಮಾತನಾಡಲು ಒಪ್ಪಿ ಸಂಘಟನೆಯ ಮುಖಂಡರೊಂದಿಗೆ ಪೋಲೀಸರೊಂದಿಗೆ ಮಾತುಕತೆ ನಡೆಸಿದರು.

ಪೋಲೀಸ್ ಅಧಿಕಾರಿಗಳು ಕೈಗಾಡಿಗಳನ್ನು ಹಿಂದಿರುಗಿಸಲು ಒಪ್ಪಿ ಫುಟ್‌ಪಾತ್ ವ್ಯಾಪಾರಿಗಳ ಸಮಸ್ಯೆಯ ಇತ್ಯರ್ಥಕ್ಕೆ ಪಾಲಿಕೆ ಸದಸ್ಯರು ಮತ್ತು ಸಂಘಟನೆಯ ಮುಖಂಡರನ್ನು ಚರ್ಚೆಗೆ ಇನ್ನೊಂದು ದಿನ ಕರೆಯುವುದಾಗಿ ತಿಳಿಸಿದರು.

ಅಧಿಕಾರಸ್ಥರ ಎಂಜಲಿಗೆ ನಾಲಿಗೆ ಚಾಚುವ ಪೋಲೀಸರು

ಒಂದು ದಿನ ಪಾಲಿಕೆ ಸದಸ್ಯರು ತಮ್ಮ ಹಿಂಬಾಲಕ ಕೆಲವು ವ್ಯಾಪಾರಿಗಳಿಗೆ ಇಂದು

ಪುಟ 12 ಕ್ಕೆ

ಯಾವ ಪಾರ್ಕಾದರೂ ಸೈ! ದೇವಸ್ಥಾನಕ್ಕಾದರೆ ಜೈ!!

ಬಡವರ ಬಾಳಿಗೆ ಒಂದು ತುಂಡು ಜಾಗ ಕೊಡಲು ಹಿಂದು ಮುಂದು ನೋಡುವ ನಮ್ಮ ಆಳುವ ಮಂದಿ ನಿಧಾನವಾಗಿ ಬೆಂಗಳೂರಿನ ಉದ್ಯಾನಗಳನ್ನು ಅಕ್ರಮಿಸುತ್ತಿರುವ ದೇವಸ್ಥಾನಗಳ ಬಗ್ಗೆ ತುಟಿಪಿಟಿಕ್ಕೆನ್ನುತ್ತಿಲ್ಲ. ಹಿಂದೂವಾದಿಗಳಂತೂ ಇವುಗಳನ್ನು ಗುತ್ತಿಗೆ ಪಡೆದವಂತೆ ರಾಜಾರೋಷವಾಗಿ ಅವುಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಉದ್ಯಾನಗಳಲ್ಲಿ ಒಂದಿಷ್ಟು ಹಸಿರು ಸುತ್ತಲ ಜನರ ಉಸಿರಾಗಬಹುದಾದನ್ನು ತೆಪ್ಪಿಸಿ ವಾಯುಮಾಲಿನ್ಯಕ್ಕೆ ಕಾರಣರಾಗುತ್ತಿದ್ದಾರೆ. ಆಡುವ ಮಕ್ಕಳ ಕ್ರೀಡೋತ್ಸಾಹಕ್ಕೆ, ಬೌದ್ಧಿಕ ಬೆಳವಣಿಗೆಗೆ ಆತಂಕವೊಡ್ಡುತ್ತಿದ್ದಾರೆ.

ಬೆಂಗಳೂರಿನಲ್ಲಿ ದೇವಸ್ಥಾನಗಳಿಗೇನು ಕಡಿಮೆಯೇ? ಅದರಲ್ಲೂ ಎನ್.ಆರ್. ಕಾಲೋನಿಯ ಸುತ್ತಮುತ್ತವಂತೂ ಅನೇಕ ದೇವಸ್ತಾನಗಳಿವೆ. ಭಕ್ತಾಧಿಗಳು ಅಲ್ಲಿಗೆ ಹೋಗುವುದಿಲ್ಲ ಎನ್ನುತ್ತಾರೆಯೆ? ಒಂದು ದೇವಸ್ಥಾನಕ್ಕಾಗಿ ಅದನ್ನು ನಂಬಿ ಬದುಕುವ ಒಬ್ಬ ಪೂಜಾರಿಗಾಗಿ ನೂರಾರು ಬಡಜನರ ಬಾಳನ್ನು ಕತ್ತಲಿಗೆ ನೂಕುವುದು ಎಷ್ಟು ಸರಿ?

ಡ್ರೆಸ್‌ನಲ್ಲಿದ್ದರೆ ದೇವಮಾನವನೆ?

ಪೋಲೀಸರು ವಶಪಡಿಸಿಕೊಂಡಿದ್ದ ವ್ಯಾಪಾರಿಗಳ ಕೈಗಾಡಿಗಳನ್ನು ವಾಪಸು ಪಡೆಯಲು ಹೋದಾಗ ಪೋಲೀಸರು ಹೇಳಿದ ಮಾತು "ಡ್ರೆಸ್‌ನಲ್ಲಿದ್ದ ನಮ್ಮನ್ನು ಬಾಯಿಗೆ ಬಂದ ಹಾಗೆ ಬೈಯ್ದರು ಇವರನ್ನ ಸುಮ್ನ ಬಿಡಬೇಕಾ?". ಬಡವನ ಬಾಳನ್ನು ಕಿತ್ತುಕೊಂಡು ಮೋಜು ನೋಡುವ ಇವರಿಗೆ ಮತ್ತಿನ್ನೇನು ಜೈಕಾರ ಹಾಕಬೇಕಿತ್ತೆ? ಪಾನಮತ್ತರಾಗಿ ಬಂದು ವ್ಯಾಪಾರಿಗಳ ತಾಯಿ, ತಂಗಿ, ಹೆಂಡತಿಯರನ್ನೆಲ್ಲಾ ಬೀದಿಗೆ ತಂದು ನಿಲ್ಲಿಸುವ ಇವರ ಮಾತುಗಳಿಗೆ ಆಕ್ರೋಶಗೊಂಡು ಎದುರು ಮಾತನಾಡುವ ಹಕ್ಕು ಬಡವನಿಗೆ ಇಲ್ಲವೆ? ಎಂಥಹ ಹಲ್ಕಾ ಕೆಲಸ ಮಾಡಿದರೂ ಸರಿ ಸೂಟುಬೂಟು ಹಾಕಿರುವವರನ್ನು ಕಂಡ ತಕ್ಷಣ ಕೈಕಟ್ಟಿ ನಿಲ್ಲುವ ಇವರು, ತಮ್ಮನ್ನು ಕಂಡ ತಕ್ಷಣ 'ಗಂಟುಮೂಟೆ' ಗಳೊಂದಿಗೆ ಓಡಿಹೋಗುವ ವ್ಯಾಪಾರಿಗಳನ್ನು ಕಂಡು ಕೇಕೆ ಹಾಕುತ್ತಾರೆ. ಇವರಿಗೆ ಬುದ್ಧಿ ಕಲಿಸುವವರು ಯಾರು?

ಅಮರೇಶ್ ನುಗಡೋಣಿಯವರು ಇತ್ತೀಚಿನ ದಶಕಗಳಲ್ಲಿ ಹೆಸರು ಮಾಡಿರುವ ಸತ್ವಯುತ ಕಥೆಗಾರರಲ್ಲೊಬ್ಬರು. ಹೈದರಾಬಾದ್ ಕರ್ನಾಟಕದ ಸಮಾಜದ ಬಸಿರೊಳಗೆ ಬೆಳೆಯುತ್ತಿರುವ ಸಂಘರ್ಷಗಳನ್ನು ಅವರ ಕಥೆಗಳು ಚಿತ್ರಿಸುತ್ತವೆ

ಕಥೆ

ತಮಂಧದ ಕೇಡು

ಅಮರೇಶ ನುಗಡೋಣಿ

ಕನಸು ಬಿದ್ದಿತ್ತೋ... ದುರುಗನಿಗೆ ಎಚ್ಚರಾಯ್ತು! ಕಣ್ಣು ತೆರಿತಿದ್ದಂಗೇ ಎದೆ ಡಬಡಬ ಬಡಕಂತಿತ್ತು! ಮೈಯೆಲ್ಲ ಬೆವತು ಹೋಯಿತು! ಅಂಗೇ ಮಕ್ಕಂಡು ಕಂಡ ಕನಸಿನ ಬೆನ್ನು ಹತ್ತಿದ... ನೆಪ್ಪಾಗತೊಡಗಿತು. ಶಾಂತಗೌಡ ಹತ್ಯಾರಿ ಹಿಡುದು, ನಿಂತ್ಗಲೇ... ಅಂತ ಕಲಬಿದ್ದಿದ್ದ! ತನಗ ಓಡಾಕ ಕಾಲು ಏಳುತ್ತಿದ್ದಿಲ್ಲ! ಸತುವ್ವ ಮಾಡಿ ಕಾಲು ಕಿತ್ತಿಡುತ್ತ ಓಡಿದ್ರೂ... ಶಾಂತಗೌಡನ ಹತ್ಯಾರಿ ಬೆನ್ನಿಗೆ ತಾಗಿದಂಗಾಗಿ 'ಸತ್ನೆಪ್ಪೋ.... ಅಂತ ನೆಲಕ್ಕೆ ಬಿದ್ದು ಬುಟ್ಟ! ಹತ್ಯಾರಿ ಏಟು ಬಿದ್ದದ್ದು ತನಗ. ಆದರೆ ಮಗ ಚಿನ್ನ ರಕ್ತಾಗ ಬಿದ್ದದ್ದಂಗ ಕಂಡ! ಅದಕಂಡು ದುರುಗ ಹೌಹಾರಿ, ಕೆಂಡ ಮಂಡಲವಾಗಿ ಅಬ್ಬರಿಸಿ, 'ಗೌಡಾ... ನಿನ್ನುಣ ತೋರಿಸಿಬುಟ್ಟೆ...' ಅಂತ ಹಾರಿ ಶಾಂತಗೌಡನನ್ನು ಹಿಡಕಂಡು ಮುರುದು ಬುಡುಬೇಕಂತ ದುರುಗ ನೋಡ್ತಾನ.... ಶಾಂತಗೌಡ ಕಣ್ಣಿಗೆ ಕಾಣದಂಗ, ಕೈಯಿಗೆ ಸಿಗದಂಗ ನೆಲದಿಂದ ಮುಗಿಲೆತ್ತರಕ್ಕೆ ನಿಂತುಬುಟ್ಟಿದ್ದ! ಇದು ಕಣ್ಣುಮುಂದ ನಡದಂಗ ನೆಪ್ಪಾಗಿದ್ದೇ ತಡ ದುರುಗ ದಿಗ್ಗನೆದ್ದು ಕುಂತು 'ಶಿವಶಿವಾ' ಅಂದ. ಕೆಟ್ಟ ಕನಸ್ಸಂತ ಸಂಕಟವಾಗತೊಡಗಿತ್ತು...!

ಕಣ್ಣಿಗೆ ಏನೋ ಕಾಣಲಿಲ್ಲ; ಕಗ್ಗತ್ತಲು ! ದೊಡ್ಡ ಗವ್ವಾಗ ಕುಂತಂಗನಿಸ್ತು. ಬೆಳಕು ಹರಿಯಲು ಬಂದಿದ್ದಾದು ಅಂತ ಎದ್ದು ಅಂದಾಜಿನ ಮ್ಯಾಗ ಬಾಗಿಲಿಗೆ ಬಂದು ತೆರುದು ಹೊರಗ ಬಂದು ನಿಂತರೂ ಏನು ಬದಲು ಅನಿಸಲಿಲ್ಲ. ಹೊರಗೂ ಕಗ್ಗತ್ತಲು. ವಾರದಿಂದ ಮಾಡ ಮುಚ್ಚಿಗಂಡಿತ್ತು. ಮೈಯಿಗೆ ಚಳಿ ಬಡದಂಗಾಗಿ ಬೆವ್ವತದ್ದಕ್ಕೋ ಹಿತವಾಯ್ತು. ಗಳಿಗೆತ್ತು ನಿಂತು ನಾಯಿ ನರಿ ಕೂಗುವುದು ಕೇಳಿಸ್ಯಾವು ಅಂತ ಕಾದ. ಹುಳಉಪ್ಪಡಿಯ ಸಪ್ಪಳ ಸೈತ ಕೇಳಲಿಲ್ಲ. ಮುಂದತ್ತ ಹೋಗಿ ಕಾಲುಮಡಿಯಾಕ ಕುಂತ. ಚಳಿಯಾಗಿ ಮೈಯೆಲ್ಲ ತೋಯ್ದಂಗನಿಸ್ತು. ಎದ್ದು ಮೈಕೈ ಸವರಿಕೊಂಡು...ನೀರು ನೀರು. ಮೈ ಬೆವ್ವತದ್ದೋ... ಮಂಜು ಬಿಳಕತ್ಯಾದೋ ಅಂತ ಮುಗುಲು ನೋಡಿದ ಮ್ಯಾಗೂ ಕತ್ತಲೇ ಏನೂ ತಿಳಿಯದಂಗಾಗಿ ಮನೆ ಒಳಗ ಬಂದ. ಹುಡುಕಾಡಿ ಚಿಮಣಿ ಮುಡಿಸಿದ. ಮೈಯೆಲ್ಲ ನುಮ್ರಾಗಿತ್ತು. ಪಂಜೆಯಿಂದ ಒರೆಸಿಕೊಂಡು 'ಮಳೆಯಂತೂ ಬರ್ಲಿಲ್ಲ. ಹೊಲಗುಳು ಈ ವರ್ಸ ಬೀಜ ಕಾಣ್ಲಿಲ್ಲ. ಎಳ್ಳಮಾಸಿ ಇರ್ಲಿ..... ಚಿಟ್ಟಮಾಸಿ ಇನ್ನ ಬಂದಿಲ್ಲ. ಆಗ್ಲೆ ಮಂಜು ಬಿಳಾಕ ಸುರುವಾಯ್ತು! ಬೆಳೆಯಿಲ್ದ ಕಾಲ್ದಾಗ ಚಳಿಜಾಸ್ತಿ. ಏನು ಕಾಲಾನೋ ಏನೋ! ಯಾವ ಕಾಲ್ದಾಗ ಏನು ಆಗಬೇಕೋ ಅದು ನಮ್ಮ ಕಾಲ್ದಾಗ ಸರಿಯಾಗಿ ಆಗ್ತಿತ್ತು. ಈಗ.. ಎಲ್ಲ ನಮ್ಮ ಎಣಿಕೆ ಸುಳ್ಳಾಗಕ ಹತ್ಯಾವ. ಕಾಲ ಬದಲಾಕ್ಕೆಂತ ಹೋದ್ರ.... ಮನುಷ್ಯ ಹೆಂಗ ತಡಕಬೇಕು?' ಅಂತ ಅನಕಂಡು ಸುಮ್ಮನಾದ.

ತಿಂಗಳಾಯ್ತು; ಮಗ ಚಿನ್ನನ ಸಲುವಾಗಿ 'ಚಿಂತಿ ಹಚ್ಚಿಕೊಂಡು ಕಮುರತೊಡಗಿದ್ದ. ಮಗ ತಂದೊಡ್ಡಿದ ಕುತ್ತು ಯಾರಿಗೆ ಉರುಲಾತಾದೋ ಅಂಬ ಚಿಂತೆಯಲ್ಲಿ ಮುಳುಗಿದ್ದರೂ ಬಗೆಹರಿವಂಗ ಕಾಣಲಿಲ್ಲ. ನಿದ್ದಿ ನೀರಡಿಕೆ ಕೂನ ಇಲ್ಲದಂಗ ಖಬರುತಪ್ಪಿದ್ದ. ನಿತ್ರಾಣಾಗಿ ಕಣ್ಣುಮುಚ್ಚಿದರೆ ಕನಸುಗಳು, ಕೆಟ್ಟಕನಸುಗಳು ಬೀಳುತ್ತಿದ್ದವ! ಮಗ ತಿಂಗಳಿಂದ ಊರಿಗೆ ಹೋದವ್ನು ಬಂದಿದ್ದಿಲ್ಲ. ಬರಲಾರದ್ದು ಬೇಸಂತ ಕುಂತಿದ್ದ. ಅವ್ನು ಊರಿಗೇ ಬರದು ಬ್ಯಾಡಂತ ದೇವ್ರಂಗ ಕೈ ಮುಗಿತಿದ್ದ. 'ಬರ್ತೀನಪ್ಪ'- ಅಂತಂದು ಹೋದವ್ನು ಬಂದೇ ಬುಟ್ಟರೆ ಹೆಂಗ? ಅಂತ ಬುಗುಲು ಬಿದ್ದಿದ್ದ! ಮನಸ್ಸಿಗೆ ಬುಗುಲು ಹತ್ತಿತ್ತು! ಬಾಳೊತ್ತಾಗಿದ್ದಿಲ್ಲ... ಮತ್ತೆ ಕಣ್ಣು ಮುಚ್ಚಿದಂಗಾಯ್ತು... ಜೀವ 'ಜಲ್' ಅಂದಂಗಾಗಿ ನಡುಗತೊಡಗಿದ. ಅಷ್ಟಕ ನಡುಕ ಕನಸ್ಸು; ಅಕ್ಕಮ್ಮ ಇದೇ ಮನ್ಯಾಗ ತನ್ಗ ಉಂಬಾಕ ನೀಡಿದಂಗ! ಆಕಿ ಇದೇ ಮನ್ಯಾಕಿ ಆದಂಗಿತ್ತು! ನೆನೆನೆನಿಸಿಕೊಂಡು 'ಯಪ್ಪ ಎಲ್ಲಾ ನಿನ್ನಾಟ, ಬಲ್ಲವಯ್ಯಾರು ಅಂತ ಅನಕಂಡು ಕೈಮುಕ್ಕಂಡ.

'ಏನು ದುರುಗಣ್ಣ. ನಿನ್ನ ಮಗ ದೊಡ್ಡನ್ಕ ಕೈಯ್ಯಾಕ್ಯಾನ ಬಾಡು!' ಬಸಣ್ಣದೇವರು ಗುಡಿ ಪೂಜಾರಿ, ಬೂದೆಣ್ಣ ಅವತ್ತು ಅದೆಂಥದೋ ಕೆಟ್ಟ ದನ್ಯಾಗ ಅಂದದ್ದೇ ತಡ, 'ಯಪ್ಪಾ, ಅಂಗ ಒಗಟ್ಟಿನ್ಯಾಗ ಮಾತಾಡಿ ಎದಿಗೆ ಹೊಡಿಬ್ಯಾಡ! ಅದೇನಂಬುದು ಈ ಮಾದ್ಗನಿಗೆ ಸೀದ ಹೇಳಿ ಬಿಡು, ತಂದೆ' ಅಂತಂದಿದ್ದ. 'ನೋಡು ದುರುಗಾ, ನೀನಂದ್ರ ನಮ್ಗೆಲ್ಲ ನಂಬಿಕೆ ಮುನುಷ್ಯ! ನೀನೇ ಹಿಂಗ ನಾಟ್ಕ ಆಡಾಕ ನಿಂತ್ರೆಂಗ?'

'ಯಪ್ಪಾ, ಆ ನಂಬ್ಕಿನ್ನ ಕಳಕಳ್ಳದಂಗ ಬದುಕಿರಬೇಕಂತಾನ ಈ ನಿಮ್ಮ ಮಾದ್ಗ!'

'ಅಂದ್ರ ನಿನ್ಗೇನೂ ಗೊತ್ತಿಲ್ಲೇನು? ನಿನ್ನ ಮಗಾ....'

'ಇಲ್ಲೆಪ್ಪ! ಯಪ್ಪಾ, ನನ್ನ ಮಗ ಅಲ್ಲಪ್ಪ ಅವ್ನು! ಅವ್ನು ಊರಿನ ಮಗ- ಅಂತ ನೀನೇ ಅಂತಿದ್ದಿ...

'ಹೌದೌದು! ಜಾಸ್ತಿ ಓದ್ಯೆಂಡ್ರ ತಲೆ ಬರಾಬರಿ ಇರಂಗಿಲ್ಲಂತಾರಲ್ಲ ಅದು ಸುಳ್ಳಲ್ಲ. ಅಕ್ಕಮ್ಮನ್ನೇ ಮುದ್ದಿ ಮಾಡ್ಕೆಂತೀನಿ ಅಂತ...' ಬೂದೆಣ್ಣ ಅಂದುದ್ದೇ ತಡ ದುರುಗನಿಗೆ ಸಿಡುಲು ಬಡದಂಗಾಯ್ತು! ಖಬುರು ತಪ್ಪಿದಂಗಾಯ್ತು!

'ನೋಡು ದುರುಗಾ, ಎಲ್ಲಿ ಉರಿವಕೊಳ್ಳಿ ಅಲ್ಲೇ ಉರುದ್ರ ಚೆಂದ! ಒಲ್ಯಾಗ ಉರಿವ ಕೊಳ್ಳಿ ಒಲೆ ಬುಟ್ಟು ಬ್ಯಾರೆಕಡೆ ಉರ್ಯಾಕ ಹತ್ತಿತಂದ್ರ ಏನಾದೀತು?' ಅಂತಂದು ಬೂದೆಣ್ಣ ಹೋಗಿಬಿಟ್ಟಿದ್ದ. ದುರುಗ ಆದೆಂಗ ಎದ್ದು ಬಂದಿದ್ದನೋ ತನ್ನ ಮನಿಗೆ. ಬಂದವನೇ ತನ್ನ ಮಗ ಚಿನ್ನನಿಗೆ ಒದ್ದು ಬುಡುಬೇಕಂತ ಬಂದಿದ್ದ! ಆದರೆ ಹತ್ತಾರು ಪುಸ್ತಕದ ನಡುಕ ಚಿನ್ನ ಚೆಂದಾಗಿ ಓದಿಕೆಂತ ಕುಂತುದ್ದು ನೋಡಿ, ಮನಸು ಕರಗಿ ಸಿಟ್ಟಿಳಿದು ಜೀವ ಉಕ್ಕಿ ಬಂದಿತು. ಬಾಗಿಲಲ್ಲೇ ಕುಸುದು ಕುಂತು ಕಣ್ಣೀರ ತಂದಿದ್ದ...!

'ಬಸ್ವಾ, ಮುಪ್ಪಿಗೆ ಎಂಥ ಗಂಡಾಂತರ ತಂದಿಟ್ಟೆ, ತಂದೆ ಯಾರ್ನ ಹಿಡ್ಕಬೇಕು? ಯಾರ್ನ ಬುಡಬೇಕು? ಒಂದು ಕಳ್ಳು...! ಒಂದು ಅನ್ನ... ಅನಕಂಡ. ವ್ಯಥೆಯಾಗತೊಡಗಿತು. ಎದ್ದು ಮತ್ತೆ ಹೊರಗ ಬಂದ. ಸಲುಪು ಕತ್ತಲ ಕರಗಿದಂಗಿತ್ತು. ಚಳಿಗಾಳಿ ಮೈಗೆ ಬಡಿಯಿತು. ಸುತ್ತಲೂ ಕಣ್ಣಾಡಿಸಿದ. ಏನೂ ಕಾಣಲಿಲ್ಲ. ಶಾಂತಗೌಡನ ಕರೆಕಲ್ಲಿನ ದೊಡ್ಡಮನೆಯು ಬೆನ್ನೂ ಕಾಣಲಿಲ್ಲ. ಅತ್ತಾ ಇತ್ತಾ ಕಿವಿಗೊಟ್ಟು ನಿಂತ. ಎತ್ತಿಂದಲೂ ಸಪ್ಪಳ ಅಂಬೋದು ಕೇಳಿಬರಲಿಲ್ಲ. ಕೇರಿ ಎದ್ದಂಗಿಲ್ಲ ಅನಕಂಡ. ಕೇರಿ ಹಿಂದಿದ್ದ ಹಳ್ಳದ ಈಚಲ ಸಾಲಿನಿಂದ ಕಾಗಿಗಳು ಕೂಗುವುದು ಕೇಳಿತು. ಸಲುಪೊತ್ತಿಗೆ ಅದೆಲ್ಲಿಂದಲೋ ಕೋಗಿಲೆಗಳು ಎರಡು ದನಿ ಮಾಡತೋಡಗಿದವ. ಅದಕೇಳುತ್ತ ಕೇಳುತ್ತ ದುರುಗನ ಚಿತ್ತದ ತುಂಬ ಚಿಂವ್ವ ಚಿಂವ್ವ ಚಿಂವ್ವ ಅಂತ... ಕವಕವ ಕಬ್ಬಾಟ ಮಾಡುವ ಸಾವಿರಾರು ಹಕ್ಕಿ- ಪಕ್ಷಿಗಳ ದನಿ ದುರುಗನ ಕಿವಿ ತುಂಬಿತು. ದುರುಗ ಕುಂತುಬುಟ್ಟ! ಅವು ಅಂಗ ಕೂಗಿದರೇನೇ ದುರುಗ- ಚಂದವ್ವಗ ಬಲುಚೆಂದ, ನೆಮ್ಮದಿ ಅನಸ್ತಿತ್ತು. ಹೊತ್ತು ಮುಣುಗಿ ತಾಸತ್ತು ಕೂಗಿ ಗಪ್ಪಾಗಿ ಬುಟ್ಟರೆ ಮತ್ತೆ ಅವು ಸುರುವು ಮಾಡುವುದು ಸೂರಿಯ ಮೂಡುವ ಮುನ್ನವೇ... ಇಂಥ ಹೊತ್ತಿನ್ಯಾಗ. ಈಗ ಕಾಗೆ-ಗುಬ್ಬಿ- ಗೊರವಂಕ -ಬೆಳವ- ಗುಬಲಕ್ಕಿ ಎಂಥೆಂಥವ್ವೋ ಹಕ್ಕಿ- ಪಕ್ಷಿಗಳು ಇವ್ವಗಳೆಲ್ಲ ದುರುಗನನ್ನು ತೊರೆದು ಹೋಗಿ ಬುಟ್ಟಿದ್ದವ. ಜಗದಗಲ ಮುಗಿಲಗಲ ಬೆಳೆದು ಪಾತಾಳಕ್ಕೆ ಇಳುದು ನಿಂತಿದ್ದ ಒಂದು ಬೇವಿನ ಮರ, ಒಂದು ಜಾಲಿ ಮರ ದುರುಗನಕ್ಕಿಂತ ಮೊದಲೇ ಹುಟ್ಟಿ ಬೆಳಕುಂತ ಬಂದಿದ್ದವ. ಅವನಪ್ಪನೋ ಅವನವ್ವನೋ ಇಲ್ಲ ಬಸಣ್ಣದೇವರು ಬೆಳೆಸಿರಬೇಕು. ದುರುಗನ ಹೇಣ್ತಿ ಚಂದವ್ವ ಇರತನಕ ಅಕಿಗೆ ಮನೆಯಂಬೊದು ಇರಲಿಲ್ಲ. ಆ ಮರಗಳ ಒಡಲೊಳಗೇ ನಡಿತ್ತಿತ್ತು. ಚಿನ್ನ ಬೆಳೆದದ್ದೇ ಆ ಮರಗಳ ಉಡಿಯಲ್ಲಿ. ಚಂದವ್ವ ಅದಷ್ಟು ಚಂದ ಹಾಡುತ್ತಿದ್ದಳೆಂದರೆ, ಹೊತ್ತು ಮುಣುಗಿದ ಮ್ಯಾಲೆ ಕೇರಿಯ ಆ ಸತ್ತ ಬ್ಯಾಸತ್ತ ಜೀವಗಳು ಚಂದವ್ವನ ಮರಗಳಿಗೆ ಬಂದು ಕುಂತು, ಹಾಡು ಕೇಳಿ ನಿರುಮ್ಮಳ ಉಸುರುಬುಟ್ಟು ನೆಮ್ಮದಿಯ ಉಸುರು ತುಂಬಿಕೊಳ್ಳುತ್ತಿದ್ದವು. ಕೇರಿಯ ಹಿರಿಯ ಬಸ್ಸಪ್ಪ 'ಚಂದವ್ವ, ನಿನ್ನ ಪದಗಳು ನಮ್ಮ ಎದ್ಯಾಗಿನ ಚಿಂತೆನ್ನ ತಣ್ಣಗ ಮಾಡತಾವ! ಬದುಕಬೇಕು ಅಂಬ ಹುರುಪು ಮೂಡುಸ್ತಾವ!' ಅಂತಿದ್ದ. ಶಾಂತಗೌಡನೇ 'ನನ್ನ ಹೆಣ್ತಿಯಾಗಿ ಚಂದವ್ವ ಯಾಕ ಹುಟ್ಟಬಾರದಿತ್ತು?' ಅಂತ ನೂರಾರು ಸಲ ಅನಕಂಡಿದ್ದ. ಆಮ್ಯಾಲೆ ತಾಳಿ ಕಟ್ಟಿಸಿಕೊಳ್ಳಲಿಲ್ಲ. ಕರೆಕಲ್ಲಿನ ದೊಡ್ಡ ಮನ್ಯಾಗಿದ್ದು ಗೌಡಸಾನಿ ಅಂತ ಅನಿಸಿಕೊಳ್ಳಲಿಲ್ಲ ಅಂಬೋದು ಬುಟ್ಟರೆ ಉಳಿದೆಲ್ಲ ವಿಷಯದಾಗ ಚಂದವ್ವ ಶಾಂತಗೌಡನ ಹೇಣ್ತಿಯೇ ಆಗಿಬುಟ್ಟಳು! ಹೋದ ಬಸ್ಸಣ್ಣದೇವರು ಜಾತ್ರಿಗೆ ಆ ಎರಡು ಮರಗಳನ್ನು ಕಡುದು ನಾಕು ವರ್ಷ ಆಗಿದ್ದಾವ. ಆದರೆ ದುರುಗನಿಗೆ ನಿನ್ನೆ ಮೊನ್ನೆ ಅದೆಲ್ಲ ನಡದಂಗಿತ್ತು... ಅವತ್ತು ಶಾಂತಗೌಡ ಬಂದು ನಿಂತ. ಕಟಿಗಿ ಅಡ್ಡೆ ರಸೂಲ್ ಸಾಬುನ್ನ ಕರ್ಕಂಬಂದಿದ್ದ ಮರಗಳ ಮುಂದ ನಿಂತುಗಂಡು ಬುಡ್ಡೆಯಿಂದ ಕೊಂಬೆ ಕೊಂಬೆಗೆ ಕಣ್ಣೋಡಿಸಿದ ಸಾಬು. 'ಪಟೇಲ್, ಈ ಎರಡು ಮರಗಳನ್ನು ಕಡುದು ಬುಟ್ರ.... ಬಂದಬಸ್ತು ಎರಡು ಎತ್ತಿನ ಬಂಡಿ ಆತಾವ! ನಿಮಗೊಂದು, ನಿಮ್ಮಕ್ಕ ಗೌಡ್ಸಾನಿಗೊಂದು! ಪಟೇಲ್, ನಿಮ್ಮ ತಲೆ ಅಲ್ಲ. ನಿಮ್ಮ ಮೊಮಕ್ಕಳ ತಲೆ ಈ ಬಂಡ್ಯಾಗ ಕಳಿಬೇಕು ಅಂಗ ಬಿಗುದುಕೊಡ್ತೀನಿ. ಪಟೇಲ್, ಕೂರುಗಿ, ಕುಂಟೆ ಮೇಳಿ ಎಲ್ಲ ವತನಕ್ಕೆ ಬೇಕಾಗುವ ಸಾಮಾನು ಮಾಡಿಕೊಡ್ತೀನಿ. ಈ ಸಾಮಾನಂದ್ರ ಹೆಸರಿಗೆ ಅಲ್ಲ. ಇವ್ವಗಳನ್ನು ನೋಡಿದವ್ರು ಶಾಂತಗೌಡನ ಬದುಕು ಅಂದ್ರ ಇವ್ವ ಅನಬೇಕು'- ಅಂದ ಆ ಸಾಬುನ ಮಾತು ಕೇಳಿದ ದುರುಗನ ಜೀವ ಅಲ್ಲಾಡಿತು! ಶಾಂತಗೌಡವ ಜೀವ ಅರಳಿತು. 'ದುರುಗಾ' ಅಂತ ಕರದ ಶಾಂತಗೌಡ. ಶಾಂತಗೌಡ 'ದುರುಗಾ' ಅಂತ ಕರೆವುದೇ ಬಲುಚೆಂದ. ಅದನ್ನು ಕೇಳಿಕೊಳ್ಳುವುದೇ ಪುಣ್ಯ ಅಂತ ನಂಬಿಕೊಂಡಿದ್ದ ದುರುಗ, 'ಮನೆ ಮಗನ್ನ ಕರದಂಗ ಕರಿತಾನ ನಮಗೌಡ' ಅಂತ ಕೇರಿಮಂದಿ ಅನಕಂತಿದ್ದರು. 'ಸಾಬು ಹೇಳದು ಕೇಳಿತೇನು?' ಅಂದ ಶಾಂತಗೌಡ.

'ಹೂಂನಪ್ಪ ಗೌಡ' ಅಂದ ದುರುಗ. ದುರುಗನ ದನ್ಯಾಗ ಏನೋ ಕಸುರು ಕಾಣಿಸ್ತು. ಅದಕಂಡ ಶಾಂತಗೌಡ ಯಾಕ ದುರುಗನಿಗೆ ಮನಸ್ಸಿಲ್ಲಂತ ತಿಳಕಂಡ. ದುರುಗನಿಗೆ ಚಂದವ್ವ ನೆಪ್ಪಾದಳು. ಆ ಹೊತ್ತಿಗೆಲ್ಲ ಆಕಿ ಮಾಡದಾಗಿನ ಚಂದಪ್ಪನ ಜತಿಗೆ ಒಂದು ಚುಕ್ಕೆಯಾಗಿ ಕೂತ ನೋಡುತ್ತಿದ್ದಳು.

'ನಿನ್ಗ ಮನ್ಸಿಲ್ಲಂದ್ರ ಬ್ಯಾಡಬುಡು' ಶಾಂತಗೌಡನ ದನಿ ಬಿರುಸಾಗಿತ್ತು.

'ಅಂಗಲ್ಲಪ್ಪ, ಈ ಮರಗಳು ಅಂದ್ರ ನನ್ನ ಜೀವ ಇದ್ದಂಗ! ಯಪ್ಪ, ಜೀವ ಅಂದ್ರ... ಚಂದವ್ವ ಇದ್ದಂಗ. ಚಂದವ್ವಗ ಇವಂದ್ರ ಬಾಳ ಜೀವ .. ಅದ್ಕ... ಅಂದು ಮರನ್ನ ನೋಡಿದ. 'ಯಪ್ಪೋ ಚಿನ್ನ ಬಂದ್ರ ಹಗಲೆಲ್ಲ ಈ ಮರಗಳ ಬುಡುಕ ಕುಂತೇ ನೂರಾರು ಪುಸ್ತಕ ಓತ್ತಾನ' ಅಂತ ಅನದ್ರಾಗ ದುಕ್ಕ ಒತ್ತಿ ಬಂತು... ದುರುಗನ್ನ ಈಗ ತಡುವದು ಬ್ಯಾಡನಿಸಿ ಶಾಂತಗೌಡ ಹೋದ.

ಮೂರುನಾಕದಿನ ಬುಟ್ಟು 'ದುರುಗಾ' ಅಂದ ಶಾಂತಗೌಡ. ಆ ಪುಣ್ಯದ ಕರೆ ಕೇಳಿಸಿಕೊಂಡು 'ಯಪ್ಪೋ' ಅಂದ 'ಗಾ.... ನಿನ್ಗ ಇದೇ ನಮ್ಮ ಜಾಗದಾಗ ಮನೆ ಕಟ್ಟಿಸಿಕೊಡ್ತೀನಿ. ನಮ್ಮ ಜಾಗದಾಗನೇ ಆಯ್ತಾ?' ಅಂದ. ದುರುಗ ಇರುವುದು, ಅವ್ವನ ಮರಗಳಿರುವುದು ಶಾಂತಗೌಡನ ಜಾಗದಾಗ ಅಂತ ನೆನಪಿಸಿದಂತಾಗಿತ್ತು 'ದೇವರು ಇಚ್ಛಾ' ಅಂದುಬುಟ್ಟ ದುರುಗ ಎರಡು ಮೂರು ಹಗಲು, ಹತ್ತಾರು ಮಂದಿ ಆ ಎರಡು ಮರಗಳನ್ನು ಮುರುದು ಕೂಡಿಟ್ಟರು. ಕಣ್ಣಲೇ ನೋಡದು ಆಗ್ಲಿಲ್ಲ. ಆದರೆ ಮುಂದ ನಿಂತ್ಗಂಡು ದಗದ ನೋಡದು ದುರುಗನ ಪಾಲಿಗಿತ್ತು. ಆ ಎರಡು ಮರಗಳ ತುಂಬ ಸಂಸಾರ ಹೂಡಿದ್ದ ಸಾವಿರಾರು ಹಕ್ಕಿ- ಪಕ್ಷಿಗಳು ತಮ್ಮ ಗೂಡುಗಳನ್ನು ಮರಿ ಜೀವನಗಳನ್ನು ಸೈತ ಕಳಕಂಡು ಎರಡು ಮೂರು ದಿನ ಕೆಟ್ಟ ದನಿಲೆ ಚ್ರೆಂವ್ ಚ್ರೆಂವ್, ಕಾ ಕಾ ಟ್ರೆಂವ್ ಟ್ರೆಂವ್ ಅಂತ ಕಬ್ಬಾಟಟಿಟ್ಟು ಒದರಿ ಅಲ್ಲೇ ಸುತ್ತಿಸುತ್ತಿ ಹೌಹಾರಿ ಸೋತು ಮತ್ತೆ ಎತ್ತಗೋ ದೇವರು ತೋರಿಸಿದ ಜಾಗಕ್ಕ ಹೋಗಿಬುಟ್ಟುವು. ಅದೇ ಜಾಗದಾಗ ಹಾಳು ಮಣ್ಣಿನಿಂದ ಎಳ್ಳೆ ಮಾಡಿಸಿ ಎರಡು ಕೋಣೆಯ ಒಂದು ಹೆಂಡೆಮನೆಯನ್ನು ಶಾಂತಗೌಡ ದುರುಗನಿಗೆ ಕಟ್ಟಿಸಿಕೊಟ್ಟ. ಅದಕ್ಕಿಂತ ಮುಂಚೆ, 'ದುರುಗಾ, ನಿನ್ಯಾಕ ಮನೆ? ನಿನ್ನ ಮನೆ ಇದು' ಅಂತ ಶಾಂತಗೌಡ ತನ್ನ ಕರೆಕಲ್ಲಿನ ದೊಡ್ಡ ಮನ್ಯಾಗ ಕುಂತು ಅಂದ. ದುರುಗನ ಪಾಲಿಗೆ ಅದು ಸಲುಪು ನಿಜ. ಆದರೆ ಮಗ ಚಿನ್ನನ ಪಾಲಿಗೆ ಅಲ್ಲ- ಅಂತ ನೆನಸಿಗಂಡು. 'ಯಪ್ಪ ನನ್ಗ ಒಂದು ಮನೆಯಂತ ಇರ್ಲಿ. ಜಡ್ಡು ಜಾಪತ್ತು ಬಂದ್ರ...' ಅಂದ ದುರುಗನ ಮನಸ್ಸಿನಂತೆ ಆಮನೆ ಆಗಿತ್ತು. ದುರುಗನಿಗೆ ಆ ಮನೆಯಂದ್ರ ಸುಡಗಾಡದಾಗ ಒಂದು ಹೆಣದ ಗದ್ದಿಗಿ ಕುಂತಂಗ ಕಂಡಿತು. ಆ ಮನೆ ಹೊಕ್ಕರೆ ಹೆಣದ ಕುಣಿ ಹೊಕ್ಕಂತಾಗುತ್ತಿತ್ತು. ಅವತ್ತಿನಿಂದ ದುರುಗ ಚೈತನ್ಯ ಕಳಕೊಂಡ. ಮಗ ಚಿನ್ನನಿಗೆ ಇದು ಗೊತ್ತಾಗಿ ಬಂದ. ಕೆಂಡಮಂಡಲಾಗಿ ನಿಂತ.

(ಮುಂದಿನ ವಾರಕ್ಕೆ)


ಈ ಚರಿತ್ರೆ ನಮ್ಮದಲ್ಲ

ಈ ಚರಿತ್ರೆ ನಮ್ಮದಲ್ಲ
ಇದು ನಮಗಲ್ಲ
ರಾಜಾಧಿರಾಜಮಾರ್ತಾಂಡ ಬಿರುದಂತೆಂಬರ
ಗಂಡ
ಬಿರುದು ಹೊತ್ತ ಈ ದೇಶದ ಧರಿತ್ರೀಪಾಲನ
ಚರಿತ್ರೆ
ಕೀವು ತುಂಬಿಕೊಂಡು
ಬದುಕು ಮುದುಡಿಕೊಂಡು
ನೆಲದ ಬಾಂಡಲೆ ಮೇಲೆ ಪಟಪಟನೆ
ನುಲುಗಾಡಿ
ಬಾಳು ಹಳಿದುಕೊಂಡ
ಅತ್ತವರ ಸತ್ತವರ ಇತಿಹಾಸವಲ್ಲವಿದು.
ಭೋಜರಾಜನ ಹೆಂಡತಿಯರು ಲೆಖ್ಖಕ್ಕೆ ಆರು
ಮಕ್ಕಳು, ಸರಾಸರಿ ಹತ್ತು
ಉಳಿದವರ ಬಸಿರು ಅಳಿದಿತ್ತು
ಮೊದಲ ಮಗ ಅಪ್ಪನ ಇರಿದ
ಎರಡನೆಯ ಮಗ ಅವ್ವೆಯ ಕೂಡಿದ
ಕಿರಿಯವಳು ತನ್ನಣ್ಣನಿಗೆ ಬಸಿರು ಹಿರಿಯವಳು
ತನ್ನಪ್ಪನ ಕೊಸರು
ನಡೆದದ್ದು ತಾಳಿಕೋಟೆ ಯುದ್ಧ
ಇಕ್ಕೆಲದ ಭಟರುಗಳು ಸಾಯುವುದಕ್ಕೆ ಸದಾಸಿದ್ದ
ಯುದ್ಧಕ್ಕೆ ಬಂದ
ಗಜ ತುರಗ ರಥ ಪದಾತಿಗಳ ಸೈನ್ಯ ಲಕ್ಷೋಪಲಕ್ಷ
ಯುದ್ಧ ಹೂಡಲು ಬಂದ
ರಾಜಾಧಿರಾಜರಿಗೆ ಇದು ಯಾವ ಲಕ್ಷ್ಯ?
ನೆಡೆಸಿದ್ದ : ಸಾಲುಮರ
ದೇಶದಲ್ಲೆಲ್ಲೆಲ್ಲೂ ನೀರಿನ ಬರ
ಅರವಟ್ಟಿಗೆಯಲ್ಲಿ ಕುಳಿತವರ ಬೊಜ್ಜು ಬೆಳೆದಿತ್ತು
ದೀನ ದಲಿತರ ಪಾಡು ತಮಟೆ ಹೊಡೆದಿತ್ತು
ಅರಮನೆಯ ದಾಸಿಯರೆಲ್ಲ
ರಾಜಾಸ್ಥಾನದ ಸೇವೆಗೆ ಮೈಚೆಲ್ಲಿ
ಗಂಡಮಿಂಡರು ಬಳಸೊಗೆದ
ನಾಯಿ ಮುಟ್ಟಿದ ಮಡಕೆ
ಇವರ ರಾಜ್ಯದಲ್ಲಿ ಹೆಣ್ಣಿಗೆ ಹನ್ನೆರಡಾಗಲಿಲ್ಲ
ಆದವರು ಉಳಿಯಲಿಲ್ಲ
ಒರಲುತ್ತ ನರಳುತ್ತ ನರಳುತ್ತ ಸಾಯುತ್ತ
ಸತ್ತ ಜನಗಳ ಕೂಗು ಅರಮನೆಯ ಅರಸರಿಗೆ
ಕೇಳಲಿಲ್ಲ
ಕೂಗು ಕೇಳಿದರೂ
ಬಿದ್ದ ರಾಜರ ದೃಷ್ಟಿಗುಳಿಯಲಿಲ್ಲ
ಯಾಕೆಂದರೆ
'ರಾಜಾ ಪ್ರತ್ಯಕ್ಷ ದೇವತಾ'
ಹೀಗಾಗಿ ಅತ್ತವರು ಹೇಗೇಗೊ ಸತ್ತವರು
ಆಗಿಹೋದರು ನಮ್ಮ ಇತಿಹಾಸದಲ್ಲಿ
ಹೀಗೆಯೇ ಉಳಿಯುವುದೆ ನಾವಿನ್ನು ಮುನ್ನ
ಕಟ್ಟಬೇಡವೆ ನಾವು ನಮ್ಮ ಮನೆಯನ್ನು?

- ಹೊರೆಯಾಲ ದೊರೆಸ್ವಾಮಿ

ಹೊರೆಯಾಲ ದೊರೆಸ್ವಾಮಿಯವರು ಬಂಡಾಯ ಚಳುವಳಿಯ ಬೆಳಕಿನೊಂದು ಕಿರಣ. ಇತಿಹಾಸದ ಬಗ್ಗೆ ಅಬ್ಬರದ ಮಾತುಗಳು ಕೇಳಿಬರುತ್ತಿರುವಾಗ ಈ ಕವನದ ಮಾತು ದೇಶದೆಲ್ಲೆಡೆ ದನಿಯಾಗಬೇಕಾಗಿದೆ.

ಅಂಗನವಾಡಿ ನೌಕರರ ಮೇಲೆ ಪೊಲೀಸರ ರುದ್ರ ನರ್ತನ



ಮನಸೋ ಇಚ್ಛೆ ಹರಿಯಬಿಟ್ಟ ಲಾಠಿ, ಅಶ್ರುವಾಯು, ವಾಟರ್ ಜೆಟ್, ಅಶ್ವದಳ, ನೂರಾರು ಮಹಿಳೆಯರಿಗೆ ಗಾಯ - ಬಯಲಾದ ಚಂದ್ರಬಾಬು ನಾಯ್ಡು ನಿಜಮುಖ

ಮಾರ್ಚ್ 30ರಂದು ಹೈದರಾಬಾದಿನ ಇಂದಿರಾ ಪಾರ್ಕಿನಲ್ಲಿ ಸುಮಾರು 10 ಸಾವಿರ ಅಂಗನವಾಡಿ ನೌಕರರು ಪ್ರದರ್ಶನಕ್ಕಾಗಿ ಸೇರಿದ್ದರು. ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಚಂದ್ರಬಾಬುನಾಯ್ಡುರವರು ಸ್ವತಃ ತಾವಾಗಿಯೇ ನಾಲ್ಕು ವರ್ಷಗಳ ಹಿಂದೆ ಪೂರೈಸುವುದಾಗಿ ಭರವಸೆ ನೀಡಿದ್ದ ಕೆಲವು ಬೇಡಿಕೆಗಳನ್ನು ಈಗಲಾದರು ಇತ್ಯರ್ಥಪಡಿಸಲು ಒತ್ತಾಯಿಸುವುದೇ ಅಂದಿನ ಪ್ರದರ್ಶನದ ಉದ್ದೇಶವಾಗಿತ್ತು.

ಹಬ್ಬದ ಮುಂಗಡ, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಹುದ್ದೆಗಳಲ್ಲಿ ಅಂಗನವಾಡಿ ನೌಕರಿಗೆ ಮೀಸಲಾತಿ ಮುಂತಾದ ಬೇಡಿಕೆಗಳನ್ನು ಈಡೇರಿಸುವುದಾಗಿ ತಾವಾಗಿಯೇ ಘೋಷಿಸಿಕೊಂಡಿದ್ದ ಮುಖ್ಯಮಂತ್ರಿಗಳ ಮಾತಿನ ಮೇಲೆ ಭರವಸೆ ಇಟ್ಟು ನಾಲ್ಕು ವರ್ಷ ಕಾದ ನಂತರ ಬೇರೆ ಉಪಾಯವಿಲ್ಲದೆ ಮುಖ್ಯಮಂತ್ರಿಗಳಿಗೆ "ಭರವಸೆಯ" ನೆನಪು ಮೂಡಿಸಲು ಮಾರ್ಚ್ 30 ರಂದು ಸಾವಿರಾರು ಸಂಖ್ಯೆಯಲ್ಲಿ ನೌಕರರು ಪ್ರದರ್ಶನಕ್ಕೆ ಮುಂದಾಗಬೇಕಾಯಿತು.

ಆದರೆ ಅಂದು ಸಿಕ್ಕಿದ ಸತ್ಕಾರ ಮಾಮೂಲಿನಂತಿರಲಿಲ್ಲ. ಮತ್ತೊಂದು ಭರವಸೆಯ ಮೂಲಕ ಸಮಾಧಾನವೂ ಆಗಿರಲಿಲ್ಲ. ಅಂದು ಮುಖ್ಯಮಂತ್ರಿಗಳು ನೇರವಾಗಿ ಮಾತನಾಡಲೂ ಇಲ್ಲ. ಪರೋಕ್ಷವಾಗಿ ಸರ್ವ ಸಿದ್ಧತೆಗಳನ್ನು ಏರ್ಪಡಿಸಿದ್ದರು.

ಎಂತಹಾ ಸಿದ್ಧತೆ ಎಂದಿರಾ.......

ಅಂಗನವಾಡಿಗಳಲ್ಲಿ ಗುಲಾಮರಂತೆ ದುಡಿಯುವ ಮಹಿಳೆಯರನ್ನ ಸದೆಬಡಿಯಲು ಅಶ್ರುವಾಯು ಸೆಲ್‌ಗಳನ್ನು, ಅಶ್ವದಳವನ್ನು, ಸುಸಜ್ಜಿತ ಪೊಲೀಸ್ ಸೈನ್ಯವನ್ನು.

ಮಹಿಳೆಯರ ಮೇಲೆರಗಲು ಮುಂಜಾನೆಯಿಂದಲೇ ಸಜ್ಜಾಗಿದ್ದ ಪೊಲೀಸರೆಂಬ ರಾಕ್ಷಸರು.

ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಹೈದರಾಬಾದಿಗೆ ಜಮಾಯಿಸುವ ವಿಷಯ ತಿಳಿಯುತ್ತಿದ್ದಂತೆ ಅವರ ಐಕ್ಯತೆಯನ್ನು ಮುರಿಯಲು ಯೋಜಿತ ರೀತಿಯಲ್ಲಿ ಪೊಲೀಸರು ಸಜ್ಜಾಗಿದ್ದರು. ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಲು ರೈಲಿನಲ್ಲಿ, ಬಸ್ಸಿನಲ್ಲಿ, ಲಾರಿಗಳಲ್ಲಿ ಬರುತ್ತಿದ್ದ ನೌಕರರನ್ನು ಮಾರ್ಗ ಮಧ್ಯದಲ್ಲಿಯೇ ತಡೆದು ನಿಲ್ಲಿಸಲಾಯಿತು. ಹೈದರಾಬಾದ್‌ನ 'ಇಂದಿರಾ ಪಾರ್ಕನ್ನು ಪ್ರವೇಶಿಸದಂತೆ ನಿರ್ಬಂಧ ಹೇರಲಾಯಿತು. ಇಷ್ಟಾದರು 10 ಸಾವಿರದ ವರೆಗೆ ಮಹಿಳೆಯರು ಒಂದೆಡೆ ಸೇರುವಲ್ಲಿ ಯಶಸ್ವಿಯಾದರು.

ದುಡಿಯುವ ಜನರ, ಅದರಲ್ಲೂ ಮಹಿಳೆಯರ ಒಗ್ಗಟ್ಟನ್ನು ಸಹಿಸಲಾಗದ 'ಕಂಪ್ಯೂಟರ್ ಪ್ರಿಯ' ಮುಖ್ಯಮಂತ್ರಿ ಪೊಲೀಸರನ್ನ ಬಿಟ್ಟು ಮಹಿಳೆಯರ ಮೇಲೆ ಇನ್ನಿಲ್ಲದ ರುದ್ರನರ್ತನ ನಡೆಸಿದರು.

ಮಹಿಳಾ ಪೊಲೀಸರನ್ನ ಬದಿಗೆ ತಳ್ಳಿ ಪುರುಷ ಪೊಲೀಸರೇ ಲಾಠಿಗಳನ್ನು ಹಿಡಿದು ರಾಕ್ಷಸರಂತೆ ಮಹಿಳೆಯರನ್ನ ಮನಸೋ ಇಚ್ಛೆ ಥಳಿಸಿದರು. ಇಂದಿರಾ ಪಾರ್ಕಿನಿಂದ ಅಸೆಂಬ್ಲಿ ಕಡೆಗೆ ಹೊರಟಿದ್ದ ಮೆರವಣಿಗೆಯನ್ನು ಚದುರಿಸಲು ಅಶ್ರುವಾಯು ಸೆಲ್‌ಗಳನ್ನು ಸಿಡಿಸಿದರು. ಸಾಲದೆಂಬಂತೆ ಅಶ್ವದಳವನ್ನು ಬಳಸಿ ಮಹಿಳೆಯರನ್ನು ತುಳಿಸಿದರು. ನೆಲಕ್ಕೆ ಅಪ್ಪಳಿಸಿದ ಮಹಿಳೆಯರ ಮೇಲೆ ಗಾಯಗಳಾಗುವ ತನಕ ಎಲ್ಲೆಂದರಲ್ಲಿ ಹೊಡೆದರು. ಇಷ್ಟಾದರು ಚದುರದೆ ಅಚಲವಾಗಿ ನಿಂತಿದ್ದ ಮಹಿಳೆಯರು "ವಿಶ್ವ ಬ್ಯಾಂಕಿನ ಜೀತಗಾರ ಚಂದ್ರಬಾಬು ಮೋಸಗಾರ" ಎಂದು ಸಾರಿ ಸಾರಿ ಹೇಳುತ್ತಿದ್ದರು. ಬಯಲಾದ ಚಂದ್ರಬಾಬುವಿನ ನಿಜ ಮುಖಕ್ಕೆ ಛೀಮಾರಿ ಹಾಕುತ್ತಿದ್ದರು. ಆಳುವ ಪ್ರಭುಗಳ ದಾಳಿ ನಡದೇ ಇತ್ತು ತೀವ್ರವಾಗಿ ನೂರಾರು ಮಹಿಳೆಯರು ಗಾಯಗೊಂಡರು. ನಾಲ್ಕು ಜನ ಮಹಿಳೆಯರ ಸ್ಥಿತಿ ಗಂಭೀರ ರೂಪ ಪಡೆಯಿತು.

ಹೋರಾಟಕ್ಕೆ ಸೌಹಾರ್ದ ಬೆಂಬಲ ಸೂಚಿಸಲು ತೆರಳಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಉಪಾಧ್ಯಕ್ಷರೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆದ 'ಮಲ್ಲು ಸ್ವರಾಜ್ಯಂ' ಅವರ ಕೈಗೆ ತೀವ್ರ ಪೆಟ್ಟಾಯಿತು. ಜೊತೆಗೆ ಎಐಕೆಎಸ್, ಡಿವೈಎಫ್‌ಐ, ಸಿಐಟಿಯು, ಜನವಾದಿ ಮಹಿಳಾ ಸಂಘಟನೆಯ ಸಂಗಾತಿಗಳು ಗಾಯಗೊಂಡರು.

ಸೌಹಾರ್ದತೆ ವ್ಯಕ್ತಪಡಿಸಲು ಹೋಗಿದ್ದ ಸಹೋದರ ಸಂಘಟನೆಗಳ ಮುಖಂಡರು, ಕಾರ್ಯಕರ್ತರುಗಳನ್ನು ಸಹ ಸಂಧಿಸಲಾಯಿತು.

ವೃದ್ಧ ಮಹಿಳೆಯರನ್ನೂ ಬಿಡದೆ ಪ್ರಜ್ಞೆ ತಪ್ಪುವವರೆಗೆ ಹೊಡೆದ ಪೊಲೀಸರು ಆಳುವ ಧಣಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾದರು.

ನಾಲ್ಕು ವರ್ಷ ಕಾಯಿಸಿದ್ದು ಸಾಲದೆಂದು ರಣಬಿಸಿಲಿನಲ್ಲಿ ನಾಲ್ಕು ಗಂಟೆ ಒಣಗಿಸಿದ್ದು:

'ಸ್ವರ್ಣಾಂಧ್ರ'ವನ್ನು ಸೃಷ್ಟಿಸುತ್ತೇನೆಂದು ಬಡಾಯಿ ಕೊಚ್ಚಿಕೊಳ್ಳುವ ಆಂಧ್ರದ ಮುಖ್ಯಮಂತ್ರಿಗಳು ಅಂಗನವಾಡಿ ಮಹಿಳೆಯರಿಗೆ ಸಂಬಳ ನಿಲ್ಲಿಸಿ ನಾಲ್ಕೈದು ತಿಂಗಳುಗಳೇ ಕಳೆದಿವೆ.

ಕ್ಲಿಂಟನ್ ಮಹಾಶಯನನ್ನು ಆಹ್ವಾನಿಸಿ ಸಂತೈಸಲು ಯಥೇಚ್ಛ ಹಣ ಖರ್ಚುಮಾಡಿದ ಚಂದ್ರಬಾಬು ನಾಯ್ಡುಗೆ ಅಂಗನವಾಡಿ ನೌಕರರ ಸಲುವಾಗಿ ಕಿಂಚಿತ್ತು ನೆರವು ನೀಡಲು ಖಜಾನೆಯಲ್ಲಿ ಹಣವಿಲ್ಲವಂತೆ.

"ಹೋದಲ್ಲೆಲ್ಲಾ ಮಹಿಳಾ ಉದ್ಧಾರದ ಬಗ್ಗೆ ಗಂಟೆಗಟ್ಟಲೆ ಗಂಟಲು ಹರಿದುಕೊಳ್ಳುವ ಮುಖ್ಯಮಂತ್ರಿಗಳಿಗೆ ಅಂಗನವಾಡಿಗಳಲ್ಲಿ ದುಡಿಯುವವರು ಮಹಿಳೆಯರೆಂದು ತಿಳಿದಿಲ್ಲವಾ" ಎಂಬುದು ಸಂಘದ ರಾಜ್ಯ ಕಾರ್ಯದರ್ಶಿ ರೋಜಾ ಪ್ರಶ್ನೆ. 'ಕ್ಲಿಂಟನ್ ಪಕ್ಕದಲ್ಲಿ ಕೂತು, ಉಂಡು ತೇಗಿ ಲಲ್ಲೆ ಹೊಡೆದು ಊರೆಲ್ಲಾ ಸುತ್ತಾಡಿದ ಮುಖ್ಯಮಂತ್ರಿಗಳನ್ನು' ಸಾಧಾರಣ ಮಹಿಳೆ ಪ್ರಶ್ನೆ ಕೇಳುವುದೆಂದರೇನು. ಹುಡುಗಾಟಿಕೆಯೆ? ಕೂಡಲೆ ಮುರಿಯಿತು ನೋಡಿ ಪೊಲೀಸರ ಲಾಟಿ ರೋಜಾ ಮೇಲೆ ಹಾರಿ. 70.000 ಅಂಗನವಾಡಿ ನೌಕರರನ್ನು ಪ್ರತಿನಿಧಿಸುವ ರಾಜ್ಯ ಕಾರ್ಯದರ್ಶಿಗೆ ಬಂದೊದಗಿದ ಸ್ಥಿತಿ ಇದು.

ಮಾತುಕತೆಗೆಂದು ನಿಯೋಗವನ್ನು ತಮ್ಮ ಕಛೇರಿಗೆ ಕರೆಸಿಕೊಂಡ ಮುಖ್ಯಮಂತ್ರಿಗಳು ಅಂಗನವಾಡಿ ನೌಕರರ ಬೇಡಿಕೆಗಳನ್ನು ಈಡೇರಿಸಲು ಖಜಾನೆಯಲ್ಲಿ ಕಾಸಿಲ್ಲವೆಂದು ಹೊರಗೆ ಸಾಗಾಕಿದರು. ಮಾತುಕತೆಯ ಫಲಿತಾಂಶ ವಿವರಿಸಲು ಪ್ರದರ್ಶನಕಾರರ ಕಡೆ ಹೊರಟ ನಿಯೋಗವನ್ನು ಕೋಣೆಯಿಂದ ಹೊರ ಹೋಗುತ್ತಿದ್ದಂತೆಯೇ ಪೊಲೀಸಲು ಬಂಧಿಸಿದರು.

ಇತ್ತ, ಮುಖಂಡರು ಬರುತ್ತಾರೆ, ಸಿಹಿಸುದ್ದಿ ತರುತ್ತಾರೆ. ಮೊನ್ನೆಯಷ್ಟೇ 'ಅಂತರ ರಾಷ್ಟ್ರೀಯ ಮಹಿಳಾ' ದಿನ ಜರುಗಿದೆ. ಮಹಿಳೆಯರ ಸಲುವಾಗಿ ಬೇಕಾದಷ್ಟು ಮಾತಾಡಿದ್ದಾರೆ ನಮ್ಮನ್ನು ನಿರಾಸೆಗೊಳಿಸುವುದಿಲ್ಲವೆಂದು ನಂಬಿ, ನೆರೆದಿದ್ದ ಮಹಿಳೆಯರು ಕಾಯ್ದರು.. ಕಾಯ್ದರು... ಕಾಯುತ್ತಲೇ ಇದ್ದರು. ರಣಬಿಸಿಲಿನಲ್ಲಿ ಸತತವಾಗಿ ನಾಲ್ಕು ಗಂಟೆ.

ಆದರೆ ಯುಗಾದಿಯ ಕೊಡುಗೆಯಾಗಿ ಸಿಕ್ಕದ್ದು ಬೆಲ್ಲವಲ್ಲ ಬರೀ ಬೇವು ಮಾತ್ರ. ಸಿಹಿ ಸುದ್ದಿ ತರಲು ಹೋಗಿದ್ದ ಮುಖಂಡರನ್ನು ಬಂಧಿಸಿಟ್ಟ ಸುದ್ಧಿ ತಲುಪಿದ್ದು ನಾಲ್ಕು ಗಂಟೆಗಳ ತರುವಾಯ. ಸುದ್ದಿ ಹಬ್ಬುತ್ತಿದ್ದಂತೆಯೆ ಪ್ರದರ್ಶನಕಾರರು ನಿತ್ರಾಣರಾದರು. ಹೋರಾಟದ ದಿಕ್ಕು ತಪ್ಪಿಸಲು ಹೂಡಿದ ಷಡ್ಯಂತ್ರ ಕಂಡು ತಾಳ್ಮೆ ಕಳೆದುಕೊಂಡರು. ರಣ ಬಿಸಿಲಿನಲ್ಲಿಯೇ ಪ್ರತಿಭಟನೆಯನ್ನು ಶಾಂತ ರೀತಿಯಲ್ಲೇ ಮುಂದುವರೆಸಿದರು. ಮುಂದಿನದೆಲ್ಲವು ಅವರ ನಿರೀಕ್ಷೆಗೂ ಮೀರಿ ನಡೆದು ಹೋದವು.

ತಲೆ ಹೊಡೆದರು, ಮೂಗು ಬಾಯಲ್ಲಿ ರಕ್ತ ಹರಿಸಿದರು, ಕೈ-ಕಾಲು ಮುರಿದರು, ರಸ್ತೆಯಲ್ಲಿ ಅಪ್ಪಳಿಸಿ ಎಳೆದಾಡಿದರು. ಕುದುರೆಗಳಿಂದ ತುಳಿಸಿದರು. 21 ನೇ ಶತಮಾನದ ಕಂಪ್ಯೂಟರ್ ಯುಗಕ್ಕೆ ಕರೆದೊಯ್ದೇಬಿಟ್ಟರು, ಮಹಿಳೋದ್ಧಾರಕರು.

ತೀವ್ರ ರೀತಿಯ ದಾಳಿಯನ್ನು ಖಂಡಿಸಿ ವಿವಿಧ ಸಂಘಟನೆಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ.

ಅಂಗನವಾಡಿ ನೌಕರರ ಅಖಿಲ ಭಾರತ ಫೆಡರೇಷನ್‌ನ ಅಖಿಲ ಭಾರತ ಕಾರ್ಯದರ್ಶಿ ಕೆ. ಹೇಮಲತಾ ಹೇಳಿಕೆಯೊಂದನ್ನು ಬಿಡುಗಡೆ ಮಾಡಿ ಜನವಿರೋಧಿ, ಮಹಿಳಾ ವಿರೋಧಿ ಕೃತ್ಯವನ್ನು ಖಂಡಿಸಿದ್ದಾರೆ. ಮಾತ್ರವಲ್ಲದೆ ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲ ಒಗ್ಗೂಡಿ ಅಂಗನವಾಡಿ ನೌಕರರ ವಿಜಯಕ್ಕೆ ಸಹಕಾರ ನೀಡಲು ಮನವಿ ಮಾಡಿರುತ್ತಾರೆ.

ನೌಕರರ ಬೇಡಿಕೆಗಳನ್ನು ಕೂಡಲೇ ಇತ್ಯರ್ಥಪಡಿಸಲು ಸರ್ಕಾರವನ್ನು ಆಗ್ರಹಪಡಿಸಿದ್ದಾರೆ.

ಅಸೆಂಬ್ಲಿಯಲ್ಲಿ ಸಹ ಸಿಪಿಐ(ಎಂ)ನ ಶಾಸಕರು ದಮನದ ವಿರುದ್ಧ ದನಿ ಎತ್ತಿದ್ದಾರೆ. ಕೂಡಲೆ ಬೇಡಿಕೆಗಳನ್ನು ಈಡೇರಿಸಲು ಆಗ್ರಹಪಡಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕರು ಸಹ ಬೆಂಬಲ ಸೂಚಿಸಿದ್ದಾರೆ.

"ರಾಜಿ ಇಲ್ಲದ ಹೋರಾಟಗಳನ್ನು ತೀವ್ರಗೊಳಿಸದೆ ದುಡಿಯುವ ಜನರಿಗೆ ಉಪಾಯವಿಲ್ಲವೆಂಬುದು ಮತ್ತೆ ಮತ್ತೆ ಎಲ್ಲೆಡೆ ಸಾಬೀತಾಗುತ್ತಿದೆ. ಐಕ್ಯ ಹೋರಾಟವೊಂದೆ ನಮಗುಳಿದಿರುವ ಏಕೈಕ ಮಂತ್ರ".

ನೆನ್ನೆ ದೆಹಲಿಯ ನರ್ಸ್‌ಗಳು, ಇಂದು ಆಂಧ್ರದ ಅಂಗನವಾಡಿ ಮಹಿಳೆಯರು, ನಾಳೆಯ ಬಲಿ ನಾವಾಗಬಹುದು ಇದನ್ನು ತಡೆಯಬೇಡವೇ? ನೀವೇ ಹೇಳಿ.

ಇತಿಹಾಸದ ಪುಟಗಳಿಂದ

ಪುಟ 2 ರಿಂದ

ಕಂಬದ ಅಡಿಯಲ್ಲಿಯೇ ಕುಳಿತು ವಿದ್ಯುತ್ತಿನ ನಿರೀಕ್ಷೆಯಲ್ಲಿಯೇ ಓದುವ ವಾಡಿಕೆ ಇತ್ತು.

ಇದ್ದಕ್ಕಿದ್ದಂತೆ ಒಂದು ದಿನ ನಾನು ಓದುವ ಕಂಬದ ದೀಪ ಹತ್ತಲೇ ಇಲ್ಲ. ಆ ಕಂಬ ಅಲುಗಾಡಿಸಿದರೆ ಸಾಕು. ದೀಪ ಹತ್ತುವ ಸಾಧ್ಯತೆ ಮತ್ತು ನಂದುವ ಸಾಧ್ಯತೆಗಳೂ ಇದ್ದುವು. ಏನೆಲ್ಲಾ ಮಾಡಿದರೂ ದೀಪ ಹತ್ತಲೇ ಇಲ್ಲ. ಬಲ್ಬು ಹೋಗಿದೆ ಎಂದು ಪಂಚಾಯತಿಗೆ ಹೋಗಿ ದೂರು ಸಲ್ಲಿಸಿದೆ. ಮಾರನೇ ದಿನ ದೀಪ ಹತ್ತಿತು. ರಾತ್ರಿ ಒಂದು ಗಂಟೆಯ ಸಮಯಕ್ಕೆ ನಿದ್ದೆ ಕಳೆಯಲೆಂದು ಹೀಗೆ ಸುತ್ತುತ್ತಾ ಹರಕು ಪರದೆಯ ಟೂರಿಂಗ್ ಟಾಕೀಸಿನ ಎಡೆಗೆ ಸುತ್ತಿ ಬಂದು ನಾಲ್ಕು ಐದು ಗಂಟೆಯವರೆಗೆ ಓದುವ ಅಭ್ಯಾಸವಿತ್ತು.

ಮತ್ತೆರಡು ದಿನಗಳಲ್ಲಿಯೇ ಮತ್ತೆ ಬಲ್ಬು ನಂದಿಹೋಯಿತು. ಹೀಗಾದಾಗ ಬುಡ್ಡಿ ಲ್ಯಾಂಪಿನ ಅಡಿಯಲ್ಲಿ ಓದುವದೂ ಬೇಸರವಾಗುತ್ತಿತ್ತು. ಆಗ ಹದಿನೈದು ದಿನಗಳಲ್ಲಿಯೇ ಹೀಗೆ ಮೂರು ಬಲ್ಬುಗಳು ಹೋದವು. ಪಂಚಾಯತಿಯ ಬಲ್ಬಿಗೆ ಸಂಬಂಧಿಸಿ ಅಧಿಕಾರಿಗಳಿಗೆಲ್ಲಾ ಸಲಾಮು ಹೊಡೆದು ಅಂಗಲಾಚಿ ಇನ್ನೊಮ್ಮೆ ಹಾಗೆ ಆಗದ ಹಾಗೆ ನೋಡುವೆ ಇದೊಂದು ಬಾರಿ ಬಲ್ಬು ಹಾಕಿ ಎಂದು ಬೇಡಿಕೊಂಡೆ

ಏನೋ ಹೀಂಗ ಹೇಳಾಕತ್ತ ಎಷ್ಟುಸರೆ ಆಯ್ತು ನೀ? ಓದ್ದೀಯೊ? ಕಂಬದ ಜೋಡಿ ಆಟಾ ಆಡ್ತೀಯಾ? ಎಂದರು ಚೇರಮನ್ನರು. ಇಲ್ಲಾ ಸರ್, ಆ ಕಂಬದಲ್ಲಿ ಲೈಟಿನ ವಾಯರ್ ಲೂಸ್ ಆಗಿದೆ ಅಂತಾ ಕಾಣ್ತಾದೆ. ಆ ವಾಯರ್ ಬಿಗಿ ಮಾಡಿಸಿ ಬಲ್ಬ ಹಾಕಿದರೆ ಸರಿಯಾಗಬಹುದು ಸರ್" ಎಂದೆ.

"ಕೆ.ಇ.ಬಿ. ಯವರ ಹತ್ತಿರ ಹೇಳು" ಎಂದರು.

ಕೆ.ಇ.ಬಿ. ಆಫೀಸ್ ಇನ್ನೂ ಬಂದಿರಲಿಲ್ಲ. ಅದರ ಕುರಿತು ಕೆದಕಿ ಬರಬೇಕಾದ ಒಂದು ಬಲ್ಬು ಕಳೆದುಕೊಳ್ಳುವದಕ್ಕೆ ಮನಸ್ಸು ಒಪ್ಪದೆ ಮೌನವಾಗಿದ್ದೆ. ಕೊನೆಗೆ ಅಧಿಕಾರ ವಾಣಿಯಿಂದ ಬಂದದ್ದು "ಏ ಇದೊಂದು ಸರೆ ಹಾಕಂತ ಹೇಳೋ"

ಎಂದು ಹೇಳಿದಾಗ ಅಲ್ಲಿಂದ ಬೆನ್ನು ತೋರಿದೆ. ಮರುದಿನ ಕಂಬದ ದೀಪ ಹತ್ತಿತು ಎಂದು ಸಂತಸ ಪಟ್ಟರೆ ಮತ್ತೊಂದು ದಿನ ಮತ್ತೊಂದು ಘಟನೆ!

ನಾನು ದಾರಿ ದೀಪದ ಅಡಿಯಲ್ಲಿ ಕುಳಿತು ಓದುವದು ಕೆಲವರಿಗೆ ಬೇಡವಾಗಿತ್ತು. ಅದರಲ್ಲೂ ಊರ ಶ್ರೀಮಂತರಿಗೆ ಪ್ರಾಣ ಸಂಕಟ ತಂದಿತ್ತು. ರಾತ್ರಿ ಸೂಳೆಗೇರಿಗೆ ಮೋಜು ಮಾಡಲು ಬರುವ ಈ ಜನ ನನ್ನನ್ನು ಅಲ್ಲಿಂದ ಕದಲಿಸಬೇಕು ಎನ್ನುವ ಉದ್ದೇಶ ಹೊಂದಿದ್ದವರಾಗಿದ್ದರು. ಎಷ್ಟೇ ವೇಷ ಮರೆಸಿಕೊಂಡು ಕೇರಿಗೆ ಬಂದರೂ ಅದು ಅಷ್ಟೇ ಬೇಗ ಕೇರಿಯಲ್ಲಿ ಜಾಹಿರಾಗುತ್ತಿತ್ತು. ನಡುರಾತ್ರಿಯಲ್ಲಿ ಕುಳಿತು ಓದುವ ನನ್ನ ಓದು ಊರವರಿಗೆ ಶಾಪವಾಗಿದ್ದರೂ, ಅವರು ಕೊಡುವ ಕಿರುಕುಳ ನನಗೆ ಇನ್ನಷ್ಟು ರಾತ್ರಿಯೇ ಓದುವಂತೆ ಪ್ರೇರೆಪಿಸುತ್ತಿತ್ತು. ಆಗ ನಾನು ಬಿ.ಎ. ಮೊದಲ ವರ್ಷದಲ್ಲಿ ಓದುತ್ತಿದ್ದೆ. ಪಿ.ಯು.ಸಿ. ಯಲ್ಲಿ ಒಂದು ವರ್ಷ ಲಾಗಹಾಕಿ ಮನೆಯಲ್ಲಿಯೇ ಕೊಳೆಯುತ್ತ ಕುಳಿತಿದ್ದರ ಪರಿಣಾಮದಿಂದಾಗಿ ರಾತ್ರಿ ಓದಿಗೆ ಬದ್ಧನಾಗಿದ್ದೆ. ಈಗಲೂ ಅಷ್ಟೇ ಹಗಲಿನ ಓದಿಗಿಂತ ರಾತ್ರಿಯ ಓದು ಹೆಚ್ಚು ಪ್ರಿಯವಾದುದು.


(ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣದಿಂದ)

★★★

ಮಹಾರಾಣಿ ಹೈ ಕಾಸ್ಟ್ ಗರ್ಲ್ಸ್ ಹೈಸ್ಕೂಲ್!!!

ಈ ಮಧ್ಯೆ ಮಹಾರಾಣಿ ಕಾಲೇಜಿನಲ್ಲಿ ಮುಂದೆ ಓದಬೇಕೆಂದು ಹೋದ ಇಬ್ಬರು ಹೆಣ್ಣು ಮಕ್ಕಳಿಗೂ ಅಲ್ಲಿ ಸ್ಥಳದೊರೆಯದೆ ಹೋಗಿ ತೀರ ಕಷ್ಟದ ದೆಸೆಯೇ ಬಂದಂತಾಯಿತು. ಮೊದಲು ಇವರನ್ನು ಶಾಲೆಗೆ ಸೇರಿಸಿದರಾದರೂ ಆ ಮೇಲೆ ಇವರು ಶೂದ್ರರೆಂದು ಗೊತ್ತಾದ ಮೇಲೆ ಶಾಲೆಯಲ್ಲಿ ಇರಿಸಿಕೊಳ್ಳದೆ ಮನೆಗೆ ಕಳುಹಿಸಿಬಿಟ್ಟರು. ಆಗ ಮಹಾರಾಣಿ ಶಾಲೆಗೆ ಮಹಾರಾಣಿ High Caste Girls School ಎಂದೇ ಹೆಸರಿತ್ತಂತೆ ಬ್ರಾಹ್ಮಣರಲ್ಲದವರಿಗೆ ಆ ಶಾಲೆಯಲ್ಲಿ ಸ್ಥಳ ಸಿಗುತ್ತಿರಲಿಲ್ಲ. ಸ್ಥಳ ಕೇಳಲು ಹೋದವರಲ್ಲಿ ನಮ್ಮ ತಂದೆಯ ತಂಗಿಯರೇ ಮೊದಲಿನವರು. ಅದುವರೆಗೆ ಯಾರಾದರೂ ಸ್ಥಳ ಕೇಳಲು ಹೋಗಿ ಇಲ್ಲವೆನಿಸಿಕೊಂಡು ಬಂದಿದ್ದರೊ ಇಲ್ಲವೊ ನನಗೆ ತಿಳಿಯದು. ನನ್ನ ಸೋದರತ್ತೆಯರಂತೂ ಇಲ್ಲ ಎನಿಸಿಕೊಂಡು ಬಂದು ಮನೆಯಲ್ಲಿ ಕುಳಿತರು. ಈ ಅನ್ಯಾಯವನ್ನು ತಡೆದುಕೊಂಡು ಸುಮ್ಮನಿರುವುದು ಅವರ ತಂದೆಗೆ ಆಗದೆಹೋಯಿತು. ಚೆನ್ನಿಗಪ್ಪನವರನ್ನು ಮುಂದೆಮಾಡಿಕೊಂಡು ಮುಖ್ಯರಾದವರನ್ನು ಕಂಡರು. ದೊಡ್ಡಗೊಂದಲ ವೆಬ್ಬಿಸಿದರು. ಬ್ರಾಹ್ಮಣರಲ್ಲದ ಹಿಂದುಳಿದವರ ಸ್ಥಾನಮಾನಗಳಿಗೆ ಹೊಡೆದಾಡಿ ಹೆಸರುಗಳಿಸಿದ್ದವರ ಸಹಾಯವನ್ನು ಪಡೆದುಕೊಂಡರು. ಈ ಎಲ್ಲ ಮಹನೀಯರುಗಳು ಶ್ರಮಿಸಿದುದರ ಫಲವಾಗಿ ಇತರ ಜಾತಿಯ ಹೆಣ್ಣು ಮಕ್ಕಳಿಗೂ ಮಹಾರಾಣಿ ಶಾಲೆ ಸೇರಲು ಅವಕಾಶ ದೊರೆಯಿತು. ಆಗಲೂ ಸಹ ಗೌರವಸ್ಥರಾದ ಹೆಣ್ಣುಮಕ್ಕಳನ್ನು ಮಾತ್ರ ಸೇರಿಸಬೇಕೆಂದು ಒಂದು ಷರಾ ಬೇರೆ ಸೇರಿಸಲಾಯಿತು. ನಮ್ಮ ಸೋದರತ್ತೆಯರನ್ನು ಗೌರವಸ್ಥ ರೆಂದು ಎಣಿಸಿದರೆಂದೇ ಕಾಣುತ್ತದೆ. ಅಂತೂ ಅಷ್ಟೆಲ್ಲ ಗಲಾಟೆಮಾಡಿದ ಮೇಲೆ ಶಾಲೆಯನ್ನು ಪ್ರವೇಶಿಸಿ ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ವಿದ್ಯಾರ್ಥಿವೇತನ ಕೂಡ ದೊರೆತುದರಿಂದ ಇದ್ದುದರಲ್ಲಿ ಸುಖಪಟ್ಟುಕೊಂಡು ಸಂಸಾರವನ್ನು ಹೇಗೊ ಸಾಗಿಸುತ್ತ ಹೋದರು.

(ರಾಧಾಕೃಷ್ಣರವರ 'ನನ್ನತಂದೆ' ಪುಸ್ತಕದಿಂದ)



ಸ್ವತಂತ್ರ್ಯ ಗಂಗೆಯ ವಿಶಿಷ್ಟ ತೊರೆಯೊಂದರ ಕಲಾತ್ಮಕ ಪರಿಚಯ

ಹಗಲು ವೇಷ

ಆರ್.ರಾಮಕೃಷ್ಣ

ಊರಿಂದೂರಿಗೆ ತಿರುಗುತ್ತಾ ಪುರಾಣಗಳ ಸ್ವಾರಸ್ಯಕರ ಕಥಾಭಾಗಗಳನ್ನು ಆಡಿ ತೋರಿಸುತ್ತಾ ಜನರು ಕೊಡುವುದಕ್ಕೆ ಜೋಳಿಗೆ ಹಿಡಿದು ಕಲೆಯನ್ನೇ ಬದುಕಾಗಿಸಿಕೊಂಡು ಬದುಕುವ 'ಹಗಲು ವೇಷದ ಪಂಗಡಕ್ಕೆ ಸೇರಿದ 'ರಾಮು'ಹಾಗೂ ಹಳ್ಳಿಗರು ಹೇಗೆ ಬ್ರಿಟಿಷ್ ಸುಲಿಗೆಯ ವಿರುದ್ಧ ಸಿಡಿದು ನಿಂತರು ಎಂಬುದನ್ನು ನಿರೂಪಿಸುವ ವಿಶಿಷ್ಟ ಚಲನಚಿತ್ರ "ಹಗಲು ವೇಷ".

ಬಹುತೇಕ ಅಜ್ಞಾತವಾಗಿಯೇ ಉಳಿದು ಹೋಗಬಹುದಾದಂತಹ ಸ್ವಾತಂತ್ರ್ಯಗಂಗೆಯ ಸಾವಿರಾರು ತೊರೆ'ಗಳಲ್ಲಿನ ವಿಶಿಷ್ಟ ಎಳೆಯೊಂದನ್ನು ಬರಗೂರು ರಾಮಚಂದ್ರಪ್ಪನವರ 'ಹಗಲು ವೇಷ' ಜನರಿಗೆ ಪರಿಚಯಿಸುತ್ತದೆ.

ಒಂದು ಪುಟ್ಟ ಹಳ್ಳಿಯ ಜನರ ಬದುಕು ಬ್ರಿಟಿಷರ ಆಳ್ವಿಕೆ - ಬ್ರಿಟಿಷರೊಂದಿಗೆ ಪಟೇಲ ಶ್ಯಾನುಭೋಗರ ಹೊಂದಾಣಿಕೆ-ಕಂದಾಯ ಕಟ್ಟಲಾಗದ ಜನರ ಬವಣೆ-ಕರನಿರಾಕರಣೆ-ಪೋಲೀಸರ ಬಲತ್ಕಾರ ದಬ್ಬಾಳಿಕೆ, ಇಂತಹ ಸನ್ನಿವೇಷದಲ್ಲಿ ಹಗಲುವೇಷದ ತಂಡ ಹಳ್ಳಿಯನ್ನು ಪ್ರವೇಶಿಸುತ್ತದೆ. ಕಂದಾಯ ವಸೂಲಿಯನ್ನು ಖಾತರಿಪಡಿಸಲು ಸ್ವತಃ ತಾನು ಹಳ್ಳಿಯಲ್ಲಿ ಮೊಕ್ಕಾಂ ಹೂಡಲು ಬರುವ ಬ್ರಿಟಿಷ್ ಜಿಲ್ಲಾಧಿಕಾರಿಗೆ ಸ್ವಾಗತಕೋರುವ ಸಂದರ್ಭದಲ್ಲಿ ಹಗಲು ವೇಷದ ಕಲಾವಿದರು 'ಶಿವ-ಪಾರ್ವತಿ' ವೇಷ ಧರಿಸಲು ವ್ಯವಸ್ಥೆಯಾಗಿರುತ್ತದೆ. ಜಿಲ್ಲಾಧಿಕಾರಿ ಹಗಲು ವೇಷದವರ ಕಲೆಯನ್ನು ಮೆಚ್ಚಿಕೊಳ್ಳುತ್ತಾನೆ. ಊರಿನ ಶಾಲೆಯ 'ಮೇಡಂ' ಬುದ್ದಿವಾದದಿಂದ ತಮ್ಮ ಕುಲಕಸುಬಾದ ಕಳ್ಳತನವನ್ನು ಬಿಟ್ಟು ದುಡಿದು ಬದುಕಲು ಪ್ರಯತ್ನಿಸುವ ರಂಗ ಮತ್ತಿತರರು ಕಂದಾಯ ಕಟ್ಟಲಾಗದೆ ಹಗಲು ವೇಷದ ರಾಮುವಿನ ಸಹಾಯ ಕೇಳುತ್ತಾರೆ. 'ಪರಂಗಿ ಪ್ರಭು'ವಿನ ಮುಂದೆ ಮತ್ತೊಮ್ಮೆ ತನ್ನ ಕಲೆಯನ್ನು ಪ್ರದರ್ಶಿಸುವ ರಾಮು ತನ್ನ ಗೆಳೆಯರ ಕಂದಾಯ ಮನ್ನಾ ಮಾಡಲು ಜಿಲ್ಲಾಧಿಕಾರಿಯನ್ನು ವಿನಂತಿಸುತ್ತಾನೆ. 'ಕಲೆ ಬೇರೆ-ಕಂದಾಯ ಬೇರೆ' ಎಂದು ಖಂಡತುಂಡವಾಗಿ ನಿರಾಕರಿಸುವ ಪ್ರಭು ಕೆಂಡಾ ಮಂಡಲವಾಗಿ ರಾಮುವನ್ನು ಅಪಮಾನಿಸುತ್ತಾನೆ. ತನ್ನ ಆತ್ಮಗೌರವಕ್ಕೆ ಪೆಟ್ಟು-ಕಲೆಗೆ ಅಪಮಾನವನ್ನು ಕಂಡ ರಾಮು ಸಂಗಡಿಗರು ಕ್ರಮೇಣ ಬ್ರಿಟೀಷರ ಸುಲಿಗೆಕೋರ ನೀತಿಯ ವಿರುದ್ಧ ತಿರುಗಿ ಬಿದ್ದು ಹಳ್ಳಿಯ ಜನರಿಗೆ ಹೇಗೆ ನೇತೃತ್ವ ಕೊಡುತ್ತಾರೆ ಎಂಬುದೇ ಚಿತ್ರದ ಕಥಾವಸ್ತು.

ಕಂದಾಯ ಕಟ್ಟಲಾರದ ರಂಗಾ ಸಂಗಡಿಗರು ಪಟೇಲನ ಮನೆಯಲ್ಲಿ ಕಳ್ಳತನಕ್ಕೆ ಹೋಗುತ್ತಾರೆ. ಪಟೇಲನ ಮಗಳ ಕೈಗೆ ಕಳ್ಳರು ಸಿಕ್ಕಿ ಬಿದ್ದರೂ, ಮಗಳೇ ಅವರ ಕಷ್ಟಕಂಡು ಹಣ ಕೊಟ್ಟುಕಳಿಸುತ್ತಾಳೆ. ಕಳ್ಳತನದ ಆರೋಪ ರಾಮುವಿನ ಮೇಲೆ ಬರುತ್ತದೆ. ವಿಚಾರಣೆಯ ಸಂದರ್ಭದಲ್ಲಿ ಆಕೆ ನಡೆದದ್ದು ಹೇಳಿ ರಾಮುವನ್ನು ರಕ್ಷಿಸುತ್ತಾಳೆ. ರಾಮುವಿನ ಕಲೆ, ರಾಮುವನ್ನು ಮೆಚ್ಚಿಕೊಂಡಿದ್ದ ಆಕೆಯಲ್ಲಿ ರಾಮು ಬಗ್ಗೆ ಪ್ರೀತಿ ಮೊಳೆತಿರುತ್ತದೆ.

ರಾಮುವಿನೊಂದಿಗೆ ಮಗಳ ಮುಂದುವರಿದ ಪ್ರೀತಿ ಕಂಡು ಕೋಪಗೊಂಡ ಪಟೇಲ ತನ್ನ ಮಗಳನ್ನು ಮನೆಯಿಂದ ಹೊರದೂಡುತ್ತಾನೆ. ಬ್ರಿಟೀಷರ ವಿರುದ್ಧ ಪ್ರತಿಭಟನೆಯ ಮನೋಬಾವ ರೂಪಿಸಲು ಶ್ರಮಿಸುತ್ತಿದ್ದ ಶಾಲೆಯ ಮೇಡಂ ಆಕೆಗೆ ಆಶ್ರಯ ನೀಡುತ್ತಾಳೆ. ಹಗಲು ವೇಷದ ತಂಡವನ್ನು ಊರಿನಿಂದ ಓಡಿಸಲಾಗುತ್ತದೆ.

ಸಂದರ್ಭ ಮೇಡಂ, ರಾಮು, ಪಟೇಲನ ಮಗಳು ಸೀತಾ ಎಲ್ಲರನ್ನು ಒಂದೆಡೆ ತರುತ್ತದೆ. ಕ್ರಾಂತಿಕಾರಿಗಳ ಸಂಪರ್ಕ ದೊರೆಯುತ್ತದೆ. ಬಂದೂಕು ಹಿಡಿದು - ಕುದುರೆ ಏರಿದ ರಾಮು- ಸಂಗಡಿಗರು ಸ್ವಯಂ ರಕ್ಷಣೆಗಾಗಿ ಶಸ್ತ್ರವನ್ನು ಕೈಗೆತ್ತಿಕೊಳ್ಳುತ್ತಾರೆ. ಕಂಡ ಕಂಡ ಹೆಣ್ಣು ಮಕ್ಕಳ ಮೇಲೆ ಕಣ್ಣು ಹಾಕುವ 'ಪರಂಗಿ ಪ್ರಭು' ತನ್ನ ತಂಗಿಯನ್ನು ಅಪಹರಿಸಿ ಅತ್ಯಾಚಾರಕ್ಕೆ ಯತ್ನಿಸುವ ಸಂದರ್ಭದಲ್ಲಿ ರಾಮು ಏಕಾಂಗಿಯಾಗಿ ಕಲೆಕ್ಟರನ ಪೊಲೀಸರನ್ನು ವಿರೋಧಿಸಿ ತಂಗಿಯನ್ನು ರಕ್ಷಿಸುತ್ತಾನೆ.

ಕ್ರಾಂತಿಕಾರಿ ರಾಮು ಅಡಗಿಕೊಳ್ಳಲು, ಪೊಲೀಸರಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದ ಮಹಿಳೆಯೊಬ್ಬಳಿಗೆ ಕಲೆಕ್ಟರ್ ತಾನು ಕಂಡ 'ದ್ರೌಪದಿ' ವಸ್ತ್ರಾಪಹರಣದ ಶಿಕ್ಷೆಯನ್ನು ವಿಧಿಸುತ್ತಾನೆ. ರಾಮುವಿನ ಸಾಹಸ ಹಾಗೂ ಜನರ ಬೆಂಬಲದಿಂದ ಮಹಿಳೆಯನ್ನು ರಕ್ಷಿಸಲಾಗುತ್ತದೆ. ರಾಮುವನ್ನು, ಕ್ರಾಂತಿಕಾರಿಗಳನ್ನು ಹಿಡಿಯಲು ಹಠತೊಡುವ ಕಲೆಕ್ಟರ್, ರಾಮುವಿನ ತಂದೆ ತಾಯಿಗಳನ್ನು ಬಹಿರಂಗವಾಗಿ ನೇಣಿಗೇರಿಸಲು ಆಜ್ಞೆ ಹೊರಡಿಸುತ್ತಾನೆ. ಸ್ವಾತಂತ್ರ್ಯ ಚಳುವಳಿಗೆ ಪ್ರೋತ್ಸಾಹ ನೀಡಿದ ಕಾರಣಕ್ಕೆ ಸಸ್ಪೆಂಡ್ ಆದ ಶಾಲೆಯ ಮೇಡಂ ಜಾಗಕ್ಕೆ ಬಂದ ಹೊಸ ಮಾಸ್ತರ್ ಖಾದರ್‌ಖಾನ್ ಈ ಸುದ್ದಿಯನ್ನು ರಾಮುವಿಗೆ ಮುಟ್ಟಿಸಿ ಪೊಲೀಸರ ಗುಂಡಿಗೆ ಬಲಿಯಾಗುತ್ತಾನೆ.

ಅಂತಿಮವಾಗಿ ನೇಣುಗಂಬವೇರಲಿದ್ದ ತನ್ನ ತಂದೆ ತಾಯಿಗಳ ರಕ್ಷಣೆಗಾಗಿ ಭೂಗತವಾಗಿದ್ದ ರಾಮು ಹಾಜರಾಗುತ್ತಾನೆ. ಬ್ರಿಟೀಷ್ ಅಧಿಕಾರಿಯ ವಿರುದ್ಧ ಜನ ತಿರುಗಿಬಿದ್ದು ತನ್ನ ನಾಯಕ ರಾಮುವಿನ ರಕ್ಷಣೆಗೆ ನಿಲ್ಲುತ್ತಾರೆ. ಸ್ವತಃ ತನ್ನ ಮಗಳ ಮೇಲೆ ತನ್ನ ಕಾಮದಾಹದ ಕಣ್ಣು ಹಾಯಿಸಿದ್ದ ಪರಂಗಿ ಪ್ರಭುವಿನ ಬಗೆಗೆ ಅಸಮಾಧಾನಗೊಂಡಿದ್ದ ಪಟೇಲ ಹಾಗೂ ಶ್ಯಾನುಭೋಗರು ಆಗ ತಿರುಗಿಬೀಳುತ್ತಾರೆ. ಜನರು ಪೊಲೀಸರನ್ನು ನಿಶಸ್ತ್ರಗೊಳಿಸುತ್ತಾರೆ. ಬ್ರಿಟೀಷ್ ಅಧಿಕಾರಿಯು ತಾನು ಬಂದ ದಾರಿಯಲ್ಲಿ ಹಾಗೆಯೇ ಹಿಮ್ಮೆಟ್ಟುತ್ತಾನೆ.

ಚಿತ್ರದಲ್ಲಿ ಹಗಲು ವೇಷದ ಕಲಾವಿದ ಬ್ರಿಟಿಷರ ವಿರುದ್ಧ ಹೋರಾಡುವ ಕ್ರಾಂತಿಕಾರಿಯಾಗಿ ಪರಿವರ್ತನೆಯಾಗುವ ಪಕ್ರಿಯೆ, ಈ ಪ್ರಕ್ರಿಯೆ ಪೂರಕವಾಗಿ ಜಾನಪದ ಕಲಾ ಪ್ರಕಾರವನ್ನು ಉತ್ತಮವಾಗಿ ಬಳಸಿಕೊಳ್ಳಲಾಗಿದೆ.

ಚಿತ್ರದ ನಿರ್ದೇಶನದಲ್ಲಿ ಮೊದಲ ಭಾಗದಲ್ಲಿರುವ ಬಿಗಿಯನ್ನು ಕೊನೆಯವರೆಗೆ ಉಳಿಸಿಕೊಳ್ಳುವುದು ಅಗತ್ಯವಿತ್ತು ಎನಿಸುತ್ತದೆ. ವಿಶೇಷವಾಗಿ ಒಬ್ಬ ಬ್ರಿಟಿಷ್ ಜಿಲ್ಲಾಧಿಕಾರಿಯ ಸಮ್ಮುಖದಲ್ಲಿ ಬ್ರಿಟಿಷರ ಪೊಲೀಸರಿಂದ ತಮ್ಮ ನಾಯಕನನ್ನು ರಕ್ಷಣೆ ಮಾಡಿಕೊಳ್ಳುವ ಜನರ ಕ್ರಿಯೆ ಇದು ಯಾಂತ್ರಿಕ ಕ್ರಿಯೆ ಅಥವಾ ಸಾಂಕೇತಿಕ ಕ್ರಿಯೆಯಂತೆ ಭಾಸವಾಗುತ್ತದೆ.

ಕಥೆ ಚಿತ್ರಕಥೆ ಚೆನ್ನಾಗಿದೆ. ಕೆಲವೊಮ್ಮೆ ಸಂಭಾಷಣೆಯಲ್ಲಿ ಮತ್ತೆ ಮತ್ತೆ ಬಂದಿದೆ ಎನಿಸಿದರೂ ಆ ಸಾಮಾನ್ಯ ಜನರ ಭಾಷೆಗಿಂತ ಮೇಲಟ್ಟದು ಎನಿಸಿದರೂ ಒಟ್ಟಾರೆಯಾಗಿ ಚೆನ್ನಾಗಿದೆ. ಚಿತ್ರದ ಹಾಡುಗಳು ಸೊಗಸಾಗಿದೆ. ಹಳ್ಳಿಯ ಪರಿಸರ ಛಾಯಾಗ್ರಹಣ, ಅಭಿನಯ ಚೆನ್ನಾಗಿದೆ. ಪ್ರೇಮ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಕಥೆಯನ್ನು ಬೆಸದ ಹತ್ತಾರು ಚಿತ್ರಗಳು ಬರುತ್ತಿದ್ದರು ಈ ಚಿತ್ರ ಈ ಎಲ್ಲವುಗಳ ನಡುವೆ ತನ್ನ ವೈಶಿಷ್ಟ್ಯತೆಯನ್ನು ಉಳಿಸಿಕೊಳ್ಳುವ ಚಿತ್ರವಾಗಿದೆ.



ಫುಟ್‌ಪಾತ್ ವ್ಯಾಪಾರಿಗಳಿಂದ ಬೇಡಿಕಳ ಈಡೇರಿಕೆಗಾಗಿ ನಗರಪಾಲಿಕೆ ಎದುರು ಪ್ರತಿಭಟನೆ

ಬೀದಿ ಬದಿಯ ಜನಕೆ ಬದುಕು ಕೊಡಿ

ಪುಟ 9 ರಿಂದ

ಪೋಲೀಸರೊಂದಿಗೆ ಮಾತುಕತೆಯಿದೆ ನೀವು ಬನ್ನಿ ಎಂದು ಹೇಳಿ ಹೋಗಿದ್ದರು. ತೆರೆಮರೆಯ ಮಾತುಕತೆ ಏನಾಗಿದ್ದವೋ ಗೊತ್ತಿಲ್ಲ ಪೋಲೀಸರು ವ್ಯಾಪಾರಿಗಳ ಸಮಸ್ಯೆಯ ಪರಿಹಾರಕ್ಕಾಗಿ ಪ್ರಾಮಾಣಿಕ ಪ್ರಯತ್ನ ನಡೆಸಿದ್ದ ಸಂಘಟನೆಯ ಮುಖಂಡರನ್ನೇ ಮಾತುಕತೆಗೆ ಆಹ್ವಾನಿಸಿರಲಿಲ್ಲ. ಆದರೂ ಪಟ್ಟು ಬಿಡದ ಮುಖಂಡರು ಮಾತುಕತೆ ನಡೆಯುವ ಸ್ಥಳಕ್ಕೆ ಹೋದಾಗ ಪೋಲೀಸರು ಇಲ್ಲಸಲ್ಲದ ಸಬೂಬು ಹೇಳಿದರು. ನಂತರ ಸರ್ಕಾರದಿಂದ ಆದೇಶವಾಗಿದೆ ಫುಟ್‌ಪಾತಿನಲ್ಲಿ ವ್ಯಾಪಾರ ಮಾಡಲು ಅವಕಾಶ ಕೊಡುವುದಿಲ್ಲ ಎಂದು ಹೇಳಿ ತಮ್ಮ ಗಂಟುಮೂಟೆಗಳೊಂದಿಗೆ ಜಾಗಖಾಲಿ ಮಾಡಲು ಮೂರ್‍ನಾಲ್ಕು ದಿನಗಳ ಗಡುವು ನೀಡಿದರು. ಉನ್ನತ ಪೊಲೀಸ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಸಂಘಟನೆಯ ಮುಖಂಡರು ಪರ್ಯಾಯ ವ್ಯವಸ್ಥೆ ಕಂಡು ಕೊಳ್ಳುವವರೆಗೆ ಕಿರುಕುಳ ನೀಡುವುದನ್ನು ತಪ್ಪಿಸಬೇಕೆಂದು ಆಗ್ರಹಿಸಿದರು.

ಬೆಂಗಳೂರು ಜಿಲ್ಲಾ ಫುಟ್‌ಪಾತ್ ವ್ಯಾಪಾರಿಗಳ ಸಂಘ ರಚನೆ

ಪ್ರಗತಿಪರ ಸಂಘಟನೆಯ ಪ್ರಾಮಾಣಿಕ ಮುಖಂಡರ ನೇತೃತ್ವದಲ್ಲಿ ಸಂಘಟಿತರಾಗಿ ಪ್ರತಿಭಟನೆಗಿಳಿಯಲು ಸಿದ್ಧರಾದ ವ್ಯಾಪಾರಿಗಳು 'ಬೆಂಗಳೂರು ಜಿಲ್ಲಾ ಫುಟ್‌ಪಾತ್ ವ್ಯಾಪಾರಿಗಳ ಸಂಘ' ರಚಿಸಿದರು. ವಿದೇಶಿ ಕಂಪನಿಗಳಿಗೆ ಹಣವಂತರಿಗೆ ಸಾಕಷ್ಟು ಅನುಕೂಲ ಒದಗಿಸಿ ಕೊಡುತ್ತಿರುವ ನಮ್ಮ ಸರ್ಕಾರಗಳು ಅವರಿಂದ ಬರಬೇಕಾದ ಭಾರೀ ತೆರಿಗೆಯನ್ನು ಸಹ ವಸೂಲು ಮಾಡದೇ ತೆರಿಗೆಗಳನ್ನು, ಬೆಲೆ ಏರಿಕೆಗಳ ಹೊರೆಯನ್ನು ಬಡಜನರ ಮೇಲೆ ಹೇರ ತೊಡಗಿದೆ. ಈ ಹೊರೆ ಯನ್ನು ತಾಳಲಾರದೆ ಬಾಗಿರುವ ಕಡು ಬಡವರ ಬೆನ್ನಿನ ಮೇಲೆ ಬಂಡೆ ಹೇರಲು ಹೊರಟಿರುವ ಸರ್ಕಾರದ ನೀತಿಯನ್ನು ವಿರೋಧಿಸಲು ಬಡ ಜನರೇ ಬೀದಿಗಿಳಿಯಬೇಕಾಗಿದೆ.

ವ್ಯಾಪಾರಿಗಳಿಗೆ ಆಸೆ ಹುಟ್ಟಿಸಿದ ನಗರ ಪಾಲಿಕೆ

ಬೆಂಗಳೂರು ನಗರದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು ಅನಕ್ಷರಸ್ಥರಲ್ಲದೆ ಅಲ್ಪಸ್ವಲ್ಪ ವಿದ್ಯೆ ಕಲಿತವರು ಕೂಡ ಉದ್ಯೋಗ ಸಿಗದೆ ಇಂದು ಬೀದಿ ಬದಿಯ ವ್ಯಾಪಾರವನ್ನು ಅವಲಂಬಿಸುವ ಸ್ಥಿತಿ ಬಂದಿದೆ.. ಇವರ ಸಮಸ್ಯೆಗಳನ್ನು ಮನಗಂಡು ಬೆಂಗಳೂರು ಮಹಾನಗರ ಪಾಲಿಕೆಯವರು ಇವರಿಗೆ ಪರ್ಯಾಯ ವ್ಯವಸ್ಥೆ ರೂಪಿಸುವುದಾಗಿ ಹೇಳಿ ಬೆಂಗಳೂರನ್ನು ನಾಲ್ಕು ವಲಯಗಳಾಗಿ ವಿಂಗಡಿಸಿ ನಾವು ಹೇಳಿದ ಸ್ಥಳಗಳಲ್ಲಿ ತಿಂಗಳಿಗೆ ರೂ .150 ರಂತೆ ಎರಡು ವರ್ಷಗಳ ಮುಂಗಡ ಕೊಟ್ಟು ವ್ಯಾಪಾರ ನಡೆಸಬೇಕೆಂದು ಸೂಚಿಸಿತು.

20 ರೂ.ಗಳ ಅರ್ಜಿಯನ್ನು ಕೊಟ್ಟಿದ್ದೇ ಬಂತು ವ್ಯಾಪಾರಿಗಳು ಪಾಲಿಕೆ ಸೂಚಿಸುವ ಸ್ಥಳಗಳಿಗಾಗಿ ಕಾಯುತ್ತ ಕುಳಿತಿದ್ದರೆ ಇತ್ತ ಪಾಲಿಕೆ ಅರ್ಜಿ ವಿತರಿಸುವ ನೆಪದಲ್ಲಿ ಹಣ ಸಂಗ್ರಹಿಸಿ ಈಗ ಕಣ್ಣು ಮುಚ್ಚಿ ಕುಳಿತಿದೆ.

ಪರ್ಯಾಯ ವ್ಯವಸ್ಥೆಯ ಗತಿ ಏನಾಯಿತು?

ಬೆಂಗಳೂರು ಮಹಾನಗರ ಪಾಲಿಕೆಯ ಪರ್ಯಾಯ ವ್ಯವಸ್ಥೆಯ ಗತಿ ಏನಾಯಿತೆಂದು ಪ್ರಶ್ನಿಸಲು ನಿರ್ಧರಿಸಿದ 'ಬೆಂಗಳೂರು ಜಿಲ್ಲಾ ಫುಟ್‌ಪಾತ್ ವ್ಯಾಪಾರಿಗಳ ಸಂಘ' ಮಾರ್ಚ್ 31 ರಂದು ನಗರ ಪಾಲಿಕೆ ಎದುರು ಪ್ರತಿಭಟನಾ ಧರಣಿ ನಡೆಸಿದರು. ಮೇಯರ್‌ರವರೊಂದಿಗೆ ಮಾತುಕತೆ ನಡೆಸಿದಾಗ ಆ ಬಗ್ಗೆ ಚರ್ಚೆ ನಡೆಯುತ್ತಿದ್ದು ಏಪ್ರಿಲ್ ತಿಂಗಳೊಳಗೆ ಒಂದು ನಿರ್ಧಾರಕ್ಕೆ ಬಂದು ಫುಟ್‌ಪಾತ್ ವ್ಯಾಪಾರಿಗಳಿಗೆ ಒಂದು ಸೂಕ್ತ ವ್ಯವಸ್ಥೆ ಕಲ್ಪಿಸುವುದಾಗಿ ಮೇಯರ್‌ರವರು ಆಶ್ವಾಸನೆ ನೀಡಿದ್ದಾರೆ. ಮೇಯರ್‌ರವರು ನೀಡಿರುವ ಆಶ್ವಾಸನೆಯನ್ನು ನಂಬಿ ಪರ್ಯಾಯ ವ್ಯವಸ್ಥೆಯ ಕನಸನ್ನು ಕಾಣುತ್ತ ಕುಳಿತ್ತಿದ್ದಾರೆ ಫುಟ್‌ಪಾತ್ ವ್ಯಾಪಾರಿಗಳು. ಕಾದು ನೋಡಬೇಕಿದೆ ಮುಂದೆ ಏನಾಗುತ್ತದೆ ಎಂದು. ಫುಟ್‌ಪಾತ್ ವ್ಯಾಪಾರಿಗಳ ಜೀವನದ ಅಥವಾ ಉದ್ಯೋಗದ ಪ್ರಶ್ನೆ ಎಂದು ಮಾತ್ರ ಪಾಲಿಕೆ ಇದನ್ನು ಪರಿಗಣಿಸಬಾರದು. ವ್ಯಾಪಾರಿಗಳಿಂದ ನಿತ್ಯೋಪಯೋಗಕ್ಕೆ ಹಲವು ವಸ್ತುಗಳನ್ನು ಕೊಳ್ಳುವ ಬೆಂಗಳೂರಿನ ಎ[illegible] ನಾಗರಿಕರ ಪ್ರಶ್ನೆ ಇದು. ಅಸಂಖ್ಯ ಪ್ರಮಾಣದ ಫುಟ್‌ಪಾತ್ ವ್ಯಾಪಾರಿಗಳು ಇಂದು ಮಾರುತ್ತಿರು[illegible] ಲಕ್ಷಾಂತರಲೇ ವಸ್ತುಗಳನ್ನು ಅಂಗಡಿಗಳ ಮೂಲ[illegible] ಪೂರೈಸಬೇಕೆಂದರೆ ಎಷ್ಟು ಸಾವಿರ ಅಂಗಡಿಗಳು ಬೇಕಾಗುತ್ತವೆ? ಈಗಾಗಲೇ ಕಿಕ್ಕಿರಿದಿರುವ ಇದ[illegible] ಬೇಕಾಗುವ ಕಟ್ಟಡಗಳನ್ನು ಹೊಂದಿಸಿಕೊಳ್ಳ[illegible] ಆಗುತ್ತದೆಯೇ? ಸುವ್ಯಸ್ಥಿತ ಕಟ್ಟಡಗಳ ಒಳಗೆ ಮಾ[illegible] ಅಂಗಡಿಗಳೆಂದರೆ ಆಗ ಧೀಡೀರನೆ ಅಂಗಡಿ[illegible] ಮುಂಗಡ, ಬಾಡಿಗೆ ಮುಂತಾದುವು ಆಕಾಶಕ್ಕೇರುತ್ತ[illegible] ಈ ವೆಚ್ಚವನ್ನು ಭರಿಸಲು ವ್ಯಾಪಾರಿಗಳು ವಸ್ತು[illegible] ಬೆಲೆ ಏರಿಸಬೇಕಾಗುತ್ತದೆ. ಈ ಏರಿದ ಬೆಲೆಯ[illegible] ಕೊಟ್ಟು ಬಡವರಿರಲಿ ಮಧ್ಯಮ ವರ್ಗದವರು ಕೂ[illegible] ಜೀವನ ಮಾಡಲಾಗುವುದಿಲ್ಲ. ಬೆಂಗಳೂರ[illegible] ನಾಗರಿಕರನ್ನು ಪ್ರತಿನಿಧಿಸುವ ಪಾಲಿಕೆ ನಾಗರಿ[illegible] ಒಟ್ಟು ಹಿತಕ್ಕಾಗಿಯಾದರೂ ಪರ್ಯಾಯ ವ್ಯ[illegible] ಮಾಡಬೇಕು.

ಬೀದಿ ಬದಿ ವ್ಯಾಪಾರಿಗಳಿಗೆ ಕೊಡವುದಾಗಿ ಹೇಳಿ ಕೊನೆಗೆ ಹಣವುಳ್ಳವರಿಗೆ ಹರಾಜು ಹಾಕಿದ ಮಹಾನಗರ ಪಾಲಿಕೆ ವಾಣಿಜ್ಯ ಸಂಕೀರ್ಣ



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ